# ಅಪ್ಪ ಕಾನೂನು ಮಾರ್ಗದರ್ಶಿನಿ

**ಸ್ಟೇನ್ಲಿ ಆರ್. ಡಿ'ಕೋಸ್ತ**

(ಎಸ್. ಆರ್. ಡಿ'ಕೋಸ್ತ)

**ಆಶ್ಲಿಂಗ್ ಪ್ರಕಾಶನ**

ವಿವೇಕಾನಂದ 2ನೇ ಅಡ್ಡ ರಸ್ತೆ, ನಂತೂರು,
ಕುಲಶೇಖರ ಅಂಚೆ, ಮಂಗಳೂರು – 575 005
ಫೋನ್: 0824–2225669, 9886311251
ಇಮೇಲ್ : costa.stanley@gmail.com

# ಅಷ್ಟ ಕಾನೂನು ಮಾರ್ಗದರ್ಶಿನಿ

**ಶ್ರೀ ಸ್ಟೇನ್ಲಿ ಆರ್.ಡಿ'ಕೋಸ್ತ** ಇವರು ರಚಿಸಿದ ಕಾನೂನಿನ ಸಂಕ್ಷಿಪ್ತ ಮಾಹಿತಿ ಪುಸ್ತಕ


| | | |
|---|---|---|
| ಪ್ರಥಮ ಪ್ರಕಟಣೆ | : | ನವೆಂಬರ್ 2013 (1000 ಪ್ರತಿಗಳು) |
| ಪ್ರಕಾಶಕರು | : | ಆಶ್ಲಿಂಗ್ ಪ್ರಕಾಶನ, ವಿವೇಕಾನಂದ 2ನೇ ರಸ್ತೆ, ನಂತೂರು, ಕುಲಶೇಖರ ಅಂಚೆ, ಮಂಗಳೂರು. |
| ಕಾಪಿರೈಟ್ಸ್ | : | ಲೇಖಕರು |
| ಫೋನ್ | : | 0824-2225669, 9886311251 |
| ಇಮೇಲ್ | : | costa.stanley@gmail.com |


## ASHTA KAANOON MAARGADARSHINI

Legal information of Indian Laws by ***Stanley R.D'Costa**, B.Com, LL.B.*


| | | |
|---|---|---|
| Published by | : | ASHLING PUBLICATIONS<br>Vivekananda 2nd Cross,<br>Nanthoor, Kulshekar Post,<br>Mangalore-575005. |
| Phone | : | 0824-2225669, 9886311251 |
| e-mail | : | costa.stanley@gmail.com |
| Copyright | : | Stanley R.D'Costa |
| Price | : | Rs.150/- |
| First Edition | : | November, 2013 |
| Number of copies | : | 1000 |
| Pages | : | 96+4 |
| Paper used | : | 70 GSM Maplitho |
| Printed by | : | Assisi Press, Bejai, Mangalore - 575 003<br>Ph: 0824-2492816, 4262816 |

# ಬೆಳಕಿನ ಕಿರಣಗಳು

1. ಮುನ್ನುಡಿ ........................................ 4

2. ಪೀಠಿಕೆ ........................................ 6

3. ವಿಮರ್ಶಾತ್ಮಕ ವಿಶ್ಲೇಷಣೆ ........................................ 8

4. ಕೌಟುಂಬಿಕ ನ್ಯಾಯಾಲಯದ ಕಾನೂನು ........................................ 15

5. ಮಾನವ ಹಕ್ಕುಗಳು ........................................ 33

6. ಮೋಟಾರು ವಾಹನ ಅಧಿನಿಯಮ ........................................ 43

7. ಪರಿಸರ ಸಂರಕ್ಷಣ ಕಾನೂನು ........................................ 56

8. ಪಾಲಕ ಮತ್ತು ರಕ್ಷಕ ಕಾನೂನು ........................................ 62

9. ಕಾನೂನು ರೀತ್ಯಾ ಹೆಸರು ಬದಲಾವಣೆ ........................................ 67

10. ಮಾನಸಿಕ ಆರೋಗ್ಯ ಕಾಪಾಡುವ ಬಿಲ್ ........................................ 71

11. ಭಾರತೀಯ ದಂಡ ಕಾನೂನು ........................................ 73

# ಮುನ್ನುಡಿ

## 'ಅಷ್ಟ ಕಾನೂನು ಮಾರ್ಗದರ್ಶಿನಿ'.. ಎಲ್ಲರಿಗೂ 'ಇಷ್ಟ ಕಾನೂನು ಮಾರ್ಗದರ್ಶಿನಿ'ಯಾಗಲಿ...

ಇಂದಿನ ಆಧುನಿಕ ಯುಗದಲ್ಲಿ ಕಾನೂನಿನ ಅರಿವು ಜನಸಾಮಾನ್ಯರಿಗೆ ಅತೀ ಅವಶ್ಯಕ. ಕಾನೂನು ಎಲ್ಲಾ ನಾಗರಿಕರಿಗೂ ಸಮಾನವಾಗಿ ಅನ್ವಯವಾಗುತ್ತದೆ. ಆ ಪ್ರಕಾರ ಎಲ್ಲರನ್ನೂ ಪ್ರತಿಬಂಧಿಸುವುದು ಕಾನೂನಿನ ಗುಣ. ಆ ಬಗ್ಗೆ ಅರಿವಿರಲಿ ಇಲ್ಲದಿರಲಿ ತನ್ನ ಪ್ರತಿಬಂಧಕ ಶಕ್ತಿಯನ್ನು ಅದೆಂದೂ ಬಿಟ್ಟು ಕೊಡುವುದಿಲ್ಲ. ಕಾನೂನು ರೀತ್ಯಾ ಅನುಸರಿಸಬೇಕಾದ ಒಂದು ಅವಶ್ಯ ವಿಚಾರದ ಬಗ್ಗೆ 'ಹಾಗೆ ಮಾಡಬೇಕೆಂದು ತನಗೆ ಗೊತ್ತಿರಲಿಲ್ಲ' ಎಂದು ಹೇಳಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. Ignorance of law is no excuse- ಎಂಬುದು ನ್ಯಾಯಶಾಸ್ತ್ರದಲ್ಲಿ ಬರುವ ಮಾತು. ಆದುದರಿಂದ, ಸಮಾಜದಲ್ಲಿ ಪ್ರತಿಯೊಬ್ಬನೂ ಕಾನೂನಿನ ಮೂಲಭೂತ ಲಕ್ಷಣಗಳ ಅರಿವನ್ನು ಹೊಂದಿರುವುದು ಅನಿವಾರ್ಯವಾಗಿದೆ.

ದೈನಂದಿನ ಜೀವನದಲ್ಲಿ ಎದುರಾಗುವ ಸಾಮಾನ್ಯ ವಿಚಾರಗಳಿಗೆ ಸಂಬಂಧಿಸಿದ ಕಾನೂನು ವಿಷಯಗಳನ್ನು ಜನರ ಬೌದ್ಧಿಕ ಮಟ್ಟಕ್ಕಿಳಿಸಿ, ಅವರಿಗೆ ಸರಳ ಕ್ರಮದಲ್ಲಿ ಬೋಧ್ಯಪಡಿಸುವ ನಿಟ್ಟಿನಲ್ಲಿ ಹೇರಳ ಕ್ರಮಗಳು ನಡೆಯಬೇಕಾಗಿರುವುದು ಕಾಲದ ಅವಶ್ಯಕತೆಯಾಗಿದೆ. ಒಂದೊಂದು ಪ್ರದೇಶಕ್ಕೆ ಸಂಬಂಧಿಸಿದಂತೆ ಕಾನೂನು ಮಾಹಿತಿ ಶಿಬಿರಗಳನ್ನು ನಡೆಸುವುದು, ಕಾನೂನಿನ ಉಪಬಂಧಗಳ ಬಗ್ಗೆ ರೇಡಿಯೋ, ದೂರದರ್ಶನದಂಥ ಮಾಧ್ಯಮಗಳಲ್ಲಿ ಉಪನ್ಯಾಸಗಳನ್ನು ನೀಡುವುದು, ವಾರ್ತಾಪತ್ರಿಕೆಗಳಲ್ಲಿ ಕಾನೂನಿನ ಬಗ್ಗೆ ಲೇಖನಗಳನ್ನು ಪ್ರಕಟಿಸುವುದು, ನಿಯತಕಾಲಿಕಗಳು, ಮಾಹಿತಿ ಪತ್ರಗಳು, ಪುಸ್ತಕ ಇತ್ಯಾದಿಗಳನ್ನು ಪ್ರಕಟಿಸಿ ಪ್ರಸಾರಗೊಳಿಸುವುದು ಇತ್ಯಾದಿಗಳ ಮೂಲಕ ಕಾನೂನಿನ ಸಾಮಾನ್ಯ ಜ್ಞಾನವನ್ನು ಜನಮಾನಸಕ್ಕೆ ತಲುಪಿಸುವ ಕಾರ್ಯ ಮಾಡಬಹುದು. ನನ್ನ ನ್ಯಾಯವಾದಿ ಸನ್ಮಿತ್ರರಾದ ಸ್ಟೇನ್ಲಿ ಆರ್. ಡಿ'ಕೋಸ್ತರವರು ಈ ನಿಟ್ಟಿನಲ್ಲಿ ತಮ್ಮ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಉತ್ತಮ ಬರಹಗಾರರೂ, ಅನುಭವಿಗಳೂ, ಶ್ರಮಜೀವಿಯೂ, ಮಾನವತಾಹಿತವಾದಿಯೂ ಆಗಿರುವ ಅವರು ಈಗಾಗಲೇ ಕಾನೂನು ಮಾಹಿತಿಯ ಬಗ್ಗೆ ಅನೇಕ ಪುಸ್ತಕಗಳನ್ನು ಬರೆದಿರುತ್ತಾರೆ. ಕರ್ನಾಟಕದ ಬಹುತೇಕ ಜನರಿಗೆ ಅರ್ಥವಾಗುವ ಕಸ್ತೂರಿ ಕನ್ನಡ ಭಾಷೆಯಲ್ಲಿ ಈ ಪುಸ್ತಕ ರಚಿಸಿದ್ದು ನಿಜಕ್ಕೂ ಪ್ರಸ್ತುತ ಹಾಗೂ ಸ್ತುತ್ಯಾರ್ಹವೇ ಸರಿ.

ಈ ಪುಸ್ತಕವನ್ನು ಆಮೂಲಾಗ್ರ ಪರಿಶೀಲಿಸಿದಾಗ, ಸ್ಟೇನ್ಲಿ ಆರ್. ಡಿ'ಕೋಸ್ತರವರು ತಾವು ಈ ಪುಸ್ತಕ ರಚಿಸಲು ಪಟ್ಟ ಕಷ್ಟದ ಸ್ಪಷ್ಟ ಅರಿವಾಯಿತು. ಬಹಳಷ್ಟು ವಿಚಾರಗಳು ಅಡಗಿರುವ ಕೆಲವು ಪ್ರಧಾನ ಕಾನೂನುಗಳಲ್ಲಿ ಸಾಮಾನ್ಯ ಜನರ ದೈನಂದಿನ ಜೀವನದ ಹಾದಿಯಲ್ಲಿ ನಿರಂತರ ಎದುರಾಗುವ ಸಮಸ್ಯೆಗಳಿಗೆ ಸಂಬಂಧಿಸಿದ ಅವಶ್ಯಕ ವಿಚಾರಗಳನ್ನು ಹೆಕ್ಕಿ ತೆಗೆದು, ಅದನ್ನು ಮತ್ತಷ್ಟೂ ಸರಳಗೊಳಿಸಿ ಈ ಪುಸ್ತಕದ ರೂಪದಲ್ಲಿ ಅವರು ಜನರಿಗೆ ನೀಡಿದ್ದಾರೆ. ಈ ಪುಸ್ತಕದ ಹೆಸರೇ ಹೇಳುವಂತೆ **(ಅಷ್ಟ ಕಾನೂನು ಮಾರ್ಗದರ್ಶಿನಿ)**, ಇದು

ಎಂಟು ಪ್ರಧಾನ ಕಾನೂನುಗಳಿಂದ (ಅಷ್ಟ ಕಾನೂನು) ಕೂಡಿದ್ದು, ಜನರಿಗೆ ಮಾರ್ಗದರ್ಶನ ನೀಡುವಲ್ಲಿ (ಮಾರ್ಗದರ್ಶಿನಿ) ಪ್ರಮುಖ ಪಾತ್ರವಹಿಸುತ್ತದೆ. ಇದರಲ್ಲಿ ಒಳಗೊಂಡಿರುವ ಕೌಟುಂಬಿಕ ನ್ಯಾಯಾಲಯದ ಕಾನೂನು, ಮಾನವ ಹಕ್ಕುಗಳು, ಮೋಟಾರು ವಾಹನ ಅಧಿನಿಯಮ, ಪರಿಸರ ಸಂರಕ್ಷಣ ಕಾನೂನು, ಪಾಲಕ ಮತ್ತು ರಕ್ಷಕ ಕಾನೂನು, ಕಾನೂನು ರೀತ್ಯಾ ಹೆಸರು ಬದಲಾವಣೆ, ಮಾನಸಿಕ ಆರೋಗ್ಯ ಕಾಪಾಡುವ ಬಿಲ್, ಭಾರತೀಯ ದಂಡ ಕಾನೂನು ಎಂಬ ಎಂಟು ಕಾನೂನುಗಳು ಜನರ ದೈನಂದಿನ ಜೀವನದಲ್ಲಿ ನಿರಂತರ ಪ್ರಯೋಗಕ್ಕೆ ಬರುತ್ತದೆ. ಅದರ ಬಗ್ಗೆ ಜನರಿಗೆ ತಿಳುವಳಿಕೆ ಹೇಳಬೇಕಾದ ಅವಶ್ಯಕತೆ ಇದೆ.

ಕಾನೂನುಗಳು ಜನರಿಗೆ ಮಾರ್ಗದರ್ಶಕವಾಗಿರಬೇಕೇ ಹೊರತು ಹಾದಿ ತಪ್ಪಿಸುವಂತಿರಬಾರದು. ಜಟಿಲತೆಯನ್ನು ಸರಳೀಕರಿಸಿ ಸ್ಪಷ್ಟವಾದ ಭಾಷೆಯಲ್ಲಿ ಇಡಿಯ ಉಪಬಂಧದ ತಿರುಳನ್ನು ಮಾತ್ರವೇ ಜನರಿಗೆ ತಿಳಿಯಪಡಿಸಿದಾಗ, ವಿಷಯಗಳು ಓದುಗರಿಗೆ ಸುಲಭವಾಗಿ ತಿಳಿಯುತ್ತವೆ. ಇಂತಹ ಕಾರ್ಯ ಮಾಡುವವರೇ ವಿರಳವಾಗಿರುವ ಈ ಕಾಲದಲ್ಲಿ ತನ್ನ ಅಮೂಲ್ಯ ಸಮಯವನ್ನು ಮೀಸಲಿಟ್ಟು, ತನ್ನ ಜ್ಞಾನ ಭಂಡಾರ ಹಾಗೂ ಅನುಭವದಾಳವನ್ನು ಜೊತೆಗೂಡಿಸಿ ಈ ಕಾರ್ಯವನ್ನು ಸಾಧಿಸಲು ಸನ್ಮಿತ್ರರಾದ ಸ್ಟೇನ್ಲಿ ಆರ್. ಡಿ'ಕೋಸ್ತರು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದು ಈ ಪುಸ್ತಕದಲ್ಲಿ ಸ್ಪಷ್ಟವಾಗಿ ಗೋಚರಕ್ಕೆ ಬರುತ್ತದೆ. ಇದರಲ್ಲಿ ನಮೂದಿಸಿರುವ ವಿಚಾರಗಳೆಲ್ಲಾ ಕಾನೂನಿನ ಅರಿವಿಲ್ಲದವರಿಗೆ ನಿಜಕ್ಕೂ ಮಾರ್ಗದರ್ಶಿಕೆ ಆಗಬಲ್ಲುದು ಎನ್ನುವ ನಂಬಿಕೆ ನನಗಿದೆ.

ಇದೊಂದು ಮಹತ್ವದ ಹಾಗೂ ಉತ್ತಮ ಕಾರ್ಯವೂ ಹೌದು. ಇದನ್ನು ಸ್ಟೇನ್ಲಿ ಆರ್. ಡಿ'ಕೋಸ್ತರು ಆರ್ಥಿಕ ಲಾಭಗಳಿಸಲೆಂದೋ ಪ್ರಚಾರ ಲಭಿಸಲೆಂದೋ ಮಾಡಿರುವುದಿಲ್ಲ. ಕಾನೂನಿನ ಜ್ಞಾನವಿಲ್ಲದವರಿಗೆ ಒಂದು ಆಸರೆಯಾಗಬೇಕೆನ್ನುವ ಉದ್ದೇಶದಿಂದ ಪ್ರಾಮಾಣಿಕ ಹಾಗೂ ನಿಸ್ವಾರ್ಥ ಭಾವದಿಂದ ಅವರು ಈ ಸತ್ಕಾರ್ಯ ಮಾಡಿರುತ್ತಾರೆನ್ನುವುದು ಸ್ಪಷ್ಟ. ಆದ್ದರಿಂದ, ಈ ಪುಸ್ತಕ ಒಂದು ಉತ್ಕೃಷ್ಟ ಕೃತಿಯಾಗಿ ರೂಪುಗೊಂಡು ಈ ಅಷ್ಟ ಕಾನೂನು ಮಾರ್ಗದರ್ಶಿನಿ ಎಲ್ಲರಿಗೂ ಇಷ್ಟ ಕಾನೂನು ಮಾರ್ಗದರ್ಶಿನಿಯಾಗಿ ಮಾರ್ಪಟ್ಟು ಜನರ ಕಷ್ಟವನ್ನು ನೀಗಿಸಿ, ಬಹಳಷ್ಟು ಜನ ಇದರ ಸದುಪಯೋಗವನ್ನು ಪಡೆಯುತ್ತಾರೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಕೃತಿಯ ಕರ್ತೃ ಸ್ಟೇನ್ಲಿ ಆರ್. ಡಿ'ಕೋಸ್ತರವರಿಂದ ಕಾನೂನಿನ ಮಾಹಿತಿಯ ಬಗ್ಗೆ ಇನ್ನಷ್ಟೂ ಕೃತಿಗಳು ಹೊರಬರಲಿ ಹಾಗೂ ಭಗವಂತನು ಅವರಿಗೆ ಜನಸ್ನೇಹಿ ಕೆಲಸ ನೆರವೇರಿಸಲು ಹೆಚ್ಚಿನ ಅವಕಾಶ ಮತ್ತು ಉತ್ತಮ ಆರೋಗ್ಯವನ್ನು ಕರುಣಿಸಲಿ ಎಂದು ಆಶಿಸುತ್ತೇನೆ.



**ಎಂ. ಸೀತಾರಾಮ ಶೆಟ್ಟಿ**
*ಹಿರಿಯ ವಕೀಲರು, ಮಂಗಳೂರು.*

# ಪೀಠಿಕೆ

ರಾಷ್ಟ್ರದ ಸರಕಾರಿ ಯಂತ್ರವು ಸಾಮಾನ್ಯ ನಾಗರಿಕರಿಗೆ ಕಾನೂನಿನ ಅರಿವು ತಿಳಿಹೇಳಲು ಎಷ್ಟೇ ಪ್ರಯತ್ನ ಪಟ್ಟರೂ ನಾಗರಿಕರು ಸರಕಾರದ ಈ ಯತ್ನಕ್ಕೆ ಸ್ಪಂದಿಸದೇ ಇದ್ದಲ್ಲಿ ಸರಕಾರದ ಯಾವುದೇ ಪ್ರಯತ್ನ ಫಲಕಾರಿಯಾಗದು. ದೈನಂದಿನ ವ್ಯವಹಾರಗಳಿಗೆ ಅವಶ್ಯಕವಾದ ಸಾಮಾನ್ಯ ಕಾನೂನು ಜ್ಞಾನ ಇಲ್ಲದ ನಾಗರಿಕನನ್ನು ಕಾನೂನು ರಕ್ಷಕರಾಗಲೀ, ನ್ಯಾಯವಾದಿಗಳಾಗಲಿ ನೀರು ಕುಡಿದಂತೆ ಸುಲಭವಾಗಿ ಸುಲಿಗೆ ಮಾಡಬಲ್ಲರು. ಈ ನಿಟ್ಟಿನಲ್ಲಿ ಅಳಿಲ ಸೇವೆ ಮಾಡಲು ಹೊರಟ ನಾನು ಈ ಕಾರ್ಯದ ಅಂಗವಾಗಿ ಮೊದಲು ನನ್ನ ಮಾತೃ ಭಾಷೆ ಕೊಂಕಣಿಯಲ್ಲಿ ಕಳೆದ 5 ವರ್ಷಗಳಿಂದ ವಾರ್ತಾ ಪತ್ರಿಕೆಗಳಲ್ಲಿ ದೇಶದ ಕಾನೂನುಗಳಿಗೆ ಸಂಬಂಧಿಸಿದ ವಿಷಯಗಳನ್ನು ಬರೆಯುತ್ತಿದ್ದೇನೆ. 30 ಕಾನೂನುಗಳನ್ನೊಳಗೊಂಡ 3 ಪುಸ್ತಕಗಳನ್ನು ಅಂತೆಯೇ ಕಾನೂನಿಗೆ ಸಂಬಂಧಿಸಿದ 120 ವಿಷಯಗಳನ್ನೊಳಗೊಂಡ ಒಂದು ಪುಸ್ತಕವನ್ನು ಬರೆದು ಈಗಾಗಲೇ ಪ್ರಕಟಿಸಿರುತ್ತೇನೆ.

ನನ್ನ ಮಾತೃಭಾಷೆಯಾದ ಕೊಂಕಣಗಿಂತಲೂ ಸಾಮಾನ್ಯ ಮಾತೃಭಾಷೆ ಕನ್ನಡದಲ್ಲಿ ಪುಸ್ತಕಗಳನ್ನು ಬರೆದಲ್ಲಿ 90 ಪ್ರತಿಶತ ಹೆಚ್ಚು ಸಾಮಾನ್ಯ ನಾಗರಿಕರಿಕರು ಅದರ ಪ್ರಯೋಜನ ಪಡೆದು ಅದರಿಂದಾಗಿ ಅವರಲ್ಲಿ ಕಾನೂನಿನ ಅರಿವು ಮೂಡಲು ಸಾಧ್ಯವಿದೆ ಎಂದು ಮನಗಂಡ ನಾನು ಈ ದಿಶೆಯಲ್ಲಿ ನನ್ನ ಈ ಚೊಚ್ಚಲ **'ಅಷ್ಟ ಕಾನೂನು ಮಾರ್ಗದರ್ಶಿನಿ'** ಪುಸ್ತಕವನ್ನು ಕನ್ನಡದಲ್ಲಿ ಬರೆದು ನಿಮ್ಮ ಕೈಯಲ್ಲಿರಿಸಿದ್ದೇನೆ.

ಕೌಟುಂಬಿಕ ಸಮಸ್ಯೆಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ದಾಂಪತ್ಯ ಸಾಮರಸ್ಯವನ್ನು ಕಾಪಾಡಿಕೊಂಡು ಹೋಗಲು ಇಂದಿನ ಯುವ ದಂಪತಿಗಳು ನೆನಪಿನಲ್ಲಿಡಬೇಕಾದ ಪ್ರಮುಖ ಸೂತ್ರಗಳಾವುವು? ದಂಪತಿಗಳು ವಿಚ್ಛೇದನ ಬಯಸಿದಲ್ಲಿ ಕೌಟುಂಬಿಕ ನ್ಯಾಯಾಲಯದ ಪಾತ್ರವೇನು?

ಪರಿಸರ ಮಾಲಿನ್ಯಗೊಂಡರೆ ಜೀವಿಗಳ ಸರ್ವನಾಶ ಖಂಡಿತ. ಪರಿಸರ ಸಂರಕ್ಷಿಸಲು ಸರಕಾರ ರಚಿಸಿರುವ ಸೂತ್ರಗಳು ಮತ್ತು ನಮ್ಮ ಕರ್ತವ್ಯಗಳಾವುವು? ದೇಶದ ನ್ಯಾಯಾಲಯಗಳು ಪರಿಸರದ ಬಗ್ಗೆ ತೋರಿಸಿರುವ ಕಾಳಜಿಯೇನು?

ಅಂತರಾಷ್ಟ್ರೀಯ ಒಡಂಬಡಿಕೆಗಳಿಂದಾಗಿ, ವಿವಿದ ರಾಷ್ಟ್ರಗಳಲ್ಲಿ, ಸಾರ್ವಜನಿಕರಲ್ಲಿ ಜೀವಿಸುವ, ಸ್ವಾತಂತ್ರ್ಯದ ಮತ್ತು ಭದ್ರತೆಯ ಅರಿವು ಮೂಡಿರುವುದರಿಂದ ಮಾನವ ಹಕ್ಕುಗಳ ಉಲ್ಲಂಘನೆಯಾದಾಗ ಸಮಾಜ ತಲ್ಲಣಗೊಳ್ಳುತ್ತದೆ. ಭಾರತ ದೇಶದಲ್ಲಿ ಮಾನವ ಹಕ್ಕುಗಳ ರಕ್ಷಣೆಗಾಗಿ ರಾಜ್ಯ ಮತ್ತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಕಾರ್ಯಪ್ರವೃತ್ತವಾಗಿದೆ ಇವುಗಳ ಅಧಿಕಾರ ಮತ್ತು ಕಾರ್ಯವ್ಯಾಪ್ತಿಯೇನು?

ಮೋಟಾರು ವಾಹನ ಚಾಲನಾ ಪರವಾನಿಗೆ, ವಾಹನಗಳ ನೋಂದಣಿ, ಮೋಟಾರು ವಾಹನಗಳ ಪ್ರಾಧಿಕಾರದ ಅಧಿಕಾರ, ವಿಮೆ, ವಾಹನ ಅಪಘಾತಕ್ಕೊಳಗಾದಾಗ ಸಾರ್ವಜನಿಕರ/ಪೋಲಿಸರ ಕರ್ತವ್ಯಗಳು, ನ್ಯಾಯಾಲಯದಲ್ಲಿ ಗಾಯಳು ಅಥವಾ ಮೃತನ ವಾರಿಸುದಾರರು ಪರಿಹಾರಕ್ಕೆ ಅರ್ಜಿ ದಾಖಲಿಸುವ ವಿಧಾನಗಳೇನು?

ಯಾವ ಅಪರಾಧವೆಸಗಿದರೆ ಯಾವ ಶಿಕ್ಷೆ ವಿಧಿಸಲಾಗುತ್ತದೆ ಎಂಬ ಅತ್ಯಲ್ಪ ಜ್ಞಾನವಿದ್ದರೂ ಜನಸಾಮಾನ್ಯರನ್ನು ಸುಲಭವಾಗಿ ಸುಲಿಗೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಅಂಥಾ ಅಪರಾಧಗಳ ಅರ್ಥವಿವರಣೆಗಳೇನು?

ಅಪ್ರಾಪ್ತ ವಯಸ್ಕನ ಜೀವಕ್ಕೆ ಮತ್ತು ಆಸ್ತಿಗೆ ಪಾಲಕ ಮತ್ತು ರಕ್ಷಕರ ನೇಮಕಾತಿಗೆ ಸಂಬಂಧಿಸಿ ಬಗ್ಗೆ ನ್ಯಾಯಾಲಯದ ಅಧಿಕಾರಗಳೇನು? ಎಂಬಿತ್ಯಾದಿ ವಿಷಯಗಳನ್ನು ಸಂಕ್ಷಿಪ್ತವಾಗಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ವಿವರಣೆ ನೀಡಲು ಈ ಪುಸ್ತಕದಲ್ಲಿ ಪ್ರಯತ್ನಿಸಿದ್ದೇನೆ.

ನಾನು ಬರೆದ ಕೊಂಕಣಿ ಕಾನೂನು ಪುಸ್ತಕಗಳನ್ನು ಕಳೆದ 4 ವರ್ಷಗಳಲ್ಲಿ ಜನರು ಖರೀದಿಸಿ ಉತ್ತಮ ರೀತಿಯ ಸಹಕಾರ ನೀಡಿದ್ದಾರೆ. ನನ್ನಂತಹ ಉದಯೋನ್ಮುಖ ಲೇಖಕರಿಗೆ ಕನ್ನಡಿಗರಿಂದ ಭರವಸೆಯ ಸಹಕಾರ ಸಿಕ್ಕಿದಲ್ಲಿ ಸಮಾಜಕ್ಕೆ ಇನ್ನಷ್ಟೂ ಹೆಚ್ಚಿನ ಸೇವೆಯನ್ನು ಸಲ್ಲಿಸಲು ನನ್ನಿಂದಾಗಬಹುದು ಎಂಬ ವಿಶ್ವಾಸದಿಂದ...

ಈ ಪುಸ್ತಕ ಬಿಡುಗಡೆ ಸಂಧರ್ಭದಲ್ಲಿ ಹಾಜರಿರುವ ನನ್ನ ಆತ್ಮೀಯರಾದ

**ಸ್ಟೇನ್ಲಿ ಆರ್. ಡಿ' ಕೋಸ್ತ, ಲೇಖಕರು**

*ವಕೀಲರು, ನೋಟರಿ ಪಬ್ಲಿಕ್ ಮತ್ತು*

*ಕ್ರಿಶ್ಚಿಯನ್ ವಿವಾಹ ನೋಂದಣಾಧಿಕಾರಿ*

*ಮಂಗಳೂರು, ದ.ಕ.*

# ವಿಮರ್ಶಾತ್ಮಕ ವಿಶ್ಲೇಷಣೆ

**ಕೌಟುಂಬಿಕ ಕಾನೂನು:** ಗಂಡು, ಹೆಣ್ಣು ದೇಹದಲ್ಲಿ ಬೇರೆ–ಬೇರೆಯಾಗಿದ್ದರೂ ಮದುವೆಯ ಬಂಧನದಿಂದ ಅವರಿಬ್ಬರೂ ಒಂದೇ ಜೀವವೆಂಬಂತ್ತಾಗುತ್ತಾರೆ. ಆದರೆ, ಅವರ ಸಮಸ್ಯೆಗಳು ಬೇರೆ–ಬೇರೆ ಅಲ್ಲ. ಕೇವಲ ಲೈಂಗಿಕ ತೃಪ್ತಿಯ ಒಂದೇ ಉದ್ಧೇಶದಿಂದ ಮದುವೆ ಬಂಧನ ಸ್ವೀಕರಿಸುವುದು ಸರಿಯಲ್ಲ. ಪರಮಾತ್ಮನು ಈ ಭೂಲೋಕವು ತನ್ನದ್ದೇ ಸ್ವರೂಪ ಜೀವಿಗಳಿಂದ ತುಂಬಬೇಕು ಎಂಬ ಹಂಬಲದಿಂದ ಸ್ತ್ರೀಯರಿಗೆ ಪುರುಷರಲ್ಲಿ ಅಂತೆಯೇ ಪುರುಷರಿಗೆ ಸ್ತ್ರೀಯರಲ್ಲಿ ಆಕರ್ಷಣೆಯಾಗುವಂತೆ ಪರಿಸರ ರಚಿಸಿದ್ದಾರೆ. ಈ ಆಕರ್ಷಣೆಯು ಮದುವೆಯ ಬಂಧನದಿಂದ ಸಂಪೂರ್ಣವಾಗುತ್ತದೆಯಾದರೂ ಮದುವೆಯ ನಂತರದ ಜೀವನದ ಸುಖವು ಮುಳ್ಳಿನ ಹಾಸಿಗೆಯಂತೆ! ಆ ಮುಳ್ಳಿನ ಹಾಸಿಗೆಯಲ್ಲಿ ಸುಖವನ್ನು ಅರಸಿಕೊಳ್ಳಬೇಕಾಗಿದೆ. ಏಕೆಂದರೆ ನವ ಜೋಡಿಯು ತಮ್ಮ ಮುಂದಿನ ಜೀವನವನ್ನು ತಾವೇ ರೂಪಿಸಬೇಕು. ಇವರಿಬ್ಬರ ದೇಹಗಳು ಹಾಗೂ ಆಲೋಚನೆಗಳು ಬೇರೆ–ಬೇರೆಯಾಗಿದ್ದರೂ ಇಬ್ಬರೂ 'ಕೊಡು–ಕೊಳ್ಳು' ಎಂಬ ರೀತಿಯಲ್ಲಿ ಪರಸ್ಪರ ಸಹಕರಿಸಿ ಜೀವಿಸಬೇಕು. ಒಬ್ಬರನ್ನೊಬ್ಬರು ಅರ್ಥೈಸಿಕೊಳ್ಳುವುದು ಹೇಗೆ? ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವುದು ಹೇಗೆ? ಮನಸ್ಸು ಸಮಾಧಾನ ಚಿತ್ತದಿಂದಿರಲು ಏನು ಮಾಡಬೇಕು? ಕುಟುಂಬದ ಸದಸ್ಯರಲ್ಲಿ, ಅತ್ತೆ ಮಾವಂದಿರೊಡನೆ ತಮ್ಮ ಸಂಬಂಧವನ್ನು ಸುಧಾರಣೆ ಮಾಡುವುದು ಹೇಗೆ? ಎಂಬಿತ್ಯಾದಿ ವಿಷಯಗಳ ಬಗ್ಗೆ ಸೂಕ್ತ ರೀತಿಯಲ್ಲಿ ಸಲಹೆ ಸೂಚನೆಗಳನ್ನು ನೀಡಲು ಈ ವಿಭಾಗದಲ್ಲಿ ಪ್ರಯತ್ನಿಸಿದ್ದೇನೆ.

ಮದುವೆಯಾದ ಜೋಡಿಗಳು ಅನಿವಾರ್ಯತೆಯ ಒತ್ತಡದಿಂದಾಗಿ ತಮ್ಮ ಮದುವೆಯನ್ನು ಕೊನೆಗೊಳಿಸಲು ಬಯಸುತ್ತಿದ್ದಲ್ಲಿ ಅಥವಾ ಯಾವುದೇ ರೀತಿಯಲ್ಲೂ ಮದುವೆಯ ಬಂಧ ಕಾಪಾಡಲು ವಿಫಲವಾಗಿದ್ದಲ್ಲಿ, ನ್ಯಾಯಾಲಯದ ಮಧ್ಯಸ್ಥಿಕೆಯಿಂದ ವಿಚ್ಛೇದನ ಪಡೆಯುವುದು ಹೇಗೆ? ಹುಟ್ಟಿದ ಮಗುವಿನ ಆರೈಕೆ ಯಾರು ಮಾಡಬೇಕು? ದಿನ–ನಿತ್ಯದ ಖರ್ಚು ವೆಚ್ಚಗಳಿಗೆ ಏನು ಮಾಡುವುದು? ಕೌಟುಂಬಿಕ ನ್ಯಾಯಾಲಯದ ಕಾರ್ಯವ್ಯಾಪ್ತಿಯೇನು? ಎಂಬಿತ್ಯಾದಿ ವಿಷಯಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಬರೆಯಲು ಪ್ರಯತ್ನಿಸಿದ್ದೇನೆ.

ಇಂದಿನ ಆಧುನಿಕ ಯುಗದಲ್ಲಿ ಮದುವೆಯ ಸಾಕ್ರಾಮೆಂತ್ ಮಹತ್ವದ್ದಲ್ಲ ಎಂದು ಯುವ ಜೋಡಿಗಳು ಭಾವಿಸಲು ಕಾರಣಗಳು ಹಲವಾರಿದ್ದರೂ, ನಮ್ಮ ಮಕ್ಕಳಿಗೆ ಚಿಕ್ಕಂದಿನಿಂದ ತಂದೆ–ತಾಯಿಯ ಪ್ರೀತಿ ಲಭಿಸಿದಲ್ಲಿ, ದೇವರ–ಹಿರಿಯರ ಭಯ–ಭಕ್ತಿಯಿಂದೊಡಗೂಡಿ ಮಕ್ಕಳು ಬೆಳೆದು ದೊಡ್ಡವರಾದಲ್ಲಿ, ಮಕ್ಕಳ ತಂದೆ–ತಾಯಿಯರು ಅವರಿಗೆ ಆದರ್ಶ ವ್ಯಕ್ತಿಗಳಾಗಿದ್ದಲ್ಲಿ ಇಂಥ ಭಾವನೆ ಉಧ್ಭವಿಸಲಾರದು. ಜೊತೆಗೆ ಕೌಟುಂಬಿಕ

ಜೀವನದ ಮಹತ್ವವೇನು? ಇದರ ಅವಶ್ಯಕತೆಯೇನು? ಲೈಂಗಿಕ ಕ್ರಿಯೆಯನ್ನು ಯಾವಾಗ ಪ್ರಾರಂಭಿಸಬಹುದು? ಲೈಂಗಿಕ ರೋಗಗಳಾವುವು? ಮತ್ತು ಈ ರೋಗಯುಕ್ತರಿಂದ ಹುಟ್ಟುವ ಮಕ್ಕಳಲ್ಲಿ ಆಗುವ ಪರಿಣಾಮಗಳೇನು? ಎಂಬಿತ್ಯಾದಿ ವಿಷಯಗಳನ್ನು ಕಡ್ಡಾಯವಾಗಿ ಮಕ್ಕಳಿಗೆ ಶಾಲೆಯ ಶಿಕ್ಷಣದ ಜೊತೆಗೆ ಕಲಿಸುವ ಅನಿವಾರ್ಯತೆ ಇಂದು ನಮ್ಮ ಮುಂದಿದೆ. ಜೀವನದಲ್ಲಿ ಸಂಪೂರ್ಣತೆಯನ್ನು ಅನುಭವಿಸಿದ ಅನುಭವೀ ಜೋಡಿಗಳು ತಮ್ಮ ದಾಂಪತ್ಯ ಜೀವನವನ್ನು ಯಾವ ರೀತಿಯಲ್ಲಿ ಕಾಪಾಡಿಕೊಂಡು ಹೋಗಿದ್ದರು ಎಂಬ ಜ್ಞಾನವನ್ನು ಯುವಜನರಿಗೆ ತಿಳಿಹೇಳುವ ಅವಶ್ಯಕತೆ ಇಂದು ಉದ್ಭವಿಸಿದೆ.

**ಕ್ರಿಮಿನಲ್ ದಂಡ ಕಾನೂನು:** ಕ್ರಿಮಿನಲ್ ದಂಡ ಕಾನೂನು 1860 ರಂದು ಅಸ್ತಿತ್ವಕ್ಕೆ ಬಂದಿತ್ತಾದರೂ ಆಯಾಯಾ ಸಮಯದಲ್ಲಿ ಸೂಕ್ತ ರೀತಿಯ ತಿದ್ದುಪಡಿಯನ್ನು ಕೇಂದ್ರ ಸರಕಾರವು ಮಾಡಿರುತ್ತದೆ. ಅಪರೂಪದಲ್ಲಿ ಅಪರೂಪವಾದ ಅತೀ ಹೀನ ಅಪರಾಧ ಎಸಗುವವರಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಆಧುನಿಕ ಯುಗದಲ್ಲಿ ಭೂಲೋಕದ ಬಹಳಷ್ಟು ರಾಷ್ಟ್ರಗಳು ಮರಣದಂಡನೆ ಶಿಕ್ಷೆಯನ್ನು ರದ್ದುಗೊಳಿಸಿ ಜೀವಾವಧಿ ಶಿಕ್ಷೆ ವಿಧಿಸುವ ಕಾನೂನು ಮಂಡಿಸಿದ್ದಾರೆ. ಭಾರತ ದೇಶದಲ್ಲೂ ಈ ಬಗ್ಗೆ ಚಿಂತನೆಯ ಅಗತ್ಯವಿದೆ.

ನಮ್ಮ ದೇಶದ ಕಾನೂನು, ಹೆಣ್ಣಿನೊಡನೆ ನಡೆಸಿರುವ ಲೈಂಗಿಕ ಕ್ರಿಯೆಯು ಅವಳ ಒಪ್ಪಿಗೆಯಿಂದ ನಡೆದಿದೆ ಎಂದು ಮನ್ನಣೆ ನೀಡಬೇಕಾದರೆ ಹೆಣ್ಣಿಗೆ 16 ವರ್ಷ ಪ್ರಾಯ ತುಂಬಿರಬೇಕು ಎಂದು ತಿಳಿಸುತ್ತದೆ. ದೆಹಲಿ ಉಚ್ಚ ನ್ಯಾಯಾಲಯ ಇತ್ತೀಚೆಗೆ ನೀಡಿರುವ ತೀರ್ಪಿನಲ್ಲಿ 16 ವರ್ಷದೊಳಗಿನ ಮುಸಲ್ಮಾನ್ ಹೆಣ್ಣಿನೊಡನೆ ಅವಳ ಗಂಡ ನಡೆಸಿರುವ ಲೈಂಗಿಕ ಕ್ರಿಯೆಯು ಅಪರಾಧವಲ್ಲ, ಹೆಣ್ಣಿಗೆ ಸ್ರಾವ ಆಗುವ ಪ್ರಾಯ ಆಗಿದ್ದರೆ ಲೈಂಗಿಕ ಕ್ರಿಯೆ ನಡೆಸಬಹುದು ಎಂದು ಆದೇಶ ನೀಡಿರುತ್ತದೆ. ಭಾರತ ದೇಶದ ಕಾನೂನಿನಲ್ಲಿ ಈ ಪ್ರಕಾರದ ದ್ವಂದ್ವ ರೀತಿ–ನೀತಿಗಳು ಎದ್ದು ಕಾಣುತ್ತವೆ, ಇದು ಸೂಕ್ತವಲ್ಲ. ಆದುದರಿಂದ ಮದುವೆಯಾಗುವ ವಯಸ್ಸು, ಲೈಂಗಿಕ ಅಪರಾಧಗಳಂತಹ ವಿಷಯಗಳಲ್ಲಿ ಎಲ್ಲಾ ವರ್ಗದ ಜನರಿಗೆ ಸಮಾನ ರೀತಿಯ ಕಾನೂನಿನ ರಚನೆಯ ಅಗತ್ಯವಿದೆ.

ವಿವಿಧ ಧರ್ಮಗಳ ಜನರಲ್ಲಿ ಭಯಭೀತಿ ಹುಟ್ಟಿಸುವ ಸಂಘಟನೆಗಳ ಸದಸ್ಯರಾಗುವವರಿಗೆ ಶಿಕ್ಷೆ ವಿಧಿಸುವ ಕಾನೂನಿನ ತಿದ್ದುಪಡಿಯ ಅವಶ್ಯಕತೆಯಿದೆ. ಜಾತಿ ಆಧಾರಿತ ದೇಶದ್ರೋಹಿ ಸಂಘಟನೆಗಳನ್ನು ನಿಷೇಧಿಸಲು ಇದು ಪಕ್ವ ಕಾಲವಾಗಿದೆ ಎಂದು ಅಭಿಪ್ರಾಯ ಪಡುತ್ತೇನೆ.

ಈ ಕಾನೂನಿನಲ್ಲಿ, ಆತ್ಮಹತ್ಯೆಯು ಅಪರಾಧ ಎಂದು ಸೂಚಿಸಿರುವುದು ತಪ್ಪು ಎಂದು ಅರ್ಥೈಸಿಕೊಂಡಿರುವ ಭಾರತ ಸರಕಾರ ಮಾನಸಿಕ ಆರೋಗ್ಯ ಕಾಪಾಡುವ ಬಿಲ್ 2012ನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿರುತ್ತದೆ. ಇದರಲ್ಲಿರುವ ಪ್ರಾಮುಖ್ಯ ವಿಷಯಗಳೆಂದರೆ, ಯಾವುದೇ

ವ್ಯಕ್ತಿ ಆತ್ಮಹತ್ಯೆ ಮಾಡಲು ಪ್ರಯತ್ನಿಸಿದಾಗ ಮಾನಸಿಕ ತಜ್ಞರಿಂದ ಪರೀಕ್ಷಿಸಬೇಕು ಮತ್ತು ಆ ತಜ್ಞರು ಮಾನಸಿಕ ಅಸ್ವಸ್ಥತೆಯಿಂದಲೇ ಆ ವ್ಯಕ್ತಿ ಅತ್ಮಹತ್ಯೆಗೆ ಪ್ರಯತ್ನಿಸಿದ್ದರು ಎಂಬ ಅಭಿಪ್ರಾಯ ನೀಡಿದಲ್ಲಿ ಅಂತಹ ವ್ಯಕ್ತಿಯ ವಿರುದ್ದ ಯಾವುದೇ ಕ್ರಿಮಿನಲ್ ಮೊಕದ್ದಮೆ ಹೂಡಬಾರದು ಎಂಬ ತಿದ್ದುಪಡಿ ತಂದಲ್ಲಿ ಬಹಳ ಜನರಿಗೆ ಉಪಕಾರವಾಗುತ್ತದೆ.

ವೇಶ್ಯಾ ವೃತ್ತಿಯು ಭೂಲೋಕದಲ್ಲಿ ಅನಾದಿ ಕಾಲದಿಂದಲೂ ಅಸ್ಥಿತ್ವದಲ್ಲಿದೆ. ಹಲವು ರಾಷ್ಟ್ರಗಳು ವೇಶ್ಯಾ ವೃತ್ತಿಗೆ ಕಾನೂನು ಮಾನ್ಯತೆ ನೀಡಿವೆ. ಭಾರತದಲ್ಲಿ ಈ ಮಾನ್ಯತೆ ಇಲ್ಲದಿರುವುದರಿಂದ ವೇಶ್ಯಾ ವೃತ್ತಿಯನ್ನು ಗುಪ್ತವಾಗಿ ನಡೆಸಲಾಗುತ್ತಿದೆ. ಈ ದಿಶೆಯಿಂದಾಗಿ ವೇಶ್ಯಾ ವೃತ್ತಿ ನಡೆಸುವ ಸ್ತ್ರೀಯರು ಮತ್ತು ಪುರುಷರು ಗಂಭೀರ ಏಡ್ಸ್‌ನಂತಹ ಮಹಾಮಾರಿಗೆ ಬಲಿಯಾಗುವುದನ್ನು ನಾವಿಂದು ನೋಡುತ್ತಿದ್ದೇವೆ. ವೇಶ್ಯಾ ವೃತ್ತಿಗೆ ಕಾನೂನು ಮಾನ್ಯತೆ ನೀಡಿದರೆ ಈ ವೃತ್ತಿಯನ್ನು ನಡೆಸುವ ಸ್ತ್ರೀಯರು ಧೈರ್ಯವಾಗಿ ಕಾರ್ಯಮಗ್ನರಾಗಬಹುದು ಮತ್ತು ಕಾಲ–ಕಾಲಕ್ಕೆ ತಮ್ಮನ್ನು ವೈದ್ಯಕೀಯ ಚಿಕಿತ್ಸೆಗೊಳಪಡಿಸಿ ಆರೋಗ್ಯವಂತರಾಗಿ ಬಾಳಿ ಇತರರ ಆರೋಗ್ಯವನ್ನೂ ಕಾಪಾಡುವಲ್ಲಿ ಸಹಕರಿಸಬಹುದು. ಇದರ ಪರಿಣಾಮವಾಗಿ ಇಂತಹ ಸ್ತ್ರೀಯರ ಸಂಗ ಬಯಸುವ ಪುರುಷರು ಏಡ್ಸ್‌ನಂತಹ ಮಹಾಮಾರಿಗೆ ಬಲಿಯಾಗದೆ ತಮ್ಮ ಪರಿವಾರ ನಾಶವಾಗುವುದನ್ನು ತಪ್ಪಿಸಬಹುದು.

ಸಾರ್ವಜನಿಕ ಶಾಂತಿ ಕದಡುವ ಮತ್ತು ಅಶಾಂತಿ ಉದ್ಭವಿಸಲು ಕಾರಣಕರ್ತರಾದವರಿಗೆ ಜೀವಾವಧಿಯಂತಹ ಶಿಕ್ಷೆ ವಿಧಿಸಬೇಕು. ಏಕೆಂದರೆ ಯಾವುದೇ ಪ್ರದೇಶದಲ್ಲಿ ಅಶಾಂತಿ ಉದ್ಭವಿಸಿದರೆ ಅದರಿಂದ ಗಂಭೀರ ಪರಿಣಾಮಗಳಾಗುತ್ತವೆ ಮತ್ತು ಸರಕಾರದ ಸೊತ್ತುಗಳಿಗೆ ಅಪಾರ ನಷ್ಟ ಉಂಟಾಗುತ್ತದೆ ಮಾತ್ರವಲ್ಲ ಹಲವು ಜನರು ತಮ್ಮ ಅಮೂಲ್ಯ ಜೀವವನ್ನು ಕಳೆದುಕೊಳ್ಳುತ್ತಾರೆ. ಇಂತಹ ಘೋರ ಅಪರಾಧವೆಸಗಲು ಕಾರಣಕರ್ತರಾದವರಿಗೆ ಜೀವಾವಧಿ ಶಿಕ್ಷೆ ಸೂಕ್ತವೆಂದು ನನ್ನ ಅನಿಸಿಕೆ.

**ಮಾನವ ಹಕ್ಕುಗಳು:** ಮಾನವನ ಘನತೆ, ಗೌರವವನ್ನು ಸಂವಿಧಾನ ರೀತ್ಯಾ ಕಾಪಾಡಿಕೊಂಡು ಹೋಗಲು ಭಾರತ ಸರಕಾರವು ಮಾರ್ಗದರ್ಶಿ ಸೂತ್ರಗಳನ್ನು ರಚಿಸಿರುತ್ತದೆ. ಮಾನವ ಗೌರವಕ್ಕೆ ಭಾಧಕ ಉಂಟು ಮಾಡುವುದು, ಮಾನವರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ನೋಡುವುದು, ಅಮಾನವೀಯ ರೀತಿಯಲ್ಲಿ ಮನುಷ್ಯ ಜೀವಕ್ಕೆ ಚಿತ್ರಹಿಂಸೆ ನೀಡುವುದನ್ನು ನಿವಾರಿಸಲು ಮಾನವರಿಗೆ ಸ್ವಾತಂತ್ರ್ಯದ ಹಕ್ಕನ್ನು ಪ್ರಾಪ್ತ ಮಾಡಲಾಗಿದೆ. ಆದರೆ ನಮ್ಮ ಸಿನೆಮಾಗಳು ಹೊಡೆದಾಟ, ಜಗಳ, ಅನಾಚಾರ, ಅತ್ಯಾಚಾರ, ಲೂಟಿ, ಅಪಹರಣ, ವಂಚನೆ, ಮೋಸ ಇತ್ಯಾದಿಗಳನ್ನು ನಿಜ ಜೀವನದ ಅವಿಭಾಜ್ಯ ಅಂಗವೆಂಬಂತೆ ಪ್ರಚುರಪಡಿಸುವುದರಿಂದ ನಿಜ ಜೀವನದಲ್ಲಿ ಮಾನವ ಹಕ್ಕುಗಳು ಭಾಧಕಗೊಳ್ಳುತ್ತಲಿವೆ. ಆದುದರಿಂದ ಸಿನೆಮಾಗಳಲ್ಲಿ

ಮಾನವ ಹಕ್ಕುಗಳನ್ನು ದಮನಿಸುವ ಪರಿಪಾಠವನ್ನು ನಿಲ್ಲಿಸುವುದು ಸೂಕ್ತ. ಮನುಷ್ಯರನ್ನು ಜೀತದಾಳುಗಳಂತೆ ಕೆಲಸ ಮಾಡಿಸುವುದು, ಮನುಷ್ಯರ ವ್ಯಾಪಾರ ಮಾಡುವುದು, ಕೈದಿಗಳನ್ನು ಗುಲಾಮರಂತೆ ಕೆಲಸ ಮಾಡಿಸುವುದು ಮತ್ತು 16 ವರ್ಷದೊಳಗಿನ ಮಕ್ಕಳನ್ನು ಕಾರ್ಖಾನೆಗಳಲ್ಲಿ ದುಡಿಸುವುದನ್ನು ಸರಕಾರ ನಿಷೇಧಿಸಿದೆ. ಸರಕಾರ ರಚಿಸಿದ ಕಾನೂನುಗಳನ್ನು ಕಾರ್ಯಗತಗೊಳಿಸುವುದು ಕಾರ್ಯಾಂಗದ ಜವಾಬ್ದಾರಿಯಾಗಿರುವುದರಿಂದ, ಆಡಳಿತಾರೂಢ ಪಕ್ಷವು, ಎಲ್ಲಾದರೂ ಮಾನವ ಹಕ್ಕುಗಳ ಉಲ್ಲಂಘನೆಯಾದಾಗ ಅದಕ್ಕೆ ಕಾರಣೀಭೂತರಾಗಿರುವ ತಮ್ಮವರನ್ನು ರಕ್ಷಿಸಲು ಕಾರ್ಯಾಂಗದ ಅಧಿಕಾರಿಗಳ ಮೇಲೆ ಒತ್ತಡ ಹೇರುವುದು ಇಂದು ಸಾಮಾನ್ಯವಾಗಿದೆ. ಕೆಲವು ಪೋಲಿಸ್ ಅಧಿಕಾರಿಗಳು ಹಣದ ಆಶೆಗೋಸ್ಕರ ಮತ್ತು ಅಧಿಕಾರದಲ್ಲಿರುವವರನ್ನು ತುಷ್ಟೀಕರಿಸಲೋಸ್ಕರ, ದೌರ್ಜನ್ಯಕ್ಕೊಳಗಾದ ಬಡಪಾಯಿ ಬಲಿಪಶುಗಳನ್ನು ಹೆದರಿಸಿ ಅವರು ಮುಂದಿನ ಕ್ರಮಕ್ಕೈಗೊಳ್ಳದಂತೆ ಬಾಯಿ ಮುಚ್ಚಿಸುವುದು ಸಾಮಾನ್ಯವಾಗಿದೆ. ಈ ಘೋರ ಅಪರಾಧಗಳನ್ನು ನಿವಾರಿಸಲು ಜಾತಿ-ಮತ, ಪಕ್ಷ, ಅಧಿಕಾರ ಗಮನಿಸದೆ ಪ್ರತಿಯೊಬ್ಬ ಮಾನವನಲ್ಲಿಯೂ ದೇವರನ್ನು ಕಾಣಲು ಪ್ರಯತ್ನಿಸುವ ಜರೂರು ಅವಶ್ಯಕತೆ ನಮಗಿದೆ. ಅನ್ಯಾಯ-ಅತ್ಯಾಚಾರ ಎಸಗುವ ಜನಾಂಗದ ಮನಸ್ಸು ಪರಿವರ್ತನೆ ಮಾಡುವ ಅಗತ್ಯವಿದೆ. ನಾನೂ ಬದುಕುತ್ತೇನೆ ಮತ್ತು ಇತರರನ್ನೂ ಬದುಕಲು ಬಿಡುತ್ತೇನೆ ಎಂಬುದಾಗಿ ನಾವಿಂದು ಪ್ರತಿಜ್ಞೆ ಮಾಡಬೇಕು. ರಾಜಕೀಯದಲ್ಲಿ ಧರ್ಮವನ್ನು ಬೆರೆಸಲು ಕಾರಣರಾಗುವವರಿಗೆ ಕಠಿಣ ಶಿಕ್ಷೆಯನ್ನು ನೀಡುವ ಕಾನೂನಿನ ತಿದ್ದುಪಡಿ ಅಗತ್ಯವಿದೆ. ನಮ್ಮ ಮಕ್ಕಳಿಗೆ ಮತ್ತು ಮುಂದಿನ ಪೀಳಿಗೆಗೆ ಆರೋಗ್ಯವಂತ ಬಾಳ್ವೆ ನಡೆಸುವ ಅವಕಾಶವನ್ನು ಕಲ್ಪಿಸಬೇಕಾಗಿದೆ, ನಾವು ನಮ್ಮ ಅಂತ್ಯಕಾಲದಲ್ಲಿ ಈ ಭೂಮಿಯನ್ನು ಬಿಟ್ಟು ಅಗಲುವ ವೇಳೆ ಪರಿಸರ ಅಸಮತೋಲನವಾಗದಂತೆ ಜಾಗೃತೆ ವಹಿಸಲೋಸ್ಕರೆ, ಮನುಷ್ಯರೇ ಮನುಷ್ಯರ ಮಾಂಸವನ್ನು ಭಕ್ಷಿಸುವಂಥ ದುಸ್ಥಿತಿ ನಿರ್ಮಾಣವಾಗದಂತೆ ಜಾಗ್ರತರಾಗಲು ಭೂಲೋಕದಲ್ಲಿ ಸ್ವ-ಚಿತ್ತ ಮನಸ್ಸನ್ನು ನಿರ್ಮಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಹೀಗಾದಲ್ಲಿ ಮಾತ್ರ ಈ ಭೂಲೋಕದಲ್ಲಿ ಶಾಂತಿ-ಸಮಾಧಾನದ ಬೀಜವು ಮೊಳಕೆಯೊಡೆದು, ಮಾನವನು ತನ್ನ ಸಹಚರರಲ್ಲಿ ಆ ದೇವರ ಪ್ರತಿರೂಪವನ್ನು ಕಾಣಲು ಶಕ್ತನಾಗುತ್ತಾನೆ, ಮಾತ್ರವಲ್ಲ ಈ ಭೂಲೋಕವೇ ಸ್ವರ್ಗವಾಗಿ ಪರಿವರ್ತನೆಗೊಂಡು ಮಾನವ ಹಕ್ಕುಗಳು ಎಂದೂ ದಮನಿಸಲ್ಪಡದು.

**ಪರಿಸರ ಸಂರಕ್ಷಣಾ ಕಾನೂನು :** ಕೇಂದ್ರ ಮತ್ತು ರಾಜ್ಯ ಸರಕಾರಗಳು ಪರಿಸರ ಸಂರಕ್ಷಣಾ ಕಾನೂನು ರಚಿಸಿವೆಯಾದರೂ, ಪರಿಸರ ಸಂರಕ್ಷಣೆ ವಿಷಯದಲ್ಲಿ ಮಾಡಿರುವ ಪ್ರಯತ್ನ ಕಿಂಚಿತ್ತೆನ್ನಬಹುದು. ನ್ಯಾಯಾಲಯಗಳ ಆದೇಶ ಮತ್ತು ನಿರ್ದೇಶನಗಳಿಲ್ಲದೇ ಇದ್ದಲ್ಲಿ ನಮ್ಮ ಸ್ವಾರ್ಥ ರಾಜಕಾರಣಿಗಳು ಭ್ರಷ್ಟ ಅಧಿಕಾರಿಗಳೊಂದಿಗೆ ಕೈ ಮಿಲಾಯಿಸಿ,

ಪರಿಸರವನ್ನು ಮನುಷ್ಯರು ಜೀವಿಸಲು ಸಾಧ್ಯವಾಗದಷ್ಟು ಗಂಭೀರವಾಗಿ ಹಾಳುಗೆಡವುತ್ತಿದ್ದರು. ಈ ವಿಷಯಕ್ಕೆ ಉದಾಹರಣೆಯಾಗಿ, ಕರ್ನಾಟಕ ಮತ್ತು ಗೋವಾ ರಾಜ್ಯಗಳ ಅನಧಿಕೃತ ಗಣಿ ಉದ್ಯಮದಿಂದ ಪರಿಸರ ಹೇಗೆ ನಾಶವಾಗಿದೆ ಎಂಬುದನ್ನು ಉಲ್ಲೇಖಿಸಬಹುದು. ಪಟಾಕಿಗಳನ್ನು ಸಿಡಿಸುವುದರ ಡೆಸಿಬಲ್ ಶಬ್ದಮಿತಿ ಎಷ್ಟು ಇರಬೇಕೆಂದು ಭಾರತದ ಸುಪ್ರೀಮ್ ಕೋರ್ಟು ನಿರ್ಧರಿಸಿದೆ. ಅದೇ ರೀತಿ ದಿನದ ಸಮಯದಲ್ಲಿ ಜನಸಾಮಾನ್ಯರ ಆರೋಗ್ಯ ಮತ್ತು ಮನಸ್ಸಿನ ಶಾಂತಿ ಸಮಾಧಾನವನ್ನು ಹಾಳುಗೆಡವಲು ಹೇತುವಾಗುವ ವಿವಿಧ ಧರ್ಮಗಳ ಉತ್ಸವಹಳಲ್ಲಿ ಮೈಕ್‌ನ ಶಬ್ದ ಎಷ್ಟು ಡೆಸಿಬಲ್ ಇರಬೇಕು ಎಂಬುದಾಗಿಯೂ ಕಾನೂನಿನಲ್ಲಿ ನಿರ್ಧರಿತವಾಗಬೇಕು. ಇಂದಿನ ದಿನಗಳಲ್ಲಿ ಎನ್.ಜಿ.ಓ.ಗಳು ಮತ್ತು ಸರಕಾರಿ ಅಧಿಕಾರಿಗಳು ಪ್ಲಾಸ್ಟಿಕ್ ಕೈ ಚೀಲಗಳ ಉಪಯೋಗ ನಿಲ್ಲಿಸಬೇಕು ಎಂದು ಹೇಳುವುದು ನಗರ ಪ್ರದೇಶಗಳಲ್ಲಿ ಅತಿಯಾಗುತ್ತಿದೆ. ಪ್ಲಾಸ್ಟಿಕ್‌ಗೆ ಪರ್ಯಾಯ ವ್ಯವಸ್ಥೆಯನ್ನು ಹುಡುಕದೆ ಒಮ್ಮಿಂದೊಮ್ಮೆಗೇ ಎಲ್ಲವೂ ಸುಧಾರಣೆಯಾಗುವುದಿಲ್ಲ. ನನ್ನ ಅಭಿಪ್ರಾಯದಂತೆ ವಿವಿಧ ಕಾರ್ಖಾನೆಗಳು ಹೊರಡಿಸುವ ಕೊಳೆ, ಕುಡಿಯುವ ನೀರನ್ನು ಮಲಿನಗೊಳಿಸುತ್ತಿವೆ. ಇದರಿಂದಾಗಿ ಪರಿಸರ ನಾಶವಾಗುತ್ತಾ ಇದೆ. ಕಾರ್ಖಾನೆಯ ಒಡೆಯ ಮಾತ್ರ ಹಣವಂತನಾಗುತ್ತಾನೆ, ಜನಸಾಮಾನ್ಯರು ಕಷ್ಟ–ಕಾರ್ಪಣ್ಯಗಳಿಗೆ ಒಳಗಾಗುತ್ತಾರೆ. ನಗರ ಪ್ರದೇಶಗಳಲ್ಲಿ ಕಸ ವಿಲೇವಾರಿ ಎಲ್ಲಿ ಮಾಡುವುದು ಎಂಬುದೇ ದೊಡ್ಡ ಸಮಸ್ಯೆಯಾಗಿದೆ. ನಗರ ನಿವಾಸಿಗಳಿಗೆ ತಮ್ಮ–ತಮ್ಮ ಹಿತ್ತಲಿನಲ್ಲಿ ಹೊಂಡ ತೆಗೆದು ತರಕಾರಿ ಸಿಪ್ಪೆ ಮತ್ತು ಇತರ ತಿಂದು ಬಿಸಾಡುವ ವಸ್ತುಗಳನ್ನು ಆ ಹೊಂಡದಲ್ಲಿ ತುಂಬಿಸಿ ಯಾವ ರೀತಿ ಗೊಬ್ಬರ ತಯಾರಿಸಬಹುದು ಎಂಬ ತಂತ್ರಜ್ಞಾನವನ್ನು ಜನರಿಗೆ ತಿಳಿಸಿದರೆ 50% ಕಸ ವಿಲೇವಾರಿ ಸಮಸ್ಯೆಯನ್ನು ನಿವಾರಿಸಬಹುದು. ಸ್ಥಳಾವಕಾಶವಿರುವ ಪ್ರತೀ ಮನೆಯವರು ತಮ್ಮ ಹಿತ್ತಲಿನಲ್ಲಿ ಸೂಚಿತ 2-3 ಮರಗಳನ್ನು ಕಡ್ಡಾಯವಾಗಿ ಬೆಳೆಸಬೇಕು. ಅಂತೆಯೇ ಸ್ಥಳಾವಕಾಶವಿಲ್ಲದವರು ಸಾರ್ವಜನಿಕ ಸೂಚಿತ ಪ್ರದೇಶದಲ್ಲಿ 2-3 ಮರಗಳನ್ನು ನೆಟ್ಟು–ಪೋಷಿಸುವ ಜವಾಬ್ದಾರಿ ತೆಗೆದುಕೊಳ್ಳುವಂತೆ ಕಡ್ಡಾಯಗೊಳಿಸಿ, ಈ ನಿಯಮ ಪಾಲಿಸುವವರಿಗೆ ಸರಕಾರದ ಕೆಲವು ಹೆಚ್ಚಿನ ಸೌಲಭ್ಯಗಳು ಸಿಗುವ ವ್ಯವಸ್ಥೆ ಮಾಡತಕ್ಕದ್ದು. ಭಾರತದಲ್ಲಿ ಒಂದು ಬಿಲಿಯನ್‌ಗಿಂತ ಹೆಚ್ಚು ಜನಸಂಖ್ಯೆ ಇದ್ದು ಒಬ್ಬ ವ್ಯಕ್ತಿ 2 ಮರ ಬೆಳೆಸಿದರೆ ಮುಂದಿನ 20 ವರ್ಷಗಳಲ್ಲಿ ಭಾರತದಲ್ಲಿ ಸ್ವರ್ಗದ ವೈಭವವನ್ನೇ ನಿರೀಕ್ಷಿಸಬಹುದು.

**ಮೋಟಾರು ವಾಹನ ಅಧಿನಿಯಮ:** ಮೋಟಾರು ವಾಹನ ಅಧಿನಿಯಮವು ಸಾರ್ವಜನಿಕ ವಾಹನ ಮತ್ತು ಖಾಸಗಿ ವಾಹನ ಚಾಲಕರಿಗೆ ಒಂದೇ ರೀತಿಯಲ್ಲಿ ಅನ್ವಯಿಸುವುದರಿಂದ ಖಾಸಗಿ ವಾಹನ ಚಾಲಕರು ಅಫಘಾತದ ಸಂಧರ್ಭಗಳಲ್ಲಿ ಬಹಳ ಹಿಂಸೆಗೊಳಪಡುತ್ತಾರೆ. ಹಣವಂತರು ಖಾಸಗಿ ವಾಹನಗಳನ್ನು ತಮ್ಮ ಚಾಲಕರಿಂದ ಚಲಾಯಿಸುತ್ತಾರೆ. ಆದರೆ

ಮಧ್ಯಮ ವರ್ಗದ ಜನರು ಸ್ವಂತ ವಾಹನವನ್ನು ಸ್ವತಹ ಚಲಾಯಿಸುವುದರಿಂದ ತನ್ನದಲ್ಲದ ತಪ್ಪಿನಿಂದ ಆದ ಅಫಘಾತದಿಂದ ಯಾವುದೇ ವ್ಯಕ್ತಿ ದುರ್ಮರಣಕ್ಕೀಡಾದಲ್ಲಿ ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲುವಾಗ ಇತರ ಕ್ರಿಮಿನಲ್ ಆರೋಪಿಗಳ ಮಧ್ಯದಲ್ಲಿ ಅನುಭವಿಸುವ ಹಿಂಸೆ ಕಲ್ಪನಾತೀತ. ಈ ವಿಷಯದಲ್ಲಿ ಕಾನೂನಿನ ತಿದ್ದುಪಡಿ ಅಗತ್ಯವಿದೆ.

ಸಾರ್ವಜನಿಕ ವಾಹನ ಚಲಾಯಿಸುವ ಚಾಲಕರಿಗೆ ವರ್ಷಕ್ಕೊಂದು ಬಾರಿ ಚಿಂತನ(ಟ್ರೇನಿಂಗ್) ಶಿಬಿರವನ್ನು ಏರ್ಪಡಿಸಿ ಯಾವ ವಾಹನ ಯಾವ ರಸ್ತೆಯಲ್ಲಿ ಎಷ್ಟು ವೇಗದಲ್ಲಿ ಚಲಿಸಬೇಕು, ಹಾರ್ನ್ ಯಾವಾಗ ಪ್ರಯೋಗಿಸಬಹುದು, ವಾಹನ ಚಲಾಯಿಸುವಾಗ ಮೊಬೈಲ್‌ನಲ್ಲಿ ಮಾತನಾಡಿದರೆ ಆಗುವ ಪರಿಣಾಮಗಳೇನು, ಬಸ್ ನಿಲ್ದಾಣಗಳಲ್ಲದೆ ಬೇರೆ ಸ್ಥಳದಲ್ಲಿ ವಾಹನ ನಿಲುಗಡೆ ಮಾಡಬೇಕಾದಲ್ಲಿ ಅನುಸರಿಸಬೇಕಾದ ನಿಯಮಗಳೇನು, ಮಾರ್ಗ ದಾಟುವವರನ್ನು ಕಂಡಾಗ ಯಾವ ಮುಂಜಾಗ್ರತೆ ಅನುಸರಿಸಬೇಕು, ವಾಹನ ಅಪಘಾತಕ್ಕೀಡಾದ ಸಂಧರ್ಭಗಳಲ್ಲಿ ಪರಿಸ್ಥಿತಿಯನ್ನು ನಿಭಾಯಿಸುವುದು ಹೇಗೆ ಎಂಬಿತ್ಯಾದಿ ಸಾಮಾನ್ಯ ವಿಷಯಗಳ ಬಗ್ಗೆ ಪರಿಣಿತ ತಜ್ಞರಿಂದ ವಿವರಣೆ ನೀಡುವ ಏರ್ಪಾಡು ಮಾಡಬೇಕಾಗಿದೆ. ಇಂತಹ ಶಿಬಿರಗಳಲ್ಲಿ, ಬೇರೆ ಬೇರೆ ದೇಶಗಳಲ್ಲಿ ಅಲ್ಲಿಯ ಚಾಲಕರು ವಾಹನ ಹಾಗೂ ಜನನಿಬಿಡ ಮಾರ್ಗಗಳ ಜಂಕ್ಷನ್‌ಗಳಲ್ಲಿ ತಾಳ್ಮೆಯಿಂದ ತಮ್ಮ ವಾಹನಗಳನ್ನು ಸರತಿಯ ಸಾಲಿನಲ್ಲಿ ಹೇಗೆ ನಿಲ್ಲಿಸುತ್ತಾರೆ, ಅಗತ್ಯವಿರುವಾಗ ಮಾತ್ರ ಹೇಗೆ ಹಾರ್ನ್ ಶಬ್ದ ಮಾಡುತ್ತಾರೆ, ಎಡ ಬದಿಯಲ್ಲೇ ವಾಹನವನ್ನು ಹೇಗೆ ಚಲಾಯಿಸುತ್ತಾರೆ, 4 ಲೇನ್‌ಗಳು ಇರುವಂತಹ ರಸ್ತೆಗಳಲ್ಲಿ ವೇಗದಿಂದ ಚಲಿಸುವ ವಾಹನಗಳನ್ನು ಮಾತ್ರ ಬಲಬದಿಯಿಂದ ಹೇಗೆ ಚಲಾಯಿಸುತ್ತಾರೆ ಎಂಬಿತ್ಯಾದಿ ವಿಷಯಗಳ ಕಿರು ಚಿತ್ರಗಳನ್ನು ತಯಾರಿಸಿ ಈ ಶಿಬಿರಗಳಲ್ಲಿ ಪ್ರದರ್ಶಿಸುವ ಏರ್ಪಾಡು ಮಾಡುವುದು ಅವಶ್ಯವಾಗಿದೆ. ಇಂತಹ ಶಿಬಿರಗಳಿಗೆ ಹಾಜರಾಗದ ಚಾಲಕರ ಲೈಸನ್ಸ್ ರದ್ದು ಮಾಡುವುದು ಕ್ಷೇಮ.

ವಾಹನ ಅಪಘಾತದಿಂದ ಮೃತಪಟ್ಟವರ ವಾರೀಸುದಾರರು ಅಥವಾ ಶಾಶ್ವತ ಊನತ್ವಕ್ಕೀಡಾದವರು ವಿಮಾ ಪರಿಹಾರ ಪಡೆದುಕೊಳ್ಳಲು ಹರಸಾಹಸ ಪಡಬೇಕಾಗುತ್ತದೆ. ನ್ಯಾಯಾಲಯಗಳಲ್ಲಿ ವಿಮಾ ಕಂಪೆನಿಯ ಪರವಾಗಿ ವಾದಿಸುವ ನ್ಯಾಯವಾದಿಗಳು ಜನಸಾಮಾನ್ಯರಿಗೆ ಅವರ ಜ್ಞಾನಪರಿಧಿಯ ಹೊರಗಿನ ಪ್ರಶ್ನೆಗಳನ್ನು ಕೇಳಿ ತಲ್ಲಣಗೊಳಿಸಿ ಅವರು ತಪ್ಪು ಉತ್ತರ ಕೊಡುವಂತೆ ಮಾಡಿ ಅವರಿಗೆ ನ್ಯಾಯೋಚಿತವಾಗಿ ದೊರಕಬೇಕಾದ ಪರಿಹಾರವನ್ನು ಸಿಗದಂತೆ ಮಾಡುವಲ್ಲಿ ಯಶಸ್ವಿಯಾಗುತ್ತಾರೆ. ಈ ದಿಶೆಯಲ್ಲಿ ವಾಹನ ಚಾಲಕನ ತಪ್ಪು ಗಣಿಸದೇ ದೊರಕುವ ವಿಮಾ ಪರಿಹಾರದ ಮೊತ್ತವನ್ನು ರೂ.50,000/- ದಿಂದ ರೂ.2,00,000/-ಗಳಿಗೆ ಹೆಚ್ಚಿಸಿದಲ್ಲಿ ಮೃತರ ವಾರೀಸುದಾರರು ಸಮಾಧಾನದ ನಿಟ್ಟುಸಿರು ಬಿಡಲು ಸಾಧ್ಯ ಎಂದು ನನ್ನ ಅನಿಸಿಕೆ.

# ಕೌಟುಂಬಿಕ ನ್ಯಾಯಾಲಯದ ಕಾನೂನು

## (ಕೇಂದ್ರ ಕಾನೂನು ಸಂಖ್ಯೆ 66–1984)

ಈ ಕಾನೂನು ರಚನೆಯ ಪೂರ್ವದಲ್ಲಿ ಹಲವಾರು ಸ್ತ್ರೀ ಸಂಘಟನೆಗಳು ಕೌಟುಂಬಿಕ ಸಮಸ್ಯೆ ಇತ್ಯರ್ಥ ಮಾಡಲು ಕಠಿಣ ಕಾಯಿದೆಗಳನ್ನು ಪಾಲಿಸುವುದನ್ನು ಬಿಟ್ಟು ರಾಜಿ ಸಂಧಾನದ ಮೂಲಕ ಪರಿಹಾರ ಪಡೆಯಲು ಕೌಟುಂಬಿಕ ನ್ಯಾಯಾಲಯಗಳ ಸ್ಥಾಪನೆ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸಿದ್ದವು. ಅಂತೆಯೇ ಲಾ ಕಮಿಷನಿನ 59ನೇ ವರದಿಯಲ್ಲಿ ಸಿವಿಲ್ ಕೇಸಿನಲ್ಲಿ ವಿಚಾರಣೆ ಪ್ರಾರಂಭ ಆಗುವ ಮೊದಲು ಕೌಟುಂಬಿಕ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥ ಮಾಡಲು ಪ್ರಯತ್ನ ಮಾಡಬೇಕು ಎಂದು ತಿಳಿಸಿದ್ದರು. ಸಿವಿಲ್ ಕೇಸುಗಳ ಕಾನೂನು 1976ರಲ್ಲಿ ತಿದ್ದುಪಡಿ ಆಗಿದ್ದರೂ ಕೌಟುಂಬಿಕ ನ್ಯಾಯಾಲಯದ ವ್ಯಾಜ್ಯಗಳಿಗೆ ಮತ್ತು ರಾಜಿ ಸಂಧಾನದ ಮೂಲಕ ವ್ಯಾಜ್ಯ ಇತ್ಯರ್ಥ ಮಾಡಲು ಯಾವುದೇ ಮಹತ್ವ ಕೊಟ್ಟಿರಲಿಲ್ಲ. ಆದುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಕೌಟುಂಬಿಕ ಸಮಸ್ಯೆಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಲು ಕೌಟುಂಬಿಕ ನ್ಯಾಯಾಲಯಗಳು ಪ್ರಾರಂಭವಾಗಿವೆ.

ಈ ಕಾನೂನಿನ ಆಧಾರದಲ್ಲಿ

1. ರಾಜ್ಯ ಸರಕಾರಗಳು ಕೌಟುಂಬಿಕ ನ್ಯಾಯಾಲಯಗಳನ್ನು ಸ್ಥಾಪನೆ ಮಾಡಬೇಕು.
2. ಒಂದು ಮಿಲಿಯಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ನಗರಗಳಲ್ಲಿ ರಾಜ್ಯ ಸರಕಾರಗಳು ಕೌಟುಂಬಿಕ ನ್ಯಾಯಾಲಯ ಸ್ಥಾಪನೆ ಮಾಡಬೇಕು.

**ಕೌಟುಂಬಿಕ ನ್ಯಾಯಾಲಯದ ಕಾರ್ಯ ವ್ಯವಸ್ಥೆ ಈ ರೀತಿ ಇದೆ.**

ಅ) ವೈವಾಹಿಕ ಪರಿಹಾರ, ವಿವಾಹವನ್ನು ಅಸಿಂಧುಗೊಳಿಸುವುದು, ನ್ಯಾಯಿಕ ಪ್ರತ್ಯೇಕ ವಾಸ, ವಿಚ್ಛೇದನ, ದಾಂಪತ್ಯದ ಹಕ್ಕುಗಳ ಪುನರ್ ಸ್ಥಾಪನೆ.

ಆ) ಗಂಡ ಹೆಂಡತಿಗೆ ಸಂಬಂಧಿಸಿದ ಆಸ್ತಿ ವಿಷಯಗಳಿಗೆ ಪರಿಹಾರ

ಇ) ಕಾನೂನು ಸಮ್ಮತ ವ್ಯಕ್ತಿಯ ಮೂಲ ತಿಳಿಸುವುದು.

ಈ) ಅಪ್ರಾಪ್ತ ವಯಸ್ಕನ ಪೋಷಕ ರಕ್ಷಕರ ನಿರ್ಧಾರ ಮತ್ತು ಅಪ್ರಾಪ್ತ ವಯಸ್ಕನ ಅಭಿರಕ್ಷೆ ನಿರ್ಧಾರ.

ಉ) ಕ್ರಿಮಿನಲ್ ಕಾಯಿದೆ ಪ್ರಕಾರ ಹೆಂಡತಿಗೆ ಜೀವನಾಂಶ ಖರ್ಚಿನ ನಿರ್ಧಾರ.

3. ಕೌಟುಂಬಿಕ ಸಮಸ್ಯೆಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳಿಸುವುದು ಅಥವಾ ವಿವಾದಗಳನ್ನು ಇತ್ಯರ್ಥಗೊಳಿಸುವುದು ಕೌಟುಂಬಿಕ ನ್ಯಾಯಾಲಯದ ನಿರ್ಬಂಧಕವಾದ ಕೆಲಸವಾಗಿದೆ. ರಾಜಿ ಸಂಧಾನದ ಸಮಯದಲ್ಲಿ ನಿಯಮ, ವಿಧಿಯನ್ನು ಕಟ್ಟುನಿಟ್ಟಾಗಿ ಅನುಸರಿಸದೆ ಅನೌಪಚಾರಿಕ ರೀತಿಯಲ್ಲಿ ವ್ಯವಹರಿಸುವ ಅಗತ್ಯವಿದೆ.

4. ಸಾಮಾಜಿಕ ಅಭಿವೃದ್ಧಿ ಸಂಸ್ಥೆಗಳು, ಸಲಹೆಗಾರರು ಇವರ ಸಹಾಯವನ್ನು ರಾಜಿ ಸಂಧಾನದ ಸಮಯದಲ್ಲಿ ಒದಗಿಸುವುದು ಅಂತೆಯೇ ವೈದ್ಯಕೀಯ ಮತ್ತು ಕಲ್ಯಾಣ ಪರಿಣಿತರ ಸೇವೆಯನ್ನು ನೀಡುವುದು.

5. ಕೌಟುಂಬಿಕ ನ್ಯಾಯಾಲಯದಲ್ಲಿ ಹಕ್ಕಿನಿಂದ ವಕೀಲರ ಸಹಾಯ ಪಡೆಯಲು ಸಾಧ್ಯವಿಲ್ಲ ಆದರೆ ಕೌಟುಂಬಿಕ ನ್ಯಾಯಾಲಯದಲ್ಲಿ ತನಗೆ ಬೇಕಾದ ಕಾನೂನು ಮಾಹಿತಿ ನೀಡಲು ವಕೀಲರನ್ನು ನ್ಯಾಯಾಲಯದ ಒಪ್ಪಿಗೆ ಮೇರೆಗೆ ನೇಮಿಸಬಹುದು.

ಬೆಂಗಳೂರಿನಲ್ಲಿ ಎರಡು ಕೌಟುಂಬಿಕ ನ್ಯಾಯಾಲಯಗಳು 25-05-1987ರಂದು ಸ್ಥಾಪನೆಯಾಗಿವೆ. ಕೌಟುಂಬಿಕ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ವೃತ್ತಿಪರ ಅನುಭವ, ಪ್ರಾಯೋಗಿಕ ಸಮಸ್ಯೆಗಳು ಮತ್ತು ಪ್ರತಿ ಕೇಸಿನಲ್ಲಿ ಗಳಿಸಿದ ಅನುಭವದ ಆಧಾರದಲ್ಲಿ ಕಾರ್ಯ ವಿಧಾನದಲ್ಲಿ ಸುಧಾರಣೆ ತರುವುದು ಕೌಟುಂಬಿಕ ನ್ಯಾಯಾಲಯದ ಅಧಿಕಾರಿಯ ಕರ್ತವ್ಯವಾಗಿದೆ.

ಕೌಟುಂಬಿಕ ಕಾನೂನು 1984ರಂದು ಪಾರ್ಲಿಮೆಂಟ್‌ನಲ್ಲಿ ಮಂಡಿಸಲ್ಪಟ್ಟು ಅನುಮೋದನೆ ದೊರೆತರೂ ಬಹುತೇಕ ರಾಜ್ಯಗಳು ಈ ವಿಷಯದಲ್ಲಿ ಸಾಕಷ್ಟು ಆಸಕ್ತಿ ತೋರಿಸಿಲ್ಲ. ಆದರೆ ಕರ್ನಾಟಕ ರಾಜ್ಯದ ಮಂಗಳೂರಿನಲ್ಲಿ ಜೂನ್ 2011 ರಂದು ಕೌಟುಂಬಿಕ ನ್ಯಾಯಾಲಯ ಕಾರ್ಯಾರಂಭಗೊಂಡಿದೆ.

## 1. ಆರೋಗ್ಯವಂತ ಜೀವನದ ಹಕ್ಕು:-

ಸಂವಿಧಾನದ 21ನೇ ಪರಿಚ್ಛೇದದನ್ವಯ ಭಾರತದ ನಾಗರಿಕರಿಗೆ ಆರೋಗ್ಯವಂತ ಜೀವನದ ಹಕ್ಕು ದಯಪಾಲಿಸಲಾಗಿದೆ. ಎಚ್.ಐ.ವಿ.(ಏಡ್ಸ್)

ಪರೀಕ್ಷೆಯ ತಪಾಸಣೆ ನಡೆಸಲು ಯಾವನೇ ವ್ಯಕ್ತಿಯ ಒಪ್ಪಿಗೆ ಇಲ್ಲದಿದ್ದಲ್ಲಿ ಅವನನ್ನು ಈ ಪರೀಕ್ಷೆ ಮಾಡಲು ಒತ್ತಾಯಿಸಿದಲ್ಲಿ ಅವನಿಗೆ ಸಂವಿಧಾನವು ನೀಡಿದ/ದಯಪಾಲಿಸಿದ ಖಾಸಗಿ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂಬುದಾಗಿ ಭಾರತದ ಅತ್ಯುಚ್ಚ ನ್ಯಾಯಾಲಯ (ಸುಪ್ರೀಮ್ ಕೋರ್ಟ್) ತಿಳಿಸಿರುತ್ತದೆ. ಅಂತೆಯೇ ಸಂವಿಧಾನದ 20ನೇ ಪರಿಚ್ಛೇದದಂತೆ ಯಾವನೇ ಅಪರಾಧಿಯನ್ನು ಅವನ ವಿರುದ್ಧ ಸಾಕ್ಷಿ ಹೇಳಲು ಒತ್ತಾಯಿಸುವುದು ನಿಷೇಧಿಸಿದೆ. ಅನೈತಿಕ ವ್ಯಾಪಾರ, ಕಾನೂನುಬಾಹಿರ ವೇಶ್ಯಾವೃತ್ತಿ ನಡೆಸುವವರನ್ನು ಒತ್ತಾಯಿಸಿ ಅವರ ಏಡ್ಸ್ ಪರೀಕ್ಷೆ ನಡೆಸಹುದು. ಅದೇ ರೀತಿ ವಿಚ್ಛೇದನ ಕೇಳುವವರು ಏಡ್ಸ್‌ನಿಂದ ನರಳುತ್ತಿದ್ದಲ್ಲಿ ಅಂತಹವರನ್ನು ಏಡ್ಸ್ ಪರೀಕ್ಷೆಗೆ ಒತ್ತಾಯಿಸಬಹುದು.

## 2. ಆರೋಗ್ಯಭರಿತ ಮನಸ್ಸನ್ನು ಹೊಂದುವುದು:–

ಕೌಟುಂಬಿಕ ನ್ಯಾಯಾಲಯದಲ್ಲಿ ಹೆಚ್ಚಾಗಿ ಗಂಡ ಹೆಂಡತಿ ನಡುವೆ ಇರುವ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ. ದಾಂಪತ್ಯ ಹಕ್ಕುಗಳ ಪುನರ್-ಸ್ಥಾಪನೆ, ವಿಚ್ಛೇದನ, ಜೀವನಾಂಶ ಖರ್ಚು ವೆಚ್ಚ, ಮಕ್ಕಳ ಪಾಲನೆ ಪೋಷಣೆ ಈ ವಿಷಯಗಳನ್ನು ಇತ್ಯರ್ಥಪಡಿಸಬಹುದು ಮತ್ತು ತನಗೆ ಶಾಂತಿ ಸಮಾಧಾನ ದೊರೆಯಬಹುದು ಎಂಬ ಮಹದಾಶೆಯಿಂದ ಕೌಟುಂಬಿಕ ನ್ಯಾಯಾಲಯದ ಸಹಾಯಕ್ಕೆ ವಿವಾದಗ್ರಸ್ಥ ದಂಪತಿಗಳು ಹಾತೊರೆಯುತ್ತಾರೆ. ಪರಸ್ಪರ ಪ್ರೀತಿ ಪ್ರೇಮಕ್ಕೆ ಹಂಬಲಿಸಿದ, ಇಡೀ ಜೀವನನ್ನು ಒಟ್ಟಿಗೆ ಬಾಳುತ್ತೇವೆ ಎಂದು ಅಗ್ನಿಸಾಕ್ಷಿಯಾಗಿ ಪ್ರಮಾಣ ಮಾಡಿದವರು, ನಿನ್ನನ್ನು ನಾನು ಬಿಟ್ಟಿರಲಾರೆ ಎಂದು ಹೇಳಿದ ದಂಪತಿಗಳು, ಗಂಡರು–ಹೆಂಡಂದಿರು ಕೌಟುಂಬಿಕ ನ್ಯಾಯಾಲಯದ ಸಮ್ಮುಖ ವೈರಿಗಳಂತೆ ವರ್ತಿಸುವುದು ಸಾಮಾನ್ಯವಾಗಿದೆ. ಭವಿಷ್ಯದ ಕನಸನ್ನು ಕಲ್ಪಿಸಿ ಆನಂದಿಸುತ್ತಿದ್ದ ಯುವ ಜೋಡಿಗಳು, ಹಿರಿಯರು ತಮ್ಮ ಅಹಂ ಮತ್ತು ಪ್ರತಿಷ್ಟೆಗಾಗಿ ಸ್ವಂತ ಮಕ್ಕಳ ಭವಿಷ್ಯವನ್ನು ಕಡೆಗಣಿಸುವ ಬಹಳಷ್ಟು ಉದಾಹರಣೆಗಳನ್ನು ನಾವಿಂದು ನೋಡುತ್ತೇವೆ. ಭಾರತೀಯ ಕೌಟುಂಬಿಕ ಮೌಲ್ಯವನ್ನು ಮತ್ತು ಸಾವಿರಾರು ವರ್ಷಗಳಿಂದ ಕಾಪಾಡಿಕೊಂಡು ಬಂದಿರುವ ಧಾರ್ಮಿಕ ಪರಂಪರೆಯನ್ನು ನಮ್ಮ ಯುವ ದಂಪತಿಗಳಿಗೆ ಅರ್ಥ ಮಾಡಿಸಬೇಕು. ಒಬ್ಬರನ್ನೊಬ್ಬರು ದೂಷಿಸುವ, ವಿನಾ ಕಾರಣ ಜಗಳವಾಡುವ ಯುವ ದಂಪತಿಗಳು ತಮ್ಮ ಭಾವನೆಗಳನ್ನು ಹತ್ತಿಕ್ಕಲು ಮತ್ತು ತಮ್ಮ ಅಹಂ ನಿಯಂತ್ರಿಸಲು ಶ್ರೀ ಶ್ರೀ ರವಿ ಶಂಕರ್ ನಡೆಸುವ ಸುದರ್ಶನ್ ಕ್ರಿಯಾ, ಆರ್ಟ್ ಆಫ್ ಲಿವಿಂಗ್ ಅಥವಾ ಪ್ರಾನಿಕ್ ಹೀಲಿಂಗ್ ಧ್ಯಾನ ಇಂತಹ ಕೂಟಗಳಲ್ಲಿ

ಭಾಗಿಗಳಾಗುವುದರಿಂದ ಮನಸ್ಸಿನಲ್ಲಿ ಒಳ್ಳೆಯ ಭಾವನೆಗಳನ್ನು ಕ್ರೋಢೀಕರಿಸಲು ಮತ್ತು ಮನಸ್ಸನ್ನು ಹಿಡಿತದಲ್ಲಿಡಲು ಸಹಕಾರಿ ಆಗುತ್ತದೆ. ಕೌಟುಂಬಿಕ ಜೀವನದಲ್ಲಿ ಸಂತೋಷದಿಂದ ಸಹಬಾಳ್ವೆ ನಡೆಸುವ ಕುಟುಂಬಗಳ ಸಂಖ್ಯೆ ನಶಿಸುತ್ತಾ ಇರುವ ಈ ದಿನಗಳಲ್ಲಿ ದಂಪತಿಗಳಲ್ಲಿರುವ ಭಿನ್ನಾಭಿಪ್ರಾಯಗಳನ್ನು ನಿರ್ಣಯಿಸಲು ಕೌಟುಂಬಿಕ ನ್ಯಾಯಾಲಯಗಳ ಪಾತ್ರ ಮಹತ್ತರವಾಗಿದೆ. ವಿವಾಹಗ್ರಸ್ಥ ದಂಪತಿಗಳ ಭವಿಷ್ಯವನ್ನು ನಿರ್ಧರಿಸಲು, ಅವರ ಮಕ್ಕಳ ಭವಿಷ್ಯಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಲು ಕೌಟುಂಬಿಕ ನ್ಯಾಯಾಲಯದ ವಿಚ್ಛೇದನ ಪ್ರಕ್ರಿಯೆ ಬಹಳ ಮಹತ್ವದ್ದು ಎಂದು ಹೇಳಬಹುದು.

## 3. ಸುಖ/ ಸಂತೋಷದ ದಾಂಪತ್ಯ ಜೀವನಕ್ಕೆ ಅಗತ್ಯ ಸೂತ್ರಗಳು:–

1. ದಂಪತಿಗಳು ಪರಸ್ಪರ ಪ್ರೀತಿಸಬೇಕು, ಗೌರವಿಸಬೇಕು ಮತ್ತು ಒಬ್ಬರನ್ನೊಬ್ಬರು ಪ್ರಶಂಸಿಲು ಕಲಿಯಬೇಕು. ಆತ್ಮೀಯತೆಯಿಂದ ಮತ್ತು ಮಧುರ ಭಾವನೆಗಳಿಂದ ಗೆಳೆಯರಂತೆ ಇರಬೇಕು.

2. ದಾಂಪತ್ಯ ಜೀವನದಲ್ಲಿ ಲೈಂಗಿಕ ಕ್ರಿಯೆಯು ಪ್ರಾಮುಖ್ಯವಾಗಿದ್ದರೂ, ಅದನ್ನೇ ದಾಂಪತ್ಯದ ಮೂಲ ಎಂದು ತಿಳಿಯುವುದು ಸರಿ ಅಲ್ಲ. ಲೈಂಗಿಕ ಕ್ರಿಯೆಯಲ್ಲಿ ಹತೋಟಿ ಇರುವುದು ದಾಂಪತ್ಯದ ವಿಜಯವಾಗಿದೆ.

3. ದಂಪತಿಗಳು ತಮ್ಮೊಳಗೆ ಪ್ರೀತಿ–ವಿಶ್ವಾಸವನ್ನು ಧೃಡಪಡಿಸಬೇಕಾದರೆ ತಪ್ಪಿಯೂ ಸಂಶಯ ಮಾಡಬಾರದು. ಮದುವೆಯ ಮೊದಲಿನ ವಿಷಯುಗಳನ್ನು ಕೆದಕದೆ ತಮ್ಮ ಮುಂದಿನ ಜೀವನವು ಸುಖಮಯವಾಗಿರಲು ಪ್ರಯತ್ನಿಸಬೇಕು.

4. ಮಲಗುವ ಕೋಣೆಯಲ್ಲಿ ಲೈಂಗಿಕ ಕ್ರಿಯೆಗೆ ದಂಪತಿಗಳು ಸ್ವಾಗತಿಸಬೇಕು. ಲೈಂಗಿಕ ಕ್ರಿಯೆಗೆ ಸಹಕಾರ ನೀಡದ ಪಕ್ಷದಲ್ಲಿ ಸಂಶಯ ಬರುವುದು ಸಹಜ ಮತ್ತು ಮೂರನೆಯವರ ಬಳಿ ತಮ್ಮ ಲೈಂಗಿಕ ತೃಷೆ ನೀಗಿಸಲು ಗಂಡು ಅಥವಾ ಹೆಣ್ಣು ಹೋಗುವ ಪರಿಸ್ಥಿತಿ ಉದ್ಭವವಾಗದಂತೆ ನೋಡಬೇಕು.

5. ಹೆಂಡತಿ ಗರ್ಭಿಣಿ ಆಗಿರುವಾಗ ಲೈಂಗಿಕ ಕ್ರಿಯೆಯನ್ನು ತಡೆಯುವುದು ಅತ್ಯುತ್ತಮ. ಈ ವಿಷಯದಲ್ಲಿ ಗಂಡಿಗೆ ಸ್ವನಿಯಂತ್ರಣ ಬಹಳ ಅಗತ್ಯ. ಈ ಸಮಯದಲ್ಲಿ ಧಾರ್ಮಿಕ ಪಠ್ಯಗಳನ್ನು ಓದುವುದು ಅಥವಾ ಧಾರ್ಮಿಕ

ಸಭೆಗಳಲ್ಲಿ ತಮ್ಮನ್ನು ತಾವೇ ತೊಡಗಿಸುವುದು ಮನಸ್ಸನ್ನು ಹತೋಟಿಯಲ್ಲಿಡಲು ಸಹಕಾರಿಯಾಗುತ್ತದೆ.

6. ದೇಶದ ಹಿತಾಸಕ್ತಿಯನ್ನು ಕಾಪಾಡುವ ದಿಶೆಯಲ್ಲಿ ದಂಪತಿಗಳು 2ಕ್ಕಿಂತ ಜಾಸ್ತಿ ಮಕ್ಕಳು ಅಗದಂತೆ ಜಾಗ್ರತೆ ವಹಿಸಬೇಕು. ಮಕ್ಕಳಾಗದ ದಂಪತಿಗಳು ಸುಳ್ಳು ಪಂಡಿತರ ಸಂಗ ಮಾಡುವ ಬದಲು ನುರಿತ ವೈದ್ಯಕೀಯ ತಜ್ಞರ ಸಲಹೆ ಪಡೆಯುವುದು ಉತ್ತಮ.

7. ಮದುವೆ ಸಂಬಂಧದಲ್ಲಿ ಮಕ್ಕಳು ಹುಟ್ಟಿಲ್ಲ ಎಂದು ಹೆಣ್ಣನ್ನು ದೂಷಿಸುವುದು ಸರಿಯಲ್ಲ. ಮಕ್ಕಳಾಗದೆ ಇರಲು ಹಲವಾರು ಕಾರಣಗಳು ಇರುತ್ತವೆ. ಗಂಡ ಬೇರೊಂದು ಮದುವೆಗೆ ಆಲೋಚಿಸುವ ಬದಲು ದತ್ತು ಸ್ವೀಕಾರ ಮಾಡುವುದು ಸೂಕ್ತ.

8. ಸೊಸೆಯಾದವಳು, ಗಂಡನ ತಾಯಿಯು ಕಠಿಣವಾಗಿ ವರ್ತಿಸುವುದರಿಂದ ಅವರೊಂದಿಗೆ ವಾಸಿಸಲು ಸಾಧ್ಯವೇ ಇಲ್ಲ ಎಂದು ಅಮಾನವೀಯ ವರ್ತನೆ ತೋರಿಸುವ ಬದಲು ಅತ್ತೆಯನ್ನು ಮತ್ತು ಅವರ ಮನಸ್ಸನ್ನು ಅರ್ಥ ಮಾಡಿಕೊಳ್ಳಲು ಕಲಿಯಬೇಕು. ಅಂತೆಯೇ ಅತ್ತೆ–ಮಾವಂದಿರು ತಮ್ಮ ಶುಚಿತ್ವವನ್ನು ಕಾಪಾಡಿಕೊಂಡು ಸೊಸೆಯು ತಮ್ಮ ಮಗಳ ಸಮಾನ ಎಂದು ತಿಳಿಯುವುದು ಅಗತ್ಯ.

9. ಹಿಂದಿನಿಂದ ದೂಷಿಸುವವರನ್ನು ಎಂದಿಗೂ ಹತ್ತಿರ ಬರದಂತೆ ತಡೆಯಬೇಕು. ಏಕೆಂದರೆ ಇಂತಹವರು ದಂಪತಿಗಳ ಸಂತೋಷಭರಿತ ಜೀವನದಲ್ಲಿ ಸಂಶಯದ ಬೀಜ ಬಿತ್ತಲು ಹಾತೊರೆಯುತ್ತಾರೆ ಎಂದು ಅರ್ಥ ಮಾಡಬೇಕು.

10. 'ದೇವರು ಎಲ್ಲವೂ ಒಳ್ಳೆಯದನ್ನೇ ಸೃಷ್ಟಿಸಿದ್ದಾನೆ. ಆಗುವುದೆಲ್ಲಾ ತಮ್ಮ ಒಳಿತಿಗೆ' ಎಂದು ಅರಿತು ದಂಪತಿಗಳು ತಮ್ಮೊಳಗೆ ಅಸಹಕಾರ ತೋರದೆ ಸಹಕರಿಸಿ ಜೀವಿಸಲು ಕಲಿಯಬೇಕು.

11. ಅವಿಭಕ್ತ ಕುಟುಂಬದಲ್ಲಿ ವಾಸಿಸುವ ದಂಪತಿಗಳಿಗೆ ಏಕಾಂತ ಸಿಗುವುದು ವಿರಳ. ಆದ್ದರಿಂದ ಅವರು ತಮ್ಮ ಬಿಡುವಿನ ಸಮಯವನ್ನು ಪಾರ್ಕ್, ಸ್ಪೋರ್ಟ್ಸ್–ಸ್ಟೇಡಿಯಂ ಇಂತಹ ಸ್ಥಳಗಳಿಗೆ ಭೇಟಿ ನೀಡಿ ಏಕಾಂತ ಸೃಷ್ಟಿಸಿ ಒಟ್ಟಾಗಿ ಆನಂದದಿಂದ ವಿಹರಿಸಬಹುದು.

12. ದಂಪತಿಗಳಲ್ಲಿ ಮನಸ್ಥಾಪ ಉದ್ಭವ ಆದಾಗ ಅಮಲು ಸೇವನೆ, ಸಿಗರೇಟ್ ಇತ್ಯಾದಿ ಹಾಳು ಅಭ್ಯಾಸಗಳಿಗೆ ಬಲಿ ಬಿದ್ದು ಜುಗಾರಿ, ಜೂಜು ಆಟಗಳಲ್ಲಿ ಹಣವನ್ನು ಹಾಳುಗೆಡುವುದು ಸೂಕ್ತವಲ್ಲ.

13. ರಜಾ ದಿನಗಳಲ್ಲಿ ದಂಪತಿಗಳು ಕುಟುಂಬ ಸಮೇತ ವಿಹಾರಕ್ಕೆ ಹೋಗುವುದು ಹಾಗೂ ಹವಾಮಾನ ಬದಲಾವಣೆ ಮದುವೆ ಜೀವನದಲ್ಲಿ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳಲು ಸಹಾಯವಾಗುತ್ತದೆ.

14. ಗಂಡನಾಗಲಿ ಅಥವಾ ಹೆಂಡತಿಯಾಗಲಿ ಕುಟುಂಬದವರ ಮನೆಗಳಿಗೆ ಹೆಚ್ಚು ಭೇಟಿ ನೀಡುವುದು ತಪ್ಪು ಅಥವಾ ಒಬ್ಬನ/ಳ ಕುಟುಂಬದವರಿಗೆ ಮಾತ್ರ ಹೆಚ್ಚಿನ ಮಹತ್ವ ನೀಡಿ ಪಕ್ಷಪಾತ ಮಾಡುವುದು ಸರಿಯಲ್ಲ.

15. ದಂಪತಿಗಳು ಪರಸ್ಪರರ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಮಾನ ಮಹತ್ವ ನೀಡಬೇಕು. ಗಂಡನು ತನ್ನ ಹೆಂಡತಿಯ ಆರೋಗ್ಯವನ್ನು ನಿರ್ಲಕ್ಷಿಸುವುದು ಅಥವಾ ಹೆಂಡತಿ ತನ್ನ ಗಂಡನ ಆರೋಗ್ಯವನ್ನು ನಿರ್ಲಕ್ಷಿಸುವುದು ಸರಿಯಲ್ಲ.

16. ಮದುವೆಯ ಸಂಬಂಧದಿಂದ ಹುಟ್ಟಿರುವುದು ಗಂಡಾಗಲೀ ಹೆಣ್ಣಾಗಲೀ ಇಬ್ಬರನ್ನೂ ಸಮಾನತಾ ಭಾವದಿಂದ ಬೆಳೆಸಬೇಕು. ಹೆಣ್ಣು ಮಗುವನ್ನು ಕಡೆಗಣಿಸುವುದು, ಹೀಯಾಳಿಸುವುದು, ಗಂಡು ಮಗುವನ್ನು ಅತೀ ಹೆಚ್ಚು ಕೊಂಡಾಟ ಮಾಡುವುದು ಅತಿರೇಖಕರ ವರ್ತನೆ ಅಗಿದೆ.

17. ದಾಂಪತ್ಯ ಜೀವನದಲ್ಲಿ ಇಬ್ಬರೊಳಗೆ ಕೀಳರಿಮೆ/ ಹಿರಿತನ ಸಲ್ಲದು. ಹೆಂಡತಿ ಮನೆಗೆಲಸ ಮಾಡುತ್ತಾಳೆ; ಗಂಡ ಹೊರಗೆ ದುಡಿದು ಸಂಪಾದಿಸುತ್ತಾನೆ ಎಂದಾಕ್ಷಣ, ಅವರ ನಡುವೆ ಒಡೆಯ ಮತ್ತು ನೌಕರ ಎಂಬ ಭಾವನೆ ಬರದಂತೆ ಜಾಗ್ರತೆ ವಹಿಸಬೇಕು. ಮನೆ ಕೆಲಸವೂ ಹಣ ಸಂಪಾದಿಸುವಷ್ಟೇ ಕಷ್ಟದ ಕೆಲಸ ಎಂಬ ಅರಿವು ಗಂಡನಿಗೆ ಇರತಕ್ಕದ್ದು.

18. ಇಂದಿನ ಆಧುನಿಕ ಯುಗದಲ್ಲಿ ದಂಪತಿಗಳು ಹೊರಗೆ ಸಂಪಾದಿಸುತ್ತಾರೆ. ಅವರಿಗೆ ತಮಗೆ ಹುಟ್ಟಿದ ಮಕ್ಕಳಿಗೆ ಸಾಕಷ್ಟು ಸಮಯ ಕೊಡಲು ಆಗದೆ ಇರಬಹುದು. ಆದರೆ ಅಪರೂಪದಲ್ಲಿ ದಂಪತಿಗಳು ತಮ್ಮ ಮಕ್ಕಳ ಸಂಗದಲ್ಲಿರುವಾಗ ಮಕ್ಕಳನ್ನು ಕಡೆಗಾಣಿಸಬಾರದು. ಮಕ್ಕಳ ಮಾತಿಗೆ ಮಹತ್ವ ಕೊಡುವ ಬದಲು ಮಕ್ಕಳು ಮಾತನಾಡುವಾಗ 'ಬಾಯಿ ಮುಚ್ಚು, ಹೊರಗೆ ಹೋಗಿ ಬೇರೆ ಮಕ್ಕಳ ಒಟ್ಟಿಗೆ ಆಡು' ಇತ್ಯಾದಿ., ಮಕ್ಕಳ

ಮನಸ್ಸಿಗೆ ಆಘಾತವುಂಟು ಮಾಡಿದರೆ ಅವರಿಗೆ ಹೆತ್ತವರ ವಿಷಯದಲ್ಲಿ ಹೇಸಿಗೆ ಭಾವನೆ ಉಂಟಾಗುವ ಸಾಧ್ಯತೆ ಇರುತ್ತದೆ.

19. ಮಗು ಹೆತ್ತವರ ಪ್ರತಿಯೊಂದು ಕೆಲಸ ಮತ್ತು ಸಂಭಾಷಣೆಯನ್ನು ಗಮನವಿಟ್ಟು ನೋಡುತ್ತೆ ಮತ್ತು ಹೇಳುತ್ತೆ ಆದ್ದರಿಂದ ಮಗುವಿನ ಸಮ್ಮುಖ ಜಗಳ ವಾಡುವುದು, ಹಾಳು ಶಬ್ದಗಳನ್ನು ಪ್ರಯೋಗಿಸುವುದು ಮಕ್ಕಳ ಭವಿಷ್ಯದ ಹಿತ ದೃಷ್ಟಿಯಿಂದ ಸರಿಯಲ್ಲ.

## 4. ಸ್ವಸ್ಥ ಚಿತ್ತ:-

ಸುಖ ಸಂತೋಷದ ದಾಂಪತ್ಯ ಜೀವನ ಸಾಗಿಸಲು ಸ್ವಸ್ಥ ಚಿತ್ತ ಅತೀ ಅಗತ್ಯ. ಸ್ವಸ್ಥ ಚಿತ್ತ ಇಲ್ಲದ ವ್ಯಕ್ತಿಗೆ ಮದುವೆ ಮಾಡಿದರೆ ದಾಂಪತ್ಯ ಜೀವನವು ವಿಚ್ಛೇದನದಲ್ಲಿ ಕೊನೆಗೊಳ್ಳುತ್ತದೆ. ಚಿತ್ತವು ಗುಣಮುಖವಾಗುವುದಿಲ್ಲ ಎಂದಾದಲ್ಲಿ, ಹಿಂದು ವಿವಾಹ ಕಾನೂನಿನ ಸೆಕ್ಷನ್ 13 (1) (111) ಪ್ರಕಾರ ವಿಚ್ಛೇದನೆಯನ್ನು ಕೌಟುಂಬಿಕ ನ್ಯಾಯಲಯದಲ್ಲಿ ಪಡೆಯಬಹುದು. ಅದರೆ ಈ ಸಂದರ್ಭದಲ್ಲಿ ಸೂಕ್ತ ವೈದ್ಯರು ಅವರ ತಜ್ಞ ಅಭಿಪ್ರಾಯವನ್ನು ಕೊಡಬೇಕಾಗುತ್ತದೆ.

## 5. ಮಾನವ ಹಕ್ಕುಗಳು:-

ಪ್ರತಿಯೊಬ್ಬನು ತಮ್ಮ ಖಾಸಗಿ ಮತ್ತು ಕುಟುಂಬ ಜೀವನ, ಅವರ ಮನೆ ಮತ್ತಿತರ ವಿಷಯಗಳಿಗೆ ಗೌರವ ಕೊಡಬೇಕು. ಮಾನವ ಹಕ್ಕುಗಳ ರಕ್ಷಣೆ ಮತ್ತು ಮೂಲಭೂತ ಸ್ವಾತಂತ್ರ್ಯದ ಸಮ್ಮೇಳನ 1950 ಇದರಲ್ಲಿ ನಿರ್ಧರಿಸಿದಂತೆ ಜಾತಿ, ಧರ್ಮ, ಭಾಷೆ, ರಾಜಕೀಯ ವಿರೋಧಾಭಾಸ ಮಾಡದೆ ಎಲ್ಲಾ ನಾಗರಿಕರಿಗೂ ಸಮಾನ ಹಕ್ಕು ಮತ್ತು ಸ್ವಾತಂತ್ರ್ಯ ಸಿಗುವಂತಾಗಬೇಕು.

## 6. ದಾಂಪತ್ಯ ಜೀವನ:-

ಮದುವೆಯೆಂಬುದು ಒಂದು ಸಾಕ್ರಾಮೆಂತ್ ಯಾನೆ ಸಂಸ್ಕಾರ. ಈ ಅಧಿಕಾರವು ಸ್ವರ್ಗದಿಂದ ದೊರಕಿದ್ದಾಗಿದೆ. ವಿವಾಹದ ಸಂಸ್ಕಾರಗಳು ಮತ್ತು ಕಾರ್ಯಾಚರಣೆಗಳು ಪುರುಷನು ಹೆಣ್ಣನ್ನು ತನ್ನ ಅರ್ಧಾಂಗಿಯಾಗಿ ಸ್ವೀಕಾರ ಮಾಡುತ್ತಾನೆ, ಮತ್ತು ಅವಳಿಗೆ ರಕ್ಷಣೆ, ಜೀವಿಸಲು ಬೇಕಾಗುವ ಸರ್ವವನ್ನು ಪೂರೈಸುತ್ತಾನೆ ಎಂಬುದನ್ನು ಸೂಚಿಸುತ್ತವೆ. ಗಂಡು ಜೀವನ ಸಂಗಾತಿಯಾಗಿ ಹೆಣ್ಣಿನ ಕಷ್ಟ ಸುಖಗಳೆರಡರಲ್ಲೂ ಸಹಭಾಗಿಯಾಗುತ್ತೇನೆ ಎಂಬ ಭರವಸೆ ನೀಡುತ್ತಾನೆ. ಮದುವೆಯ ಅರ್ಥ ಇದಾದಲ್ಲಿ 'ಸ್ತ್ರೀಧನ'ವೆಂಬ ವಿಷಯವು ನಡುವೆ ಬರಲು ಅವಕಾಶ ಇರುವುದಿಲ್ಲ. ಈ

ಅಭಿಪ್ರಾಯವನ್ನು ಭಾರತದ ಸುಪ್ರೀಮ್ ಕೋರ್ಟ್ ಒಂದು ಕೇಸಿನ ತೀರ್ಪಿನಲ್ಲಿ ತಿಳಿಸಿರುತ್ತದೆ.

ಯಾವುದೇ ಗಿಡ / ಸಸಿಯನ್ನು ಅದರ ಮೂಲ ಸ್ಥಾನದಿಂದ ಬೇರೆ ಸ್ಥಳದಲ್ಲಿ ನೆಡುವಾಗ ಬಹಳ ಜಾಗ್ರತೆ ವಹಿಸಬೇಕು. ಅದೇ ರೀತಿ ಹೆಣ್ಣು ಮದುವೆ ಅಗಿ ಹೊಸ ಮನೆಗೆ ಹೋಗುವಾಗ ನಾವು ಗಿಡಕ್ಕೆ ವಹಿಸುವ ಜಾಗ್ರತೆಕ್ಕಿಂತ ಹೆಚ್ಚಿನ ಜೋಪಾನದಲ್ಲಿ ಹೆಣ್ಣನ್ನು ನೋಡುವ ಅಗತ್ಯ ಇದೆ. ಏಕೆಂದರೆ ಗಿಡಕ್ಕೆ ಮನುಷ್ಯರಂತೆ ಭಾವನೆಗಳು ಇರುವುದಿಲ್ಲ. ಆದರೆ ಹೆಣ್ಣಿಗೆ ಭಾವನೆಗಳಿರುತ್ತವೆ. ಮದುವೆ ಆಗಿ ಹೊಸ ಮನೆಗೆ ಬರುವ ಮದುಮಗಳನ್ನು ಸ್ವಾಗತಿಸಿ, ಪ್ರೀತಿ ವಾತ್ಸಲ್ಯದಿಂದ, ಉದಾರ ಮನಸ್ಸಿನಿಂದ ಅವಳ ಜತನ ಮಾಡಿದಲ್ಲಿ ಹೆಣ್ಣು ಹೊಸ ಮನೆಯ ಹೊಸ ವಾತಾವರಣಕ್ಕೆ ಹೊಂದಿಕೊಂಡು ಹೋಗುತ್ತಾಳೆ ಹಾಗೂ ಗಂಡನಿಗೆ ಅತ್ತೆ, ಮಾವನಿಗೆ ಹಾಗೂ ಗಂಡನ ಮನೆಗೆ ಅವಳು ಮಾನ- ಸನ್ಮಾನ ತರುವ ವಜ್ರವಾಗಿ ಪ್ರಜ್ವಲಿಸುತ್ತಾಳೆ.

ಇಂದಿನ ಆಧುನಿಕ ಯುಗದಲ್ಲಿ ಗಂಡು ಹೆಣ್ಣಿನ ನಡುವೆ ಪಂತಾಟ ನಡೆಯುತ್ತದೆ. ನಮ್ಮ ಹಿರಿಯರ ಕಾಲದಲ್ಲಿ ಈ ಭೂಲೋಕ ಗಂಡಿನ ನಿಯಂತ್ರಣದಲ್ಲಿತ್ತು. ಆದರೆ ಈಗ ಕಾಲ ಬದಲಾಗಿದೆ. ಹೆಣ್ಣು ಗಂಡಿನಂತೆ ಸರಿ ಸಮಾನತೆ ಆಪೇಕ್ಷಿಸಿದರೂ ಗಂಡು ತನ್ನ ಸರಿ ಸಮಾನ ಹೆಣ್ಣು ಇದ್ದಾಳೆ ಎಂದು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ಸಮಾಜದ ಒಳ್ಳೆತನವನ್ನು ರಕ್ಷಿಸಿ ಕಾಪಾಡಿಕೊಂಡು ಹೋಗುವತ್ತ ಹೆಣ್ಣಿನ ಪಾತ್ರ ಬಹು ಮುಖ್ಯ. ಆದ್ದರಿಂದ ಹೆಣ್ಣಿಗೆ ಗೌರವ ಕೊಡುವುದು ಅತೀ ಅಗತ್ಯ. ಗಂಡನನ್ನು ಅರ್ಥ ಮಾಡಿಕೊಂಡು ಮದುವೆಯ ಬಂಧನವನ್ನು ಕಾಪಾಡಿಕೊಂಡು ಹೋಗಲು ಹೆಣ್ಣು ಪ್ರಮುಖ ಪಾತ್ರ ವಹಿಸುತ್ತಾಳೆ ಎಂದು ಹೇಳಬಹುದು.

## 7. ಹೆಚ್ಚುತ್ತಿರುವ ವಿಚ್ಛೇದನೆಗಳು:-

ಏಕತೆ, ಪ್ರೀತಿ ಮತ್ತು ಸುಖಮಯ ದಾಂಪತ್ಯ ಈ ವಿಷಯಗಳು ಇಂದಿನ ದಂಪತಿಗಳಲ್ಲಿ ವಿರಾಳವಾಗುತ್ತ ಇರುವುದರಿಂದ ವಿಚ್ಛೇದನಕ್ಕೆ ಪ್ರಚೋದನೆ ಹೆಚ್ಚಿದೆ. 1989ರಲ್ಲಿ ಅಮೇರಿಕದ ನ್ಯೂಯಾರ್ಕ್‌ನಲ್ಲಿ ನಡೆದ ಸಮೀಕ್ಷೆ ಪ್ರಕಾರ ಅಲ್ಲಿ ಜರಗಿದ 50% ಮದುವೆಗಳು ವಿಚ್ಛೇದನದಲ್ಲಿ ಅಂತ್ಯ ಕಾಣುತ್ತವೆ. ಆದುದರಿಂದ 60% ಮಕ್ಕಳು ಒಬ್ಬ ರಕ್ಷರರ (ತಂದೆ ಅಥವಾ ತಾಯಿ) ಕೈಯಲ್ಲಿ ಬೆಳೆಯುತ್ತವೆ. ಹಿಂದಿನ ಕಾಲದಲ್ಲಿ ಹೆಣ್ಣು ತನ್ನ ಗಂಡನ ಮನೆಯೇ ಸರ್ವಸ್ವ ಎಂದು ಭಾವಿಸಿ ಜೀವಿಸುತ್ತಿದ್ದಳು. ಆದರೆ ಇಂದಿನ ಮದುಮಗಳು/ಹೆಂಡತಿ/ಹೆಣ್ಣು ಈ ರೀತಿಯ ವಾದವನ್ನು ಸ್ವೀಕರಿಸಲು ತಯಾರಿಲ್ಲ. ಎಲ್ಲರೂ ಸ್ವಾತಂತ್ರ್ಯ ಅಪೇಕ್ಷಿಸುತ್ತಾರೆ. ಇಂದಿನ ಕೆಲವು ಹೆಣ್ಣು ಮಕ್ಕಳಿಗೆ

ಗಂಡನ ಹಣ ಮತ್ತು ಒಳ್ಳೆಯ ಸವಲತ್ತುಗಳು ಬೇಕು ಅದರೆ ಮಕ್ಕಳು ಬೇಡ. ಈ ಆಲೋಚನೆ ಬಹಳ ದುಃಖಕರ ಮತ್ತು ಬೇಸರದ ಸಂಗತಿ ಆಗಿದೆ.

## 8. ಕೌಟುಂಬಿಕ ರಾಜಿ ಸಂಧಾನ ಪ್ರಕ್ರಿಯೆ:–

ದಾಂಪತ್ಯ ಜೀವನದಲ್ಲಿ ಮನಸ್ತಾಪವಿರುವ ಕುಟುಂಬಗಳಲ್ಲಿ ಸ್ಥಿರತೆ ಕಾಪಾಡಲು ಕೌಟುಂಬಿಕ ವ್ಯಾಜ್ಯ ವಿವಾದಗಳನ್ನು ಖುಲ್ಲಂ ಮನಸ್ಸಿನಿಂದ ಕೊಡು ಮತ್ತು ತೆಗೆದುಕೊ ಎಂಬ ರೀತಿಯಲ್ಲಿ ರಾಜಿ ಸಂಧಾನ ಪ್ರಕ್ರಿಯೆ ಮೂಲಕ ಇತ್ಯರ್ಥಗೊಳಿಸಿದರೆ ಮಾತ್ರ ಕುಟುಂಬಗಳಲ್ಲಿ ಪ್ರೀತಿ– ಪ್ರೇಮ ವಿಶ್ವಾಸ ರಾಜ್ಯಭಾರ ಮಾಡುತ್ತದೆ. ಈ ಧ್ಯೇಯ ಕೌಟುಂಬಿಕ ನ್ಯಾಯಾಲಯಗಳಿಗೆ ಅತೀ ಅವಶ್ಯ.

1989ರಲ್ಲಿ ಮುಂಬಯಿಯಲ್ಲಿ ಜರಗಿದ ವಕೀಲರ ಮತ್ತು ವಿಮೋಚನಾ ವಿಮನ್ ಗ್ರೂಪ್ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಧಾರದಂತೆ ಒಮ್ಮೆ ಗಂಡನ ಮನೆಯಿಂದ ಹೊರದಬ್ಬಿದ ಹೆಣ್ಣಿಗೆ ರಾಜಿ ಸಂಧಾನ ಮಾಡಿ ಅವಳ ಇಚ್ಛೆಗೆ ವಿರುದ್ಧವಾಗಿ ಗಂಡನ ಮನೆಗೆ ಹೋಗಲು ಒತ್ತಾಯಿಸುವುದು ಸರಿಯಲ್ಲ. ಯಾಕೆಂದರೆ ಈ ರೀತಿ ಮಾಡುವುದರಿಂದ ಹೆಣ್ಣಿನ ಜೀವನ ಹಾಳುಗೆಡವಿದಂತಾಗುತ್ತದೆ.

ದಾಂಪತ್ಯ ವಿಚ್ಛೇದನದಲ್ಲಿ ಆರ್ಥಿಕ ಸ್ಥಿತಿಗತಿಯು ಪ್ರಮುಖ ಪಾತ್ರ ವಹಿಸುತ್ತದೆ. ಹೆಚ್ಚಿನ ಅವಧಿಗೆ ಬೇರ್ಪಟ್ಟಿರುವ ದಂಪತಿಗಳನ್ನು ಒಂದುಗೂಡಿಸಲು ಪ್ರಯತ್ನಿಸುವ ಕೌಟುಂಬಿಕ ನ್ಯಾಯಾಲಯ ಪ್ರಾಮುಖ್ಯವಾಗಿ ಹೆಣ್ಣಿನ/ಹೆಂಡತಿಯ ಅಬಿಪ್ರಾಯ ಪಡೆಯಬೇಕು ಯಾಕೆಂದರೆ ಆರ್ಥಿಕ ಭದ್ರತೆಯು ಹೆಣ್ಣಿನ ಮುಂದಿನ ಜೀವನಕ್ಕೆ ಬಹಳ ಅವಶ್ಯವಾಗಿದೆ.

## ಕೌಟುಂಬಿಕ ನ್ಯಾಯಾಲಯದ ಕಾರ್ಯ ನಿರ್ವಹಣೆ:–

ಕೌಟುಂಬಿಕ ನ್ಯಾಯಾಲಯದಲ್ಲಿ ಕಡ್ಡಾಯವಾಗಿ ಸಿವಿಲ್ ಕಾನೂನು ಮತ್ತು ಸಾಕ್ಷ್ಯ ಆಧಿ ನಿಯಮಗಳನ್ನು ಪಾಲಿಸಬೇಕೆಂದಿಲ್ಲ. ಪ್ರಕ್ರಿಯಾ ಕಾನೂನನ್ನು ಮಾರ್ಗದರ್ಶಿಯಾಗಿ ಪಾಲಿಸಬೇಕಲ್ಲದೆ, ಬದ್ಧತೆ ಪಕ್ರಿಯೆಯಾಗಿ ಅಲ್ಲ.

ಭಾರತೀಯರಾದ ನಮಗೆ ನಾಗರಿಕ ಹಕ್ಕುಗಳು, ಸ್ಥಾನಮಾನ, ಅಧಿಕಾರ ಮತ್ತು ನ್ಯಾಯಾಲಯಗಳಲ್ಲಿ ನಡೆಸುವ ಕಾನೂನು ಪ್ರಕ್ರಿಯೆಗಳ ವಿಷಯದಲ್ಲಿ ಅಗತ್ಯದ ಜ್ಞಾನ ಇರುವುದಿಲ್ಲ. ಏನೂ ಕಷ್ಟವಿಲ್ಲದ ಸಂತೋಷದ ಜೀವನ ನಡೆಸಲು ನಮಗೆ ಆನಂದ ಆಗುತ್ತದೆ. ನಮಗೆ ಬಂದಿರುವ ತೊಂದರೆಯನ್ನು ನಿವಾರಿಸಲು ಯಾವುದೇ ಮಾರ್ಗೋಪಾಯ ಕಾಣುವುದಿಲ್ಲವೆಂದು ಮನವರಿಕೆ ಆದಾಗ ಮಾತ್ರ ನಾವು

ಎಲ್ಲವನ್ನು ಒಮ್ಮೆಲೇ ಕಲಿಯಲು ಪ್ರಯತ್ನಿಸುತ್ತೇವೆ. ಅಲ್ಲಿಯವರೆಗೆ ನಮ್ಮ ರಕ್ಷಣೆಯನ್ನು ಬೇರೆಯವರು ಮಾಡಬೇಕೆಂದು ಆಶಿಸುತ್ತೇವೆ. ನಾವು ನಮ್ಮ ರಕ್ಷಣೆಯನ್ನು ಮಾಡಿಕೊಳ್ಳುವುದಿಲ್ಲ. ಆದರೆ ನ್ಯಾಯಾಲಯದಲ್ಲಿ ನಮ್ಮ ಈ ಚಿಂತನೆ ನಮ್ಮನ್ನು ರಕ್ಷಿಸುವುದಿಲ್ಲ. ಯಾಕೆಂದರೆ ತಪ್ಪು ಮಾಡಿ ನನಗೆ ಅದು ತಪ್ಪೆಂದು ಗೊತ್ತಿರಲಿಲ್ಲ ಎಂದು ಹೇಳಿದರೆ ಕಾನೂನು ಕ್ಷಮಿಸುವುದಿಲ್ಲ.

**ಅರ್ಥ ವಿವರಣೆ:** ಕುಟುಂಬವೆಂದರೆ ಗಂಡ, ಹೆಂಡತಿ ಅವರಿಗೆ ಜನಿಸಿದ ಮಕ್ಕಳು. ಮದುವೆಯಾದ ಹೆಣ್ಣು ಅವಳ ಗಂಡನ ಕುಟುಂಬಕ್ಕೆ ಸಂಬಂಧಿತಳು.

## ಕೌಟುಂಬಿಕ ಒಪ್ಪಂದ/ ಇತ್ಯರ್ಥ

ಕೌಟುಂಬಿಕ ಒಪ್ಪಂದ/ ಇತ್ಯರ್ಥ ಕಡ್ಡಾಯವಾಗಿ ನೋಂದಾಣಿ ಆಗಬೇಕೆಂದಿಲ್ಲ.

1. ಕೌಟುಂಬಿಕ ಒಪ್ಪಂದವು ನ್ಯಾಯಯುತವಾಗಿ ಸೂಕ್ತ ರೀತಿಯಲ್ಲಿ ವಿಭಾಗ ಅಥವಾ ಕುಟುಂಬದ ಸದಸ್ಯರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಇರಬೇಕು.
2. ಕೌಟುಂಬಿಕ ಒಪ್ಪಂದವು ಸ್ವಚ್ಛೆಯಿಂದ ಮತ್ತು ಸದ್ಭಾವನೆಯಿಂದ ಆಗಿರಬೇಕು. ಮೋಸ, ವಂಚನೆ ಮತ್ತು ಅನುಚಿತ ಪ್ರಭಾವದಿಂದ ಆಗತಕ್ಕದ್ದಲ್ಲ.
3. ಬಾಯ್ಮಾತಿನಲ್ಲಿ ಮಾಡಿದ ಕೌಟುಂಬಿಕ ಒಪ್ಪಂದ ವ್ಯವಸ್ಥೆಯನ್ನು ನೊಂದಣಿ ಮಾಡಬೇಕೆಂದಿಲ್ಲ. ಆದರೆ ಕೌಟುಂಬಿಕ ಇತ್ಯರ್ಥವನ್ನು ಬರೆದು ಇಡುವಾಗ ನೊಂದಣಿಯ ಅಗತ್ಯವಿದೆ.
4. ಕಾನೂನು ರೀತ್ಯಾ ಇರುವ ನ್ಯಾಯಯುತ ಸಮಸ್ಯೆಯನ್ನು ಕೌಟುಂಬಿಕ ಒಪ್ಪಂದದ ಮೂಲಕ ಇತ್ಯರ್ಥ ಮಾಡಿದ್ದರೆ ಆ ಒಪ್ಪಂದ ಎರಡು ಪಾರ್ಟಿಗಳಿಗೂ ಅನ್ವಯಿಸುತ್ತದೆ.
5. ಅವಿಭಕ್ತ ಕುಟುಂಬಗಳಲ್ಲಿ ಶಾಂತಿ ಕಾಪಾಡಲು ಕೌಟುಂಬಿಕ ಒಪ್ಪಂದವನ್ನು ಮಾಡಿದ್ದಲ್ಲಿ, ಅದರಲ್ಲಿರುವ ಇತ್ಯರ್ಥವು ಪ್ರಾಮಾಣಿಕವಾಗಿದ್ದರೆ ಅಂತಹ ಒಪ್ಪಂದಕ್ಕೆ ನ್ಯಾಯಾಲಯ ಮನ್ನಣೆ ಕೊಡಬೇಕೆಂದು ಭಾರತದ ಅತ್ಯುಚ್ಛ ನ್ಯಾಯಾಲಯ ತಿಳಿಸಿರುತ್ತದೆ.
6. ಕುಟುಂಬದ ಆಸ್ತಿಯನ್ನು ಪಾಲು ಮಾಡುವ ಸಂದರ್ಭದಲ್ಲಿ ವಾದ–ವಿವಾದಗಳು ಇರುವುದು ಸಹಜ. ಅಂತಹ ಸಂಧರ್ಭದಲ್ಲಿ ಕೌಟುಂಬಿಕ ಒಪ್ಪಂದ ಮಾಡುವಾಗ ಕುಟುಂಬದ ಸದಸ್ಯರಲ್ಲಿ ವಿವಾದಗಳು ಇದ್ದವು ಎಂಬುದಾಗಿ ನ್ಯಾಯಾಲಯಕ್ಕೆ

ಮನವರಿಕೆ ಅದಲ್ಲಿ ಆ ಒಪ್ಪಂದವನ್ನು ನ್ಯಾಯಾಲಯ ಸ್ವೀಕರಿಸುತ್ತದೆ. ಕುಟುಂಬಗಳಲ್ಲಿ ಶಾಂತಿ ಕಾಪಾಡಲು ಮತ್ತು ಕುಟುಂಬದ ಎಲ್ಲ ಸದಸ್ಯರಿಗೆ ನ್ಯಾಯ ಸಿಗುವಂತಾಗಲು ನ್ಯಾಯಾಲಯಗಳು ಕೌಟುಂಬಿಕ ಒಪ್ಪಂದಕ್ಕೆ ಉತ್ತೇಜನ ನೀಡುತ್ತವೆ.

7 ಅಥವಾ ಹೆಚ್ಚಿನ ಜನರು ಒಟ್ಟುಗೂಡಿ ಸೊಸೈಟಿ ಕಾನೂನಿನ ಪ್ರಕಾರ ನೋಂದಾಯಿಸಲ್ಪಟ್ಟು, ಸಾಮಾಜಿಕ ಅಭಿವೃದ್ಧಿಗಾಗಿ ಕಾರ್ಯಪ್ರವೃತ್ತವಾಗಿರುವ ಸಂಸ್ಥೆಗಳು ಕೌಟುಂಬಿಕ ಸಮಸ್ಯೆಗಳನ್ನು ಪರಿಹರಿಸಲು/ಇತ್ಯರ್ಥ ಮಾಡಲು ಕೆಲಸ ಮಾಡುವುದರಿಂದ ಕೌಟುಂಬಿಕ ನ್ಯಾಯಾಲಯಗಳಿಗೆ ಕೌಟುಂಬಿಕ ವ್ಯಾಜ್ಯಗಳನ್ನು ಬೇಗನೆ ವಿಲೇವಾರಿ ಮಾಡಲು ಸಹಾಯವಾಗುತ್ತದೆ.

ಸಮಾಜ ಸೇವಕರು ಕೌಟುಂಬಿಕ ನ್ಯಾಯಾಲಯಗಳಲ್ಲಿ ವ್ಯಾಜ್ಯ ಇತ್ಯರ್ಥ ಮಾಡಲು ಬಹಳ ಸಹಕಾರಿಯಾಗುತ್ತಾರೆ. ಆದುದರಿಂದ ಸಮಾಜದ ಒಳಿತಿಗಾಗಿ ಕೆಲಸ ಮಾಡುವ ಕಡಿಮೆ ಎಂದರೆ 10 ಸಮಾಜ ಸೇವಕರ ಪಟ್ಟಿ ತಯಾರಿಸಿ ವರ್ಷಂಪ್ರತಿ ಹೈಕೋರ್ಟಿನ ಅನುಮತಿಗಾಗಿ ಕಳುಹಿಸಬೇಕು. ಈ ಪಟ್ಟಿ ತಯಾರಿಸುವಾಗ ಕೌಟುಂಬಿಕ ನ್ಯಾಯಾಲಯ ಕೌಟುಂಬಿಕ ಕಾನೂನಿನ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಬೇಕು.

## ಸಲಹೆಗಾರರು, ಅಧಿಕಾರಿಗಳು ಮತ್ತು ಕೌಟುಂಬಿಕ ನ್ಯಾಯಾಲಯದ ಶಿಬಂಧಿ.

ಕೌಟುಂಬಿಕ ನ್ಯಾಯಾಲಯದ ಸಲಹೆಗಾರರು ಮತ್ತು ಸಿಬ್ಬಂದಿ ವರ್ಗವನ್ನು ನೇಮಕ ಮಾಡುವಾಗ ಕೌಟುಂಬಿಕ ನ್ಯಾಯಾಲಯದ ಧ್ಯೇಯ ಮತ್ತು ಉದ್ದೇಶಗಳನ್ನು ನೆನಪಿನಲ್ಲಿಡತಕ್ಕದ್ದು ಮತ್ತು ಅವರ ಕೆಲಸದ ಅನುಭವ ಅವರ ಪೂರ್ವಾಪರ, ಗುಣ ನಡತೆಯನ್ನು ಆಧಾರವಾಗಿಟ್ಟುಕೊಂಡು ನೇಮಕಾತಿ ಮಾಡತಕ್ಕದ್ದು.

ಕೌಟುಂಬಿಕ ನ್ಯಾಯಾಲಯಕ್ಕೆ ದೂರು ತರುವ ದಂಪತಿಗಳು ಒಬ್ಬರನ್ನೊಬ್ಬರು ತೆಗಳುವುದು ಜಾಸ್ತಿ. ಆದುದರಿಂದ ಅವರ ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ಇತ್ಯರ್ಥ ಮಾಡಬೇಕಾದರೆ ಸಲಹೆಗಾರರು ಮತ್ತು ಸಿಬ್ಬಂಧಿ ವರ್ಗವನ್ನು ಸರಕಾರದ ವಿವಿಧ ಇಲಾಖೆಗಳಿಂದ ಆರಿಸಿ ಕೌಟುಂಬಿಕ ನ್ಯಾಯಾಲಯದ ಕೆಲಸಕ್ಕೆ ನಿಯುಕ್ತಿಗೊಳಿಸಬೇಕು. ಮಾನವೀಯತೆಯಿಂದ ಮಾನವರಿಗೆ ಸಲ್ಲಿಸುವ ಸೇವೆ, ದೇವರ ಸೇವೆಗೆ ಸಮಾನ ಎಂಬುದಾಗಿ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರು, ಸಲಹೆದಾರರು ಮತ್ತು ಶಿಬ್ಬಂಧಿ ವರ್ಗ ನೆನಪಿನಲ್ಲಿಡತಕ್ಕದ್ದು.

## ಕೌಟುಂಬಿಕ ನ್ಯಾಯಲಯದ ಕಾರ್ಯ ವ್ಯಾಪ್ತಿ

1. ಕೌಟುಂಬಿಕ ನ್ಯಾಯಲಯವು ಜಿಲ್ಲಾ ಸತ್ರ ನ್ಯಾಯಾಲಯ ಅಥವಾ ಇತರ ಸಿವಿಲ್ ನ್ಯಾಯಲಯಗಳು ಕಾನೂನು ಪ್ರಕಾರ ಚಲಾಯಿಸುವ ಎಲ್ಲಾ ಅಧಿಕಾರವನ್ನು ಚಲಾಯಿಸಬಹುದು.

2. ಹೈಕೋರ್ಟ್‌ನಲ್ಲಿ ದಾಖಲು ಮಾಡುವ ವ್ಯಾಜ್ಯದಲ್ಲಿ ವಿಚ್ಛೇದನ ಪಡೆದವರೂ ವಾದಿ/ ಪ್ರತಿವಾದಿಗಳಾಗಿರಬಹುದು. ಉದಾ:–ಹೆಂಡತಿ ತನ್ನ ಗಂಡನಿಗೆ ಬಹುಮಾನವಾಗಿ ಅಥವಾ ವ್ಯವಸ್ಥಾ ಪತ್ರದ ಮೂಲಕ ನೀಡಿರುವ ಆಸ್ತಿಯ ದಾಖಲೆಯನ್ನು ರದ್ದು ಮಾಡಲು ಹೈಕೋರ್ಟ್‌ನಲ್ಲಿ ವ್ಯಾಜ್ಯ ಹೂಡಬಹುದು.

3. ಗಂಡನ ಮನೆ/ವಸತಿಯು ಬೇರೆ ಪ್ರದೇಶದಲ್ಲಿರುವ ಪ್ರಯುಕ್ತ ಗಂಡ ವಾಸಿಸುತ್ತಿರುವ ಪ್ರದೇಶದಲ್ಲಿ ಹೆಂಡತಿ ವಿಚ್ಛೇದನ ವ್ಯಾಜ್ಯ ದಾಖಲು ಮಾಡಬೇಕೆಂದು ಹೇಳುವುದು ಸರಿಯಲ್ಲ. ಹೆಂಡತಿಯು ಅವಳು ವಾಸಿಸುವ ಪ್ರದೇಶದ ನ್ಯಾಯಾಲಯದಲ್ಲಿ ವಿಚ್ಛೇದನಕ್ಕೆ ಅರ್ಜಿ ದಾಖಲು ಮಾಡಬಹುದು.

4. ಹಿಂದೂ ಮದುವೆಯ ಕಾನೂನು 1955, ಸ್ಪೇಶಲ್ ಮದುವೆಯ ಕಾನೂನು 1954, ಮುಸ್ಲಿಂ ಮದುವೆಯ ಕಾನೂನು 1939, ಭಾರತೀಯ ವಿಚ್ಛೇಧನ ಕಾನೂನು 1969, ವರದಕ್ಷಿಣೆ ತಡೆಗಟ್ಟುವ ಕಾನೂನು 1961, ರಕ್ಷಕ/ ಪೋಷಕ ಕಾನೂನು 1980 ಈ ಎಲ್ಲಾ ಕಾನೂನುಗಳಿಗೆ ಸಂಬಂಧಿಸಿದ ವ್ಯಾಜ್ಯಗಳು ಕೌಟುಂಬಿಕ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತವೆ.

5. ಮೃತ ಪಟ್ಟವರ ವಾರಿಸುದಾರರಿಗೆ ಅವರ ಮೂಲಕ ಕೊಡಲು ಬಾಕಿ ಇರುವ ಹಣವನ್ನು ಪಡೆಯಲು ಮತ್ತು ಹಿರಿಯರ ಆಸ್ತಿಯನ್ನು ಪಾಲು ಮಾಡಲು ಕೌಟುಂಬಿಕ ನ್ಯಾಯಾಲಯಕ್ಕೆ ವ್ಯಾಜ್ಯ ದಾಖಲು ಮಾಡಲು ಆಗುವುದಿಲ್ಲ.

6. ಗಂಡ ಹೆಂಡತಿಯರ ಕೌಟುಂಬಿಕ ನ್ಯಾಯಾಲಯದ ವ್ಯಾಜ್ಯದಲ್ಲಿ ಮೂರನೆಯವರು ತನ್ನನ್ನು ಆ ವ್ಯಾಜ್ಯದಲ್ಲಿ ಪ್ರತಿವಾದಿಯಾಗಿ ಸೇರ್ಪಡೆಗೊಳಿಸಲ್ಪಡಬೇಕೆಂದು ಹೇಳಲು ಅಗುವುದಿಲ್ಲ.

7. ಗಂಡ ತನ್ನ ಹೆಂಡತಿಯ ಹೆಸರಿನಲ್ಲಿ ಆಸ್ತಿಯನ್ನು ಖರೀದಿಸಿದಲ್ಲಿ ಅಂತಹ ದಂಪತಿಗಳಿಗೆ ವಿಚ್ಛೇದನ ನೀಡುವಾಗ ಆಸ್ತಿಯನ್ನು ಪಾಲು ಮಾಡುವುದು ಕೌಟುಂಬಿಕ ನ್ಯಾಯಲಯದ ಸಮಸ್ಯೆಯಾಗಿದೆ.

8. ಹಿಂದು ಮತ್ತು ಕ್ರಿಶ್ಚಿಯನ್ ಜನಾಂಗದವರು ತನ್ನ ಗಂಡ ಅಥವಾ ತನ್ನ ಹೆಂಡತಿ ಜೀವಂತ ಇರುವಾಗ ಬೇರೆ ಮದುವೆ ಆಗುವುದನ್ನು ನಿಷೇಧಿಸಲಾಗಿದೆ.

9. ಗಂಡ ಹೆಂಡತಿಯರ ನಡುವೆ ವಿಚ್ಛೇದನಕ್ಕಾಗಿ ಕಚ್ಚಾಟ ಇರುವ ಸಂದರ್ಭಗಳಲ್ಲಿ ಅವರ ಮಕ್ಕಳ ಸ್ವಾಧೀನತೆಯು ಜವಾಬ್ದಾರಿಯು ಕೌಟುಂಬಿಕ ನ್ಯಾಯಾಲಯದ್ದಾಗಿದೆ. ಮಕ್ಕಳ ತಂದೆ ಅಥವಾ ತಾಯಿ ಮಕ್ಕಳ ಸ್ವಾಧೀನತೆ ಬಗ್ಗೆ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಬಹುದು. ಮಕ್ಕಳ ಸ್ವಾಧೀನತೆಯನ್ನು ಹೊಂದಲು ತನಗೆ ಮಕ್ಕಳನ್ನು ಪೋಷಿಸಲು ಸಾಕಾಗುವಷ್ಟು ಆದಾಯ ಇದೆ ಎಂಬ ಒಂದೇ ಕಾರಣ ಸಾಕಾಗುವುದಿಲ್ಲ. ಹಿಂದೂ ಮದುವೆ ತಿದ್ದುಪಡಿ ಕಾನೂನಿನಂತೆ ಮದುವೆಯ ಸಂಬಂಧದಿಂದ ಹೊರಗೆ ಜನಿಸಿದ ಮಕ್ಕಳಿಗೆ ಆಸ್ತಿಯಲ್ಲಿ ಹಕ್ಕು ನೀಡಬೇಕೆಂದು ತಿಳಿಸಿದೆ.

10. ಮಗುವಿನ ತಂದೆ ಯಾರು ಎಂಬುದಾಗಿ ತಿಳಿದು ಕೊಳ್ಳಲು ಡಿ.ಎನ್.ಎ. ಪರೀಕ್ಷೆಗೆ ಆದೇಶ ನೀಡಲು ನ್ಯಾಯಾಲಯಕ್ಕೆ ಅಧಿಕಾರವಿದೆ. ಆದರೆ ಈ ಅಧಿಕಾರವನ್ನು ಅಗತ್ಯ/ಯೋಗ್ಯ ಎಂದಾದಲ್ಲಿ ಮಾತ್ರ ಚಲಾಯಿಸಬೇಕು.

11. ದಂಪತಿಗಳಲ್ಲಿ ಒಬ್ಬರು 'ಅಸ್ವಸ್ಥ ಚಿತ್ತ'ದವರು ಎಂಬ ಕಾರಣದಿಂದ ವಿಚ್ಛೇದನೆಯನ್ನು ಅಪೇಕ್ಷಿಸಿದಾಗ, ಅಂತಹ ವ್ಯಕ್ತಿಯ ಅಸ್ವಸ್ಥ ಚಿತ್ತ ಪರೀಕ್ಷಿಸಿ ದಾಖಲೆ ನೀಡಿದ ವೈದ್ಯರ ವಿಚಾರಣೆ ನಡೆಸುವುದಕ್ಕೆ ಅಥವಾ ಅಂತಹ ಅಸ್ವಸ್ಥಚಿತ್ತ ವ್ಯಕ್ತಿಯನ್ನು ವೈದ್ಯರ ಪರೀಕ್ಷೆಗೆ ಒಳಪಡುವಂತೆ ಆದೇಶಿಸುವುದಕ್ಕೆ ಕೌಟುಂಬಿಕ ನ್ಯಾಯಾಲಯ ಬದ್ಧವಾಗಿದೆ.

12. ಅಪ್ರಾಪ್ತ ವಯಸ್ಸಿನ ಮಕ್ಕಳ ಖರ್ಚು ವೆಚ್ಚಗಳ ಬಾಬ್ತು 2005ರ ಸವಿತಾ ಜೈನ್ ಎಂಬ ವ್ಯಾಜ್ಯದಲ್ಲಿ ಆದೇಶ ನೀಡುತ್ತಾ ಭಾರತದ ಸುಪ್ರೀಮ್ ಕೋರ್ಟು ತಿಂಗಳಿಗೆ ರೂ.850/–ನ್ನು ಮಕ್ಕಳ ಖರ್ಚಿಗೆ ನೀಡಲು ಆದೇಶಿಸಿದೆ.

13. ಹೆಂಡತಿಗೆ ಇನ್ನೊರ್ವನೊಡನೆ ಅಕ್ರಮ ಸಂಬಂಧವಿದೆ ಎಂಬುದಾಗಿ ಸಂದೇಹ ಮಾಡುವ ಗಂಡನ ವಿರುದ್ಧ, ಆತ ಕ್ರೂರತನ ತೋರಿಸುತ್ತಾನೆ ಎಂಬ ಕಾರಣ ನೀಡಿ ಹೆಂಡತಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಬಹುದು.

14. ಮೊದಲನೆ ಹೆಂಡತಿ ಜೀವಂತ ಇರುವಾಗ 2ನೇ ಮದುವೆ ಕಾನೂನು ಬದ್ಧವಲ್ಲ. ಅಂತಹ 2ನೇ ಹೆಂಡತಿಯು ತನಗೆ ಜೀವನಾಂಶ ನೀಡಬೇಕೆಂದು ಅರ್ಜಿ ಗುಜರಾಯಿಸಲು ಆಗುವುದಿಲ್ಲ.

15. ಅರ್ಜಿ ಹಾಕುವ ಮೊದಲಿನ ಹಾಗೂ ನಂತರದ, ಜೀವನಾಂಶಕ್ಕಾಗಿ ದಾಖಲಿಸಿದ ವ್ಯಾಜ್ಯವನ್ನು ಇತ್ಯರ್ಥ ಮಾಡುವ ಅಧಿಕಾರ ಕೌಟುಂಬಿಕ ನ್ಯಾಯಾಲಯಕ್ಕೆ ಇದೆ.

16. ಮದುವೆಯಾದ ಗಂಡನ ಮನೆ ತೊರೆದು ಹೆಂಡತಿಯು ತನ್ನ ಮಕ್ಕಳೊಂದಿಗೆ ತನ್ನ ತಂದೆಯ ಮನೆಯಲ್ಲಿ ವಾಸ್ತವ್ಯ ಮಾಡುತ್ತಿದ್ದಲ್ಲಿ, ಅವಳು ಆ ಪ್ರದೇಶದ ನ್ಯಾಯಾಲಯದಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಬಹುದು.

17. ಗಂಡ, ಹೆಂಡತಿ ನಡುವೆ ಇರುವ ಆಸ್ತಿಯ ಸಮಸ್ಯೆ ಕೌಟುಂಬಿಕ ನ್ಯಾಯಾಲಯಕ್ಕೆ ಸಂಬಂಧಿಸಿದ್ದಾಗಿದೆ. ಮೂರನೇ ವ್ಯಕ್ತಿ ತನಗೆ ಆ ಆಸ್ತಿಯಲ್ಲಿ ಪಾಲು ಇದೆಯೆಂದು ತನ್ನನ್ನು ಆ ವ್ಯಾಜ್ಯದಲ್ಲಿ ಪ್ರತಿವಾದಿಯನ್ನಾಗಿ ಸೇರ್ಪಡೆಗೊಳಿಸಬೇಕೆಂಬುದಾಗಿ ಹೇಳಲು ಆಗುವುದಿಲ್ಲ. ಆ ವ್ಯಕ್ತಿ ಬೇರೆ ವ್ಯಾಜ್ಯ ದಾಖಲಿಸಿ ಈ ದಂಪತಿಗಳನ್ನು ವ್ಯಾಜ್ಯದಲ್ಲಿ ಪ್ರತಿವಾದಿಗಳನ್ನಾಗಿ ಮಾಡತಕ್ಕದ್ದು.

18. ಹಿಂದೂ ಧಾರ್ಮಿಕ ನಿಯಮಗಳ ಪ್ರಕಾರ ಭಾರತೀಯನೊಬ್ಬನ ವಿವಾಹ ಅಮೇರಿಕದಲ್ಲಿ ನಡೆದಿದ್ದರೂ, ವಿಚ್ಛೇದನಕ್ಕಾಗಿ ಅವರು ಭಾರತದ ಕೌಟುಂಬಿಕ ನ್ಯಾಯಾಲಯದಲ್ಲಿ ವ್ಯಾಜ್ಯ ದಾಖಲಿಸಬಹುದು.

19. ಗಂಡ – ಹೆಂಡತಿ ಮಧ್ಯೆ ಇರುವ ವ್ಯಾಜ್ಯಗಳಾದ ಮದುವೆ ಜೀವನವನ್ನು ಪುನರಾರಂಭಿಸಲು ವಿಚ್ಛೇದನ, ನ್ಯಾಯಿಕ ಪ್ರತ್ಯೇಕೀಕರಣ, ಜನಿಸಿದ ಮಕ್ಕಳ ತಂದೆ–ತಾಯಿ ಯಾರೆಂಬುದನ್ನು ನಿರ್ಧರಿಸುವುದು, ಮಕ್ಕಳ ಸ್ವಾಧೀನತೆ ಈ ವ್ಯಾಜ್ಯಗಳನ್ನು ಕೌಟುಂಬಿಕ ನ್ಯಾಯಾಲಯದಲ್ಲಿ ಇತ್ಯರ್ಥಗೊಳಿಸುವುದಾಗಿದೆ.

20. ತಾನು ಜನಿಸಿದ ಮನೆಯಲ್ಲಿಯೇ ವಾಸಿಸಬೇಕೆಂಬ ಮದುವೆಯಾಗದ ಹೆಣ್ಣಿನ ಹಕ್ಕು ಬೇಡಿಕೆಯು ಕೌಟುಂಬಿಕ ನ್ಯಾಯಲಯದ ವ್ಯಾಪ್ತಿಗೆ ಬರುವುದಿಲ್ಲ.

21. ಹೆಂಡತಿ ತಾನು ಮದುವೆಯಾಗಿ ತಂದಿರುವ ಬಂಗಾರ ಮತ್ತು ಇತರ ವಸ್ತುಗಳು ತನಗೆ ಮರಳಿಸಬೇಕೆಂದು ಕೌಟುಂಬಿಕ ನ್ಯಾಯಾಲಯದಲ್ಲಿ ವ್ಯಾಜ್ಯ ದಾಖಲಿಸಬಹುದು.

22. ಕೌಟುಂಬಿಕ ನ್ಯಾಯಾಲಯವು ಆಸ್ತಿಯನ್ನು ಪಾಲು ಮಾಡುವ ಆದೇಶ ನೀಡಲು ಆಗುವುದಿಲ್ಲ. ಇದನ್ನು ಸೂಕ್ತ ಸಿವಿಲ್ ನ್ಯಾಯಾಲಯದಲ್ಲಿ ಮಾಡಬಹುದಾಗಿದೆ. ಆದರೆ ಗಂಡ ತನ್ನ ಹಣದಿಂದ ಹೆಂಡತಿಯ ಹೆಸರಿನಲ್ಲಿ ಆಸ್ತಿ ಖರೀದಿಸಿದ್ದರೆ, ಅಥವಾ ಗಂಡ ಹೆಂಡತಿ ಇಬ್ಬರೂ ತಮ್ಮ ಆದಾಯದ ಹಣದಿಂದ ಗಂಡನ ಅಥವಾ ಮಕ್ಕಳ ಹೆಸರಿನಲ್ಲಿ ಆಸ್ತಿ ಖರೀದಿಸಿದ್ದರೆ ಈ ವಿಷಯಗಳನ್ನು ಕೌಟುಂಬಿಕ ನ್ಯಾಯಲಯದಲ್ಲಿ ಇತ್ಯರ್ಥ ಮಾಡಬಹುದು.

23. ಗಂಡ ಅಥವಾ ಹೆಂಡತಿ ವಿದೇಶದಲ್ಲಿದ್ದಾರೆ ಎಂಬ ಕಾರಣಕ್ಕಾಗಿ ಅವರಿಂದ ಅಧಿಕಾರ ಪತ್ರ ಪಡೆದವರು ಕೌಟುಂಬಿಕ ನ್ಯಾಯಲಯದಲ್ಲಿ ವ್ಯಾಜ್ಯ ನಡೆಸಲು ಆಸ್ಪದವಿಲ್ಲ.

24. ಯಾವ ಪ್ರದೇಶಗಳಲ್ಲಿ ಕೌಟುಂಬಿಕ ನ್ಯಾಯಾಲಯದ ಸ್ಥಾಪನೆ ಆಗಿದೆಯೋ, ಅಲ್ಲಿ ಮದುವೆಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕೌಟುಂಬಿಕ ನ್ಯಾಯಾಲಯವನ್ನು ಹೊರತುಪಡಿಸಿ ಜಿಲ್ಲಾ ನ್ಯಾಯಾಲಯ ಅಥವಾ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಸಲು ಅಧಿಕಾರ ಇರುವುದಿಲ್ಲ.

## ವ್ಯಾಜ್ಯಗಳ ಇತ್ಯರ್ಥ / ತೀರ್ಮಾನ / ಸಂಧಾನ ಪ್ರಕ್ರಿಯೆ

ಗಂಡ-ಹೆಂಡತಿಯರ ಸಮಸ್ಯೆಗಳಿಗೆ ಪರಿಹಾರ ಸಿಗುವ ಸಾದ್ಯತೆ ಇದೆ ಅಥವಾ ರಾಜಿ-ಸಂಧಾನ ಆಗುವ ಸಾಧ್ಯತೆ ಇದೆ ಎಂದು ಕೌಟುಂಬಿಕ ನ್ಯಾಯಾಲಯಕ್ಕೆ ಮನದಟ್ಟಾದಲ್ಲಿ ಬೇಕೆಂದಷ್ಟು ಸಲ ವ್ಯಾಜ್ಯವನ್ನು ಮುಂದೂಡಿ ತೀರ್ಮಾನ ಸಂಧಾನಕ್ಕೆ ಪ್ರಯತ್ನಿಸಬಹುದು. ಕೌಟುಂಬಿಕ ನ್ಯಾಯಾಲಯ ವೈದ್ಯರ ಚಿಕಿತ್ಸಾ ಕ್ಲಿನಿಕ್‌ನಂತೆ ಕೆಲಸ ಮಾಡುವ ಅವಶ್ಯಕತೆ ಇದೆ. ಏಕೆಂದರೆ ವ್ಯಾಜ್ಯ ದಾಖಲು ಮಾಡಿದ ದಂಪತಿಗಳಿಗೆ, ತಾವು ತಮ್ಮ ಒಳಿತನ್ನು ಬಯಸುವ ವ್ಯಕ್ತಿಯ ಸಮ್ಮುಖದಲ್ಲಿ ಇದ್ದೇವೆಯೇ ಹೊರತು ನ್ಯಾಯಾಲಯದ ಜಡ್ಜರ ಸಮ್ಮುಖದಲ್ಲಿ ಇಲ್ಲ ಎಂಬಂತಹ ವಾತಾವರಣ ಅಲ್ಲಿ ಸೃಷ್ಟಿಯಾಗಬೇಕು.

ನ್ಯಾಯಾಲಯ ವ್ಯಾಜ್ಯದ ವಿಚಾರಣೆ ಪ್ರಾರಂಭಿಸುವ ಮೊದಲು ದಂಪತಿಗಳನ್ನು ರಾಜಿ-ಸಂಧಾನ ಮಾಡಲು ಪ್ರಯತ್ನಿಸಬೇಕು. ಗಂಡನಿಗೆ ನ್ಯಾಯಾಲಯಕ್ಕೆ ಹಾಜರಾಗಲು ನೋಟೀಸ್ ಕಳುಹಿಸಿದ್ದೂ ಹಾಜರಾಗಿಲ್ಲವಾದಲ್ಲಿ ರಾಜಿ ಸಂಧಾನವನ್ನು ಜ್ಯಾರಿಯಲ್ಲಿಡುವ ಸಲುವಾಗಿ ಗಂಡನಿಗೆ ಪುನಃ ನೋಟೀಸ್ ಕಳುಹಿಸಿ ರಾಜಿ ಸಂಧಾನ ಪ್ರಕ್ರಿಯೆಗೆ ಹಾಜರಾಗಲು ತಿಳಿಸಬೇಕು.

ಗಂಡ-ಹೆಂಡತಿಯ ಸ್ವಂತ ಒಪ್ಪಿಗೆಯಿಂದ ಸಲ್ಲಿಸಲ್ಪಟ್ಟ ವಿಚ್ಛೇದನ ವ್ಯಾಜ್ಯದ ವೇಳೆ ಅಥವಾ ವಿಚ್ಛೇದನ ಆಗುವ ಮೊದಲು ರಾಜಿ-ಸಂಧಾನ ಪ್ರಕ್ರಿಯೆ ನಡೆಸುವಾಗ ಕೌಂಟುಬಿಕ ನ್ಯಾಯಲಯಕ್ಕೆ ವಕೀಲರ ಅಗತ್ಯ ಇರುವುದಿಲ್ಲ. ಕೌಟುಂಬಿಕ ನ್ಯಾಯಲಯದಲ್ಲಿ ವಕೀಲರ ನೇಮಕಾತಿಗೆ ಪರವಾನಿಗೆ ನೀಡುವುದು ನ್ಯಾಯಾಲಯದ ವಿವೇಚನೆಗೆ ಬಿಟ್ಟ ವಿಷಯವಾಗಿದೆ.

ದಾವೆಯ ವಾದಿ ಅಥವಾ ಪ್ರತಿವಾದಿಗೆ ತನಗೆ ನಂಬಿಕೆಯಿರುವ ವಕೀಲರನ್ನು ನೇಮಿಸುವ ಅಧಿಕಾರವಿದೆ. ವಕೀಲರು ಹಕ್ಕಿನಿಂದ ಕೌಟುಂಬಿಕ ನ್ಯಾಯಾಲಯದಲ್ಲಿ

ಹಾಜರಾಗಲು ಆಗುವುದಿಲ್ಲ, ಆದರೆ ಸಹಾಯ ಮಾಡುವ ಸ್ನೇಹಿತನಂತೆ ಅವರ ಕಕ್ಷಿಗಾರರ ವ್ಯಾಜ್ಯದಲ್ಲಿ ವಾದಿಸಲು ನ್ಯಾಯಾಲಯ ಪರವಾನಿಗೆ ನೀಡುತ್ತದೆ. ವ್ಯಾಜ್ಯ ನಡೆಸಲು ಬೇಕಾದಂತಹ ಕನಿಷ್ಠ ಅನುಭವ ಇಲ್ಲದ ವಕೀಲರು ಸೂಕ್ತ ರೀತಿಯಲ್ಲಿ ಅವರ ಕಕ್ಷಿಗಾರರಿಗೆ ಸಹಾಯ ಮಾಡಲು ಸಾಧ್ಯವಾಗುವುದಿಲ್ಲ.

'ಕಾನೂನಿನ ಜ್ಞಾನವಿಲ್ಲ ಎಂಬ ಕಾರಣಕ್ಕಾಗಿ ಮಾಡಿದ ತಪ್ಪಿಗೆ ಎಂದೂ ಕ್ಷಮೆ ಇರುವುದಿಲ್ಲ.' ಆದುದರಿಂದ ವಿಚ್ಛೇದನ ಅಪೇಕ್ಷಿಸುವವರು ಯಾವ ರೀತಿಯಲ್ಲಿ ತಮ್ಮ ಭಾವನೆಗಳನ್ನು ನ್ಯಾಯಾಲಯದ ಸಮ್ಮುಖ ಇಡಬೇಕೆಂದು ತಿಳಿಯದಿದ್ದಲ್ಲಿ ವಕೀಲರನ್ನು ನೇಮಕ ಮಾಡಬಹುದು.

ಆಧುನಿಕ ವೈದ್ಯಕೀಯ ಪ್ರಗತಿಯಿಂದಾಗಿ ಯಾರು ಅಸ್ವಸ್ಥರು ಎಂದು ತಿಳಿಯುವುದು ಸುಲಭ ಸಾಧ್ಯವಲ್ಲ ಆದುದರಿಂದ ನ್ಯಾಯಾಲಯ ರಾಜಿ–ಸಂದಾನ ಮಾಡಲು ಈ ವಿದ್ಯೆ ತಿಳಿದಿರುವ ತಜ್ಞರ ಅಭಿಪ್ರಾಯ ಕೇಳಬೇಕು. ಕೌಟುಂಬಿಕ ನ್ಯಾಯಾಲಯ ವಿಚ್ಛೇದನ ಕೇಳುವವರಿಗೆ ಆಪ್ತ ಸಲಹಾ ಕೇಂದ್ರಕ್ಕೆ ಕಳುಹಿಸಬಹುದು.

ಗಂಡ ಬುದ್ಧಿಯಲ್ಲಿ ಅಸ್ವಸ್ಥರು ಎಂಬ ಕಾರಣಕ್ಕಾಗಿ ನೀಡಿರುವ ಏಕಪಕ್ಷೀಯ ಆದೇಶವನ್ನು ಕೌಟುಂಬಿಕ ನ್ಯಾಯಾಲಯ ಬದಿಗಿರಿಸಿ ಆ ವ್ಯಾಜ್ಯವನ್ನು ಪುನರಾರಂಭಿಸಿ ವಿಚಾರಣೆ ನಡೆಸಬಹುದು ಎಂಬುದಾಗಿ 1959 ನೇ ಕೇಸಿನಲ್ಲಿ ಹೈಕೋರ್ಟ್ ಆದೇಶ ನೀಡಿರುತ್ತದೆ.

ಹೆಂಡತಿ ಕೌಟುಂಬಿಕ ನ್ಯಾಯಾಲಯದ ರಾಜಿ ಸಂದಾನಕ್ಕೆ ಹಾಜರಾಗಲು ಪ್ರಯಾಣ ಭತ್ಯೆ ಕೇಳಬಹುದು.

ಸಿವಿಲ್ ವ್ಯಾಜ್ಯಗಳಲ್ಲಿ ಪಾಲಿಸುವ ನಿಯಮಗಳು ಕೌಟುಂಬಿಕ ನ್ಯಾಯಾಲಯದ ವ್ಯಾಜ್ಯಗಳಿಗೂ ಅನ್ವಯವಾಗುತ್ತವೆ. ಆದರೆ ಜೀವನಾಂಶ ಬೇಕೆಂದು ದಾಖಲಿಸಿದ ವ್ಯಾಜ್ಯ ಕ್ರಿಮಿನಲ್ ದಂಡ ಪ್ರಕ್ರಿಯಾ ಕಾನೂನಿನಂತೆ ಇತ್ಯರ್ಥ ಮಾಡಬೇಕು.

ವಿಚ್ಛೇದನ ಅಪೇಕ್ಷಿಸುವ ದಂಪತಿಗಳು ತಮ್ಮ ಸಾಕ್ಷ್ಯ ವಿಚಾರಣೆಯನ್ನು 'ಇನ್ ಕೆಮರ' ಅಂದರೆ ಖಾಸಗಿಯಾಗಿ (ಗಂಡ, ಹೆಂಡತಿ, ಅವರ ವಕೀಲರು ಮತ್ತು ಜಡ್ಜರು) ಇವರ ಸಮ್ಮುಖದಲ್ಲಿ ಮಾತ್ರ ನಡೆಸಬೇಕು ಎಂದು ನ್ಯಾಯಾಲಯದ ಮುಂದೆ ತಮ್ಮ ಬೇಡಿಕೆ ಮಂಡಿಸಿದರೆ ಮತ್ತು ನ್ಯಾಯಾಲಯಕ್ಕೆ ಇದು ಸೂಕ್ತವೆಂದು ಮನಗಂಡರೆ ಈ ಪರಿಯಾಗಿ ವಿಚಾರಣೆ ನಡೆಸಬಹುದು. ವಿಚ್ಛೇದನ ಕೇಳಿದ ಕಾರಣವು ವ್ಯಭಿಚಾರದಲ್ಲಿ ತೊಡಗಿದ್ದಾರೆ ಎಂದಾದಲ್ಲಿ ಗಂಡ–ಹೆಂಡತಿ ಮತ್ತು ಇತರ ಸಾಕ್ಷಿಗಳ ಸಾಕ್ಷ್ಯ ವಿಚಾರಣೆ ನಡೆಸುವ ಅಗತ್ಯ ಇರುತ್ತದೆ. ಸಾಕ್ಷಿಗಳು ಪ್ರಮಾಣ

ಪತ್ರ ಮುಖಾಂತರ ತಮ್ಮ ಸಾಕ್ಷ್ಯ ನೀಡುತ್ತಾರೆ ಮತ್ತು ಆ ಬಗ್ಗೆ ವಿರುದ್ಧ ಪಾರ್ಟಿಯು ಪಾಟಿ ಸವಾಲು ಮಾಡಬೇಕು. ಆದರೆ ಕೌಟುಂಬಿಕ ನ್ಯಾಯಾಲಯದ ಜಡ್ಜುರು ಪ್ರತಿಯೊಂದು ವಿಷಯವನ್ನು ದಾಖಲು ಮಾಡಬೇಕೆಂದಿಲ್ಲ. ಟಿ.ವಿ ಸೀರಿಯಲ್ಲುಗಳಲ್ಲಿ ತೋರಿಸುವಂತೆ 'ಅಬ್ಜೆಕ್ಷನ್ ಸಸ್ಟೇಯ್ನ್‌ಡ್' 'ಅಬ್ಜೆಕ್ಷನ್ ಓವರ್‌ರೂಲ್ಡ್' ಇತ್ಯಾದಿಗಳೆಲ್ಲಾ ಕೌಟುಂಬಿಕ ನ್ಯಾಯಾಲಯದಲ್ಲಿ ನಿಜವಾಗಿ ಘಟಿಸುವುದಿಲ್ಲ. ಸಾಕ್ಷ ನೀಡುವ ವ್ಯಕ್ತಿಯು ಮಾನಸಿಕವಾಗಿ ಆರೋಗ್ಯದಿಂದ ಇದ್ದಾರೆಯೋ? ಎಂಬುದನ್ನು ತಿಳಿದುಕೊಳ್ಳುವ ಅಧಿಕಾರ ನ್ಯಾಯಾಲಯಕ್ಕೆ ಇದೆ.

ಹಿಂದೂ, ಕ್ರಿಶ್ಚಿಯನ್ ಅಥವಾ ಮುಸ್ಲಿಂ ಆಗಿರಲಿ, ಹೆಂಡತಿ ಮತ್ತು ಮಕ್ಕಳನ್ನು ಪೋಷಣೆ ಮಾಡುವುದು ಗಂಡನ/ತಂದೆಯ ಕರ್ತವ್ಯವಾಗಿದೆ. ಈ ಸಮಸ್ಯೆಯು ಶಾಬಾನೂ ಕೇಸಿನಲ್ಲಿ ಬಹಳ ಉತ್ತಮ ರೀತಿಯಲ್ಲಿ ಇಡೀ ಭಾರತ ದೇಶದಲ್ಲಿ ಚರ್ಚೆ ನಡೆದಿರುತ್ತದೆ. ಇದರ ಪರಿಣಾಮವಾಗಿ ಮುಸ್ಲಿಮ್ ಹೆಂಡಂದಿರ ಹಕ್ಕುಗಳ ರಕ್ಷಣೆ ಕಾನೂನು 1986ರಲ್ಲಿ ಪಾರ್ಲಿಮೆಂಟ್‌ನಲ್ಲಿ ಜ್ಯಾರಿ ಆಗಿರುತ್ತದೆ ಅಂತೆಯೇ ಭಾರತದ ಸುಪ್ರೀಮ್ ಕೋರ್ಟು ಜೀವನಾಂಶವು ಎಲ್ಲಾ ಧರ್ಮದ ಜನರಿಗೆ ಅನ್ವಯಿಸುತ್ತದೆ. ಎಂದು ಆದೇಶ ನೀಡಿರುತ್ತದೆ.

## ವಿದೇಶಿ ನ್ಯಾಯಾಲಯದ ಆದೇಶ ಜ್ಯಾರಿ:-

ನ್ಯಾಯಿಕ ಪ್ರತ್ಯೇಕೀಕರಣಕ್ಕಾಗಿ ಹೆಂಡತಿ ದಾಖಲಿಸಿದ ಧಾವೆ ಭಾರತದ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿಯಿರುವಾಗ ಅವಳ ಗಂಡ ಅಮೇರಿಕದ ನ್ಯಾಯಾಲಯದಿಂದ ವಿಚ್ಛೇದನಕ್ಕೆ ಆದೇಶ ಪಡೆದುಕೊಳ್ಳುತ್ತಾರೆ. ಹೆಂಡತಿಯು ವಿಚ್ಛೇದನಕ್ಕೆ ತನ್ನ ಒಪ್ಪಿಗೆ ನೀಡದೆ ಗಂಡ ಅಮೇರಿಕದ ನ್ಯಾಯಾಲಯದಿಂದ ಆದೇಶ ಪಡೆದಿರುವುದರಿಂದ ಈ ಆದೇಶವನ್ನು ಮಾನ್ಯ ಮಾಡಲು ಆಗುವುದಿಲ್ಲ ಎಂಬುದಾಗಿ 2003 ರಲ್ಲಿ ದೆಹಲಿ ಹೈಕೋರ್ಟು ಆದೇಶ ನೀಡಿರುತ್ತದೆ.

## ಅಪೀಲು

1. ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಹೈ ಕೋರ್ಟಿನಲ್ಲಿ ಅಪೀಲು ಮಾಡಬಹುದು.
2. ಗಂಡ-ಹೆಂಡತಿಯರ ಒಪ್ಪಿಗೆಯಿಂದ ಕೌಟುಂಬಿಕ ನ್ಯಾಯಾಲಯದಲ್ಲಿ ಡಿಕ್ರಿ / ಆದೇಶ ಪಡೆದುಕೊಂಡಿದ್ದರೆ ಈ ಆದೇಶವನ್ನು ಅಪೀಲು ಮಾಡಲು ಆಗುವುದಿಲ್ಲ.

3. ಕೌಟುಂಬಿಕ ನ್ಯಾಯಾಲಯದ ಆದೇಶದ ವಿರುದ್ಧ, ಆದೇಶವಾದ ದಿನದಿಂದ 30 ದಿನಗಳೊಳಗೆ ಅಪೀಲು ದಾಖಲು ಮಾಡತಕ್ಕದ್ದು.

4. ಹೈಕೋರ್ಟುನಲ್ಲಿ ಕೌಟುಂಬಿಕ ನ್ಯಾಯಾಲಯದ ಆದೇಶದ ವಿರುದ್ದ ದಾಖಲಿಸಿದ ಅಪೀಲು 2 ಅಥವಾ ಹೆಚ್ಚಿನ ಜಡ್ಜರ ನ್ಯಾಯಪೀಠ ತೀರ್ಮಾನ ಮಾಡುತ್ತದೆ.

**ಜೀವನಾಂಶ:–**

ಜಾರ್ಖಂಡ್ ಉಚ್ಚ ನ್ಯಾಯಾಲಯ 2004 ರಂದು ರಾಜೇಂದ್ರ ಪ್ರಸಾದ್ ದಾವೆಯಲ್ಲಿ ಆದೇಶವನ್ನು ನೀಡುತ್ತಾ, ಹೆಂಡತಿ ಮತ್ತು ಮಗನಿಗೆ ಜೀವನಾಂಶ ನೀಡಲು ತಪ್ಪಿರುವ ಗಂಡನ ವಿರುದ್ಧ ಬಾಕಿಯಿರುವ ಎಲ್ಲಾ ಜೀವನಾಂಶದ ಹಣವನ್ನು ಅವನ ಜನರಲ್ ಪ್ರಾವಿಡೆಂಟ್ ಫಂಡ್ ನಿಂದ ತೆಗೆದು ಅವನ ಹೆಂಡತಿಯ ಹೆಸರಿಗೆ ಜಮಾ ಮಾಡಲು ಆದೇಶಿಸಿರುತ್ತದೆ.

# ಮಾನವ ಹಕ್ಕುಗಳು

ಮಾನವ ಹಕ್ಕು ಸಂರಕ್ಷಣಾ ಕಾಯಿದೆ 1993ರ ಪರಿಚ್ಛೇದ 2ರ ಪ್ರಕಾರ ಸಂವಿಧಾನದಲ್ಲಿ ಖಾತ್ರಿ ಮಾಡಲಾಗಿರುವ ಅಥವಾ ಅಂತಾರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಅಡಕವಾಗಿದ್ದು ಭಾರತದಲ್ಲಿ ನ್ಯಾಯಾಲಯಗಳ ಮೂಲಕ ನಿರ್ಭಂಧಿಸಲು ಸಾಧ್ಯವಿರುವ ಬದುಕು, ಸ್ವಾತಂತ್ರ್ಯ, ಸಮಾನತೆ ಮತ್ತು ಘನತೆಯ ಹಕ್ಕುಗಳನ್ನು ವ್ಯಕ್ತಿಯ 'ಮಾನವ ಹಕ್ಕುಗಳು' ಎಂದು ಕರೆಯಲಾಗುತ್ತದೆ.

## ಮಾನವ ಹಕ್ಕುಗಳ ಬಗ್ಗೆ ಇತಿಹಾಸ ಏನು ಹೇಳುತ್ತದೆ?

ಶತಮಾನಗಳಿಂದ ಹೆಣ್ಣು ಮಕ್ಕಳಿಗೆ ಎಲ್ಲಾ ರೀತಿಯಲ್ಲಿ ನ್ಯಾಯ ನಿರಾಕರಿಸಿ ಸಾಮಾಜಿಕ, ಅರ್ಥಿಕ ಮತ್ತು ರಾಜಕೀಯವಾಗಿ ಅವರು ದುರ್ಬಲರು/ಅಬಲೆಯರು ಎಂದು ಅವರ ನಿಂದನೆ ಶೋಷಣೆ ಮಾಡಿ ಅವರನ್ನು ಉಪಯೋಗಿಸಿ ನಂತರ ತಿರಸ್ಕರಿಸಿ, ಅವರು ಅನೈತಿಕ, ಅಲೆಮಾರಿ ಮತ್ತು ನಿರಾಶ್ರಿತರಂತೆ ಜೀವನಪರ್ಯಂತ ಬದುಕಬೇಕಾದ ದುಸ್ಥಿತಿಯಿತ್ತು. ಭಾರತದಲ್ಲಿ ಜನಸಂಖ್ಯೆಯ ಅರ್ಧದಷ್ಟು ಸ್ತ್ರೀಯರಿದ್ದು, ಅವರೂ ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಗಂಡಸರಂತೆ ತಾವೂ ಸಹಾ ಬಲಿದಾನ / ಜೀವ ತ್ಯಾಗ ಮಾಡಿರುತ್ತಾರೆ. ಆದರೂ ಸ್ತ್ರೀಯರು ಅವರ ಹಕ್ಕುಗಳಿಂದ ವಂಚಿತರಾಗಿ, ಅಮಾನವೀಯ ರೀತಿಯಲ್ಲಿ ಶೋಷಣೆಗೆ ಒಳಪಟ್ಟು ಜೀವನವಿಡೀ ಅವರು ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸಬೇಕಾಗಿತ್ತು. ಸ್ತ್ರೀಯರು ಮನುಷ್ಯ ಜಾತಿಯಲ್ಲಿ ಕೆಳ ಮಟ್ಟದ ಜೀವಿಗಳು, ಅವಮಾನದ ಮತ್ತು ಅವಹೇಳನದ ವಿನಿಮಯ ಮಾಡುವ ವಸ್ತು ಮತ್ತು ಲೈಂಗಿಕ ಭೋಗಕ್ಕೆ ಆಡುವ ವಸ್ತು ಎಂಬುದಾಗಿ ಹಿಂದಿನ ಕಾಲದಲ್ಲಿ ತಿಳಿಯುತ್ತಿದ್ದರು. ಸ್ತ್ರೀಯರನ್ನು ಜೂಡೊ ಕ್ರಿಶ್ಚಿಯನ್ ಪಂಗಡದವರು ಯಾವಾಗಲೂ ವಿಷವುಣಿಸಲು ತಯಾರಿರುವ ಚೇಳು ಎಂದೂ, ಧರ್ಮದ್ವೇಷಿ ಅರಬರು ಸೈತಾನನ ಚಾಟಿ ಎಂದೂ, ಭಾರತೀಯರು ಸಾಮಾಜಿಕ ಅನಿಷ್ಟ ಗಂಡನ ಹೆಣದೊಂದಿಗೆ ಸುಡುವುದೆಂದು ನಂಬುತ್ತಿದ್ದರು.

ಆದರೆ ಇಂದಿನ ಅಧುನಿಕ ಯುಗದಲ್ಲಿ ಸ್ತ್ರೀಯರು ಸಾಮಾಜಿಕ ಸಂಕೋಲೆಗಳನ್ನು ತುಂಡರಿಸಿದ್ದಾರೆ. ಯಾವುದೇ ಹೆದರಿಕೆ ಮತ್ತು ಸಹಾಯವಿಲ್ಲದೆ ಸಮಕಾಲೀನ ಸವಾಲು/ಸ್ಪರ್ಧೆಗಳಿಗೆ ತಯಾರಾಗಿದ್ದಾರೆ. ಮಾರ್ಚ್ 8 ನೇ ದಿನವನ್ನು ಸ್ತ್ರೀಯರಿಗೆ ಸಮಾನತೆಯ ಹಕ್ಕು, ಘನತೆ, ಗೌರವ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಮಾನವಾಗಿ ಭಾಗವಹಿಸುವ ಹಕ್ಕುಗಳು ದೊರಕಿರುವ ಸಾಧನೆಯ ದಿನವನ್ನಾಗಿ ಭೂಲೋಕದಾದ್ಯಂತ ಆಚರಿಸುತ್ತಾರೆ.

ಭಾರತವು ಪುರುಷ ಪ್ರಧಾನ ಮತ್ತು ಪರಂಪರೆಯುಕ್ತ ದೇಶವಾಗಿರುವುದರಿಂದ ಇಲ್ಲಿ ಸ್ತ್ರೀಯರು ಸಾಮಾಜಿಕವಾಗಿ, ಆರ್ಥಿಕವಾಗಿ, ದೈಹಿಕವಾಗಿ, ಮಾನಸಿಕವಾಗಿ ಮತ್ತು ಲೈಂಗಿಕವಾಗಿ ಅನಾದಿ ಕಾಲದಿಂದಲೂ ಧರ್ಮದ ಹೆಸರಿನಲ್ಲಿ, ಧರ್ಮ ಗ್ರಂಥಗಳ ಹೆಸರಿನಲ್ಲಿ ಮತ್ತು ಸಾಮಾಜಿಕ ಬಹಿಷ್ಕಾರ ಕ್ರಮಗಳಿಂದಾಗಿ ಹಿಂಸೆಯ ಬಲಿಪಶುಗಳಾಗಿ ಪುರುಷರಿಂದ ಶೋಷಿತರಾಗುತ್ತಿದ್ದರು. ಭಾರತದ ಸಂವಿಧಾನವು ಅಧಿನಿಯಮಿತ ಆಗುವ ಪೂರ್ವದಲ್ಲಿ ಪುರುಷ ಮತ್ತು ಸ್ತ್ರೀ ಇವರುಗಳಲ್ಲಿ ಸಮಾನತೆ ಎಂಬ ಪದದ ಅರ್ಥವೇ ತಿಳಿದಿರಲಿಲ್ಲ ಎನ್ನಬಹುದು. ಸಂವಿಧಾನದ ಪ್ರಸ್ತಾವನೆಯು ಸಂವಿಧಾನವನ್ನು ಈ ದೇಶದ ಸರ್ವೋಚ್ಚ ಕಾನೂನು ಎಂಬುದಾಗಿ ತಿಳಿಯಪಡಿಸಲಾಗಿದ್ದು, ಸಂವಿಧಾನವು, ಸ್ತ್ರೀಯರನ್ನೂ ಒಳಗೊಂಡು ಈ ದೇಶದ ಎಲ್ಲಾ ನಾಗರೀಕರಿಗೆ ಸಾಮಾಜಿಕ ನ್ಯಾಯ, ಆರ್ಥಿಕ ಮತ್ತು ರಾಜಕೀಯ ಮಾತನಾಡುವ, ಅಭಿಪ್ರಾಯ ವ್ಯಕ್ತಪಡಿಸುವ, ನಂಬಿಕೆ, ವಿಶ್ವಾಸ, ಸಮಾನ ಸ್ಥಾನಮಾನ ಮತ್ತು ಅವಕಾಶ, ಭ್ರಾತೃತ್ವವನ್ನು ಪ್ರವರ್ತಿಸಲು ವ್ಯಕ್ತಿಗತ ಘನತೆಯ ಆಶ್ವಾಸನೆಯನ್ನು ನೀಡುತ್ತದೆ.

ಮನುಷ್ಯನ ಸ್ವಾತಂತ್ರ್ಯದ ಹಕ್ಕು ಅವನಿಗೆ ಬಹಳ ಪವಿತ್ರ. ಆದುದರಿಂದ ಕಾನೂನು ಸಮ್ಮತಿ ಇಲ್ಲದೆ ಅದನ್ನು ನಿರ್ಬಂಧಿಸಲಾಗದು. ಎರಡನೇ ಮಹಾಯುದ್ಧದ ತರುವಾಯ ಮಾನವ ಹಕ್ಕುಗಳ ಬಗ್ಗೆ ಜನರಿಗೆ ಹೆಚ್ಚಿನ ಅನುಭವ ಆಗಿರುತ್ತದೆ. ಎರಡನೇ ಮಹಾಯುದ್ಧದಲ್ಲಿ ಮಾನವೀಯತೆ ಮತ್ತು ಮಾನವ ಹಕ್ಕುಗಳನ್ನು ನಾಶಪಡಿಸುವ ಹೇಯ ಅಪರಾಧ ಎಸಗಿರುವುದು ಜನರನ್ನು ಬೆಚ್ಚಿ ಬೀಳಿಸಿದೆ. ಜರ್ಮನಿಯ ನಾಝಿ ಅಧಿಕಾರಿಗಳ ಕಾನೂನು ವಿರೋಧಿ ಕರ್ಮಗಳಿಗೆ ಚರಿತ್ರೆಯೇ ಸಾಕ್ಷಿಯಾಗಿದೆ. ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ರಕ್ಷಿಸಲು ಅಧ್ಯಕ್ಷ ಫ್ರಾಂಕ್ಲಿನ್ ಡಿ' ರೂಸ್ವೆಲ್ಟ್ ಇವರು 06-01-1941ರಂದು 4 ಸ್ವತಂತ್ರ ಸೂತ್ರಗಳ ಘೋಷಣೆ ಮಾಡಿದ್ದರು. ಇವು ಕ್ರಮವಾಗಿ (ಅ) ಅಭಿವ್ಯಕ್ತ ಸ್ವಾತಂತ್ರ್ಯ (ಆ) ಧಾರ್ಮಿಕ ಸ್ವಾತಂತ್ರ್ಯ (ಇ) ಅಗತ್ಯಗಳ ಸ್ವಾತಂತ್ರ್ಯ (ಈ) ಹೆದರಿಕೆಯಿಂದ ರಕ್ಷಣೆಯ ಸ್ವಾತಂತ್ರ್ಯ

## 1948ರ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಸೂತ್ರಗಳು

1. ಎಲ್ಲಾ ಮಾನವರು ಸಮಾನ ಹಕ್ಕು ಮತ್ತು ಗೌರವದಿಂದ ಜನಿಸಿದ್ದಾರೆ.
2. ಜಾತಿ, ಭೇದ, ಬಣ್ಣ, ಭಾಷೆ, ಧರ್ಮ, ರಾಜಕೀಯ ಇವುಗಳ ತಾರತಮ್ಯವಿಲ್ಲದೆ ಎಲ್ಲರಿಗೂ ಈ ಘೋಷಣೆಯಲ್ಲಿರುವ ಹಕ್ಕು ಮತ್ತು ಸ್ವಾತಂತ್ರ್ಯ ಲಭಿಸುತ್ತದೆ.

3. ಎಲ್ಲರಿಗೂ ಜೀವಿಸುವ, ಸ್ವಾತಂತ್ರ್ಯದ ಮತ್ತು ಜೀವ ಭದ್ರತೆಯ ಹಕ್ಕು ಇರುತ್ತದೆ.

4. ಯಾರನ್ನೂ ಗುಲಾಮಗಿರಿಯಲ್ಲಿ ಇಡಬಾರದು. ಗುಲಾಮಗಿರಿಯನ್ನು ಎಲ್ಲಾ ರೀತಿಯಿಂದಲೂ ನಿಷೇಧಿಸಲಾಗಿದೆ.

5. ಯಾರನ್ನೂ ಚಿತ್ರಹಿಂಸೆ, ಕ್ರೂರತನ, ಅಮಾನವೀಯ ಅಥವಾ ಕೆಳದರ್ಜೆಯ ಶಿಕ್ಷೆಗೆ ಗುರಿಪಡಿಸಬಾರದು.

6. ಎಲ್ಲರಿಗೂ ಎಲ್ಲಾ ಸ್ಥಳಗಳಲ್ಲಿ ಕಾನೂನಿನ ಮುಂದೆ ಮನ್ನಣೆ ಪಡೆಯುವ ಹಕ್ಕು ಇದೆ.

7. ಎಲ್ಲರೂ ಕಾನೂನಿನ ಮುಂದೆ ಸರಿಸಮಾನರು ಮತ್ತು ಸಮಾನ ರಕ್ಷಣೆಗೆ ಭಾದ್ಯರು.

8. ಸಂವಿಧಾನದಲ್ಲಿ ಪ್ರಾಪ್ತವಾದ ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ ರಾಷ್ಟ್ರೀಯ ಮಂಡಳಿಗಳಿಂದ ಸೂಕ್ತ ಪರಿಹಾರ ಪಡೆಯುವ ಹಕ್ಕು ಇದೆ.

9. ಯಾರನ್ನೂ ಕಾರಣವಿಲ್ಲದೆ ದಸ್ತಗಿರಿ ಮಾಡುವುದು, ಬಂಧನದಲ್ಲಿಡುವುದು ಮಾಡಬಾರದು.

10. ಎಲ್ಲರಿಗೂ ಸ್ವತಂತ್ರ ಮತ್ತು ಪಕ್ಷಪಾತವಿಲ್ಲದ ಮಂಡಳಿಯ ಎದುರು ತನ್ನ ವಿರುದ್ದ ಇರುವ ಕ್ರಿಮಿನಲ್ ಆಪಾದನೆ ಬಗ್ಗೆ ಸಮಾನತೆಯ ಬಗ್ಗೆ ತನ್ನ ಹಕ್ಕು ಮತ್ತು ಕರ್ತವ್ಯಗಳ ನಿರ್ಧಾರವಾಗಲು ನ್ಯಾಯಯುತ ರೀತಿಯಲ್ಲಿ ಸಾರ್ವಜನಿಕ ತನಿಖೆ ಆಗತಕ್ಕದ್ದು.

11. ಕ್ರಿಮಿನಲ್ ಅಪರಾಧ ಎಸಗಿದ್ದಾನೆ ಎಂದು ಆರೋಪ ಇರುವವನು ಕಾನೂನು ರೀತ್ಯಾ ಅಪರಾಧಿ ಎಂದು ಘೋಷಣೆ ಆಗುವ ವರೆಗೆ ಅವನ ರಕ್ಷಣೆಗೆ ಅಗತ್ಯವಾದ ಭದ್ರತೆ ಇರತಕ್ಕದ್ದು.

12. ಖಾಸಗಿ ಬದುಕಿನಲ್ಲಿ, ಕುಟುಂಬ ಅಥವಾ ಪತ್ರ ವ್ಯವಹಾರದಲ್ಲಿ ಯಾವುದೇ ವ್ಯಕ್ತಿಯ ಘನತೆ ಮತ್ತು ಗೌರವವನ್ನು ವಿರೋಧಿಸುವುದು ಮತ್ತು ಹಸ್ತಕ್ಷೇಪ ಮಾಡಬಾರದು. ಎಲ್ಲರಿಗೂ ದಾಳಿಯಿಂದ ಮತ್ತು ಹಸ್ತಕ್ಷೇಪದ ವಿರುದ್ಧ ಕಾನೂನಿನಲ್ಲಿ ರಕ್ಷಣೆಯಿದೆ.

13. ಎಲ್ಲರಿಗೂ ಯಾವುದೇ ಪ್ರದೇಶದಲ್ಲಿ ಸಂಚರಿಸುವ ಮತ್ತು ದೇಶದ ಗಡಿಯೊಳಗೆ ವಾಸಿಸುವ ಹಕ್ಕು ಇರುತ್ತದೆ. ಅಂತೆಯೇ ಆ ದೇಶದಿಂದ ಯಾವುದೇ ದೇಶಕ್ಕೆ

ತೆರಳುವ ಅಥವಾ ತನ್ನ ಸ್ವಂತ ದೇಶಕ್ಕೆ ಮರಳುವ ಹಕ್ಕು ಇದೆ.

14. ಎಲ್ಲರಿಗೂ ಯಾವುದೇ ದೇಶದಲ್ಲಿ ಆಶ್ರಯ ಪಡೆದುಕೊಳ್ಳುವ ಹಕ್ಕು ಇರುತ್ತದೆ.
15. ಯಾರೂ ರಾಷ್ಟ್ರೀಯತೆಯ ಹಕ್ಕಿನಿಂದ ವಂಚಿತರಾಗತಕ್ಕದ್ದಲ್ಲ ಮತ್ತು ಎಲ್ಲರಿಗೂ ರಾಷ್ಟ್ರೀಯತೆಯ ಹಕ್ಕು ಇರುತ್ತದೆ.
16. ಹೆಣ್ಣು-ಗಂಡು ಇಬ್ಬರಿಗೂ ಜಾತಿ, ರಾಷ್ಟ್ರೀಯತೆ, ಜನಾಂಗದ ನಿರ್ಬಂಧವಿಲ್ಲದೆ ಮದುವೆಯಾಗಿ ಸಂಸಾರ ನಡೆಸುವ ಹಕ್ಕು ಇರುತ್ತದೆ.
17. ಎಲ್ಲರಿಗೂ ಸ್ವಂತ ಆಸ್ತಿಯನ್ನು ಹೊಂದುವ ಹಕ್ಕು ಇರುತ್ತದೆ.
18. ಎಲ್ಲರಿಗೂ ಚಿಂತನೆ, ಆತ್ಮಸಾಕ್ಷಿಗನುಗುಣವಾಗಿ ಧರ್ಮವನ್ನು ಹೊಂದುವ ಮತ್ತು ಧರ್ಮವನ್ನು ಬದಲಾಯಿಸುವ ಹಕ್ಕು ಇರುತ್ತದೆ.
19. ಎಲ್ಲರಿಗೂ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು ಇರುತ್ತದೆ.
20. ಎಲ್ಲರಿಗೂ ಶಾಂತಿಯುತವಾಗಿ ಒಟ್ಟಿಗೆ ಸೇರುವ ಮತ್ತು ಸಂಘಟನೆಯ ಹಕ್ಕು ಇರುತ್ತದೆ.
21. ಎಲ್ಲರಿಗೂ ನೇರವಾಗಿ ಅಥವಾ ಚುನಾಯಿತ ಪ್ರತಿನಿಧಿಗಳ ಮೂಲಕ ಸರಕಾರದಲ್ಲಿ ಭಾಗವಹಿಸುವ ಹಕ್ಕು ಇರುತ್ತದೆ.
22. ವ್ಯಕ್ತಿಯ ಘನತೆ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಿರುವ ಸಾಮಾಜಿಕ ಭದ್ರತೆಯ ಹಕ್ಕು ಇರುತ್ತದೆ
23. ಎಲ್ಲರಿಗೂ ಕೆಲಸ ಮಾಡುವ, ಬೇಕಾದ ಉದ್ಯೋಗವನ್ನು ಹೊಂದುವ ಹಕ್ಕು ಮತ್ತು ನಿರುದ್ಯೋಗದಿಂದ ರಕ್ಷಣೆ ಇರುತ್ತದೆ.
24. ಎಲ್ಲರಿಗೂ ವಿಶ್ರಾಂತಿಯ ಹಕ್ಕು, ಕೆಲಸದ ಸಮಯ / ವೇಳೆ, ರಜೆಯ ಸಂಬಳದ ಹಕ್ಕು ಇರುತ್ತದೆ
25. ಎಲ್ಲರಿಗೂ ಸೂಕ್ತ ರೀತಿಯಿಂದ ಬದುಕಲು ಕುಟುಂಬದ ಆರೋಗ್ಯಕ್ಕೆ ಅಗತ್ಯವಿರುವ ಊಟ, ಬಟ್ಟೆ, ಮನೆ, ಔಷಧೋಪಚಾರವನ್ನು ಹೊಂದುವ ಮತ್ತು ನಿರುದ್ಯೋಗದಿಂದ, ದೈಹಿಕ ಊನತ್ವದಿಂದ ಬಳಲುವವರಿಗೆ, ವಿಧವೆಯರಿಗೆ, ಹಿರಿಯ ನಾಗರಿಕರಿಗೆ ಎಲ್ಲರಿಗೂ ಭದ್ರತೆಯ ಹಕ್ಕು ಇರುತ್ತದೆ.
26. ಎಲ್ಲರಿಗೂ ಉಚಿತ ಪ್ರಾಥಮಿಕ ಶಿಕ್ಷಣದ ಹಕ್ಕು ಇರುತ್ತದೆ.

27. ಎಲ್ಲರಿಗೂ ಸಮುದಾಯದ ಸಾಂಸ್ಕೃತಿಕ ಜೀವನದಲ್ಲಿ ಉಚಿತವಾಗಿ ಭಾಗವಹಿಸುವ ಹಕ್ಕು ಇರುತ್ತದೆ.
28. ಎಲ್ಲರಿಗೂ ಸಾಮಾಜಿಕ ಮತ್ತು ಅಂತರಾಷ್ಟ್ರೀಯ ಆದೇಶದಂತೆ ಘೋಷಣೆಯ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಪಡೆಯುವ ಹಕ್ಕು ಇರುತ್ತದೆ

## ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ

ಕೆಳಗೆ ಸೂಚಿಸಿರುವ ಸದಸ್ಯರು ಕೇಂದ್ರ ಸರಕಾರ ರಚಿಸಿರುವ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧಿಕಾರವನ್ನು ಚಲಾಯಿಸಲು ಮತ್ತು ಅದರ ಕೆಲಸಗಳ ನಿರ್ವಹಣೆಗೆ ಬದ್ಧರಾಗಿದ್ದಾರೆ.

1. ಭಾರತದ ಸರ್ವೋಚ್ಚ ನ್ಯಾಯಾಲಯದ (ಸುಪ್ರೀಮ್ ಕೋರ್ಟಿನ) ಚೀಫ್ ಜಸ್ಟಿಸ್ ಈ ಆಯೋಗದ ಅಧ್ಯಕ್ಷರಾಗಿರುತ್ತಾರೆ.
2. ಸರ್ವೋಚ್ಚ ನ್ಯಾಯಾಲಯದ ಒಬ್ಬರು ನ್ಯಾಯಾದೀಶರು (ಜಡ್ಜರು) ಒಬ್ಬ ಸದಸ್ಯರು.
3. ಉಚ್ಚ ನ್ಯಾಯಾಲಯದ (ಹೈ ಕೋರ್ಟಿನ) ಚೀಫ್ ಜಸ್ಟಿಸ್ ಒಬ್ಬ ಸದಸ್ಯರು.
4. ಮಾನವ ಹಕ್ಕುಗಳ ವಿಷಯಗಳಲ್ಲಿ ಪ್ರಾಯೋಗಿಕ ಅನುಭವವಿರುವ ಎರಡು ಸದಸ್ಯರು
5. ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರು ಮತ್ತು ರಾಷ್ಟ್ರೀಯ ಮಹಿಳಾ ಅಯೋಗದ ಅಧ್ಯಕ್ಷರು ಸದಸ್ಯರಾಗಿರುತ್ತಾರೆ.

ಆಯೋಗದ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಆಗಿ ಸೆಕ್ರೆಟರಿ ಜನರಲ್ ಅಯೋಗದ ಕಾರ್ಯ ನಿರ್ವಹಣೆ (ನ್ಯಾಯಾಂಗದ ಕಾರ್ಯಗಳನ್ನು ಹೊರತುಪಡಿಸಿ) ನೋಡಿಕೊಳ್ಳುತ್ತಾರೆ. ಆಯೋಗದ ಮುಖ್ಯ ಕಛೇರಿ ದೆಹಲಿಯಲ್ಲಿದೆ. ಕೇಂದ್ರ ಸರಕಾರದ ಅನುಮೋದನೆ ಮೇರೆಗೆ ದೇಶದ ಇತರ ಭಾಗಗಳಲ್ಲಿ ಆಯೋಗದ ಶಾಖೆಗಳ ಸ್ಥಾಪನೆ ಮಾಡಬಹುದು.

## ದೂರು ನೀಡುವಾಗ ಅನುಸರಿಸುವ ಸೂತ್ರಗಳು

ಸಂವಿಧಾನದ 8ನೇ ಅನುಬಂಧದಲ್ಲಿ ಹೆಸರಿಸಲಾದ ಯಾವುದೇ ಭಾಷೆಯಲ್ಲಿ ಖುದ್ದಾಗಿ ಅಥವಾ ಇತರರ ಮೂಲಕ, ಫ್ಯಾಕ್ಸ್ ಅಥವಾ ಇ–ಮೇಲ್ ಮೂಲಕ ದೂರನ್ನು ಕಳುಹಿಸಬಹುದು. ದೂರಿನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆದ

ರೀತಿ, ಯಾರು ಕುಮ್ಮಕ್ಕು ನೀಡಿದ್ದಾರೆ? ಉಲ್ಲಂಘನೆ ತಡೆಗಟ್ಟಲು ಸರಕಾರಿ ಅಧಿಕಾರಿ ಅಸಡ್ಡೆ ತೋರಿಸಿದ್ದಾರೋ? ಈ ವಿಷಯಗಳನ್ನು ಬರೆಯಬೇಕು. ದೂರಿನಲ್ಲಿ ಸಂತ್ರಸ್ತರ ಪ್ರಾಯ, ಲಿಂಗ, ಧರ್ಮ, ರಾಜ್ಯ, ಘಟನೆ ನಡೆದ ದಿನ ನಮೂದಿಸತಕ್ಕದ್ದು. ದೂರುಗಳನ್ನು ಸಾಧ್ಯವಾದಷ್ಟು ನಿಗದಿತ ನಮೂನೆಯಲ್ಲಿ ಬರೆದು ಕಳುಹಿಸಿದರೆ ಉತ್ತಮ.

**ಆಯೋಗ ನಿರ್ವಹಿಸುವ ಕಾರ್ಯಗಳು**

1. ಸರಕಾರಿ ಅಧಿಕಾರಿಯೋರ್ವ ಮಾನವ ಹಕ್ಕುಗಳ ಉಲ್ಲಂಘನೆ ತಡೆಯಲು ಅಸಡ್ಡೆ ತೋರಿಸಿದರೆ ಆಯೋಗ ಸ್ವಯಂ ಪ್ರೇರಿತವಾಗಿ ತನಿಖೆ ಕೈಗೆತ್ತಿಕೊಳ್ಳತಕ್ಕದ್ದು.
2. ಪ್ರಕರಣವು ನ್ಯಾಯಾಲಯದಲ್ಲಿದ್ದರೆ ಆ ನ್ಯಾಯಾಲಯದ ಅನುಮತಿ ಪಡೆದುಕೊಂಡು ಮಧ್ಯಪ್ರವೇಶ ಮಾಡತಕ್ಕದ್ದು.
3. ಸರಕಾರಿ ನಿಯಂತ್ರಣದ ಜೈಲು ಮತ್ತಿತರ ಸಂಸ್ಥೆಗಳಿಗೆ ಭೇಟಿ ನೀಡಿ ಅಲ್ಲಿ ಬಂಧಿಸಿಡಲಾದ ಮನುಷ್ಯರು ಯಾವ ಸ್ಥಿತಿಗತಿಯಲ್ಲಿ ಬದುಕುತ್ತಿದ್ದಾರೆ ಎಂದು ಅಧ್ಯಯನ ಮಾಡಿ ಶಿಫಾರಸು ಕಳುಹಿಸಬೇಕು.
4. ಮಾನವ ಹಕ್ಕುಗಳನ್ನು ಅನುಭವಿಸುವಲ್ಲಿ ಅಡ್ಡಿಯಾಗಿರುವ ಅಂಶಗಳನ್ನು ಪರಿಶೀಲನೆಗೊಳಪಡಿಸಿ ಸೂಕ್ತ ಪರಿಹಾರ ಸೂಚಿಸಬೇಕು.
5. ಮಾನವ ಹಕ್ಕುಗಳ ಬಗ್ಗೆ ಸಂಶೋಧನೆ ಕೈಗೊಳ್ಳಬೇಕು.
6. ಮಾನವ ಹಕ್ಕುಗಳ ಸಂರಕ್ಷಣೆ, ರಕ್ಷಣೋಪಾಯಗಳ ಬಗ್ಗೆ ವಿಚಾರ ಸಂಕಿರಣ, ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆ ನೀಡಬೇಕು.
7. ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುವ ಸರಕಾರೇತರ ಸಂಸ್ಥೆಗಳಿಗೆ ಉತ್ತೇಜನ ನೀಡಬೇಕು.

**ಆಯೋಗದ ಅಧಿಕಾರ**

ಸಿವಿಲ್ ನ್ಯಾಯಾಲಯಕ್ಕೆ ಇರುವ ಎಲ್ಲಾ ಅಧಿಕಾರವನ್ನು ಮಾನವ ಹಕ್ಕುಗಳ ಆಯೋಗಕ್ಕೆ ನೀಡಲಾಗಿದೆ. ಇವುಗಳಲ್ಲಿ ಪ್ರಾಮುಖ್ಯವಾಗಿ:

1. ಸಾಕ್ಷಿಗಳಿಗೆ ಸಮನ್ಸ್ ಕಳುಹಿಸಿ ಅವರು ಕಡ್ಡಾಯವಾಗಿ ಆಯೋಗದ ಮುಂದೆ ಹಾಜರಾಗುವಂತೆ ನೋಡುವುದು, ಅವರ ಪ್ರಮಾಣ ವಚನ ಸ್ವೀಕರಿಸಿ ವಿಚಾರಣೆಗೆ ಒಳಪಡಿಸುವುದು.

2. ಯಾವುದೇ ಇಲಾಖೆಗೆ ಅಥವಾ ನ್ಯಾಯಾಲಯಕ್ಕೆ ವಿಧ್ಯುಕ್ತ ಆಜ್ಞಾಪತ್ರ ಕಳುಹಿಸಿ ಅಗತ್ಯವಿರುವ ಸಾರ್ವಜನಿಕ ದಾಖಲೆ ತರಿಸುವುದು.

3. ಪ್ರಮಾಣ ಪತ್ರದ ಮೂಲಕ ಸಾಕ್ಷಿಗಳ ವಿಚಾರಣೆ ನಡೆಸುವುದು.

4. ಕೇಂದ್ರ ಅಥವಾ ರಾಜ್ಯ ಸರಕಾರದ ತನಿಖಾ ಸಂಸ್ಥೆಯ ಸೇವೆಯನ್ನು ಅಗತ್ಯವಿರುವಾಗ ಬಳಸುವ ಅಧಿಕಾರ ಆಯೋಗಕ್ಕಿದೆ.

**ಆಯೋಗದ ತನಿಖಾ ವಿಧಾನ**

1. ಆಯೋಗಕ್ಕೆ ಕೇಂದ್ರ ಅಥವಾ ರಾಜ್ಯ ಸರಕಾರ ಅಥವಾ ಪ್ರಾಧಿಕಾರದಿಂದ ಮಾಹಿತಿ ಬೇಕಾಗಿರುವಾಗ ನಿಗಧಿತ ಅವಧಿಯೊಳಗೆ ವರದಿಯನ್ನು ಕಳುಹಿಸಲು ತಿಳಿಸಬಹುದು.

2. ನಿಗಧಿತ ಅವಧಿಯಲ್ಲಿ ಮಾಹಿತಿ ಬರದಿದ್ದರೆ ಆಯೋಗ ತಾನಾಗಿಯೇ ದೂರಿನ ತನಿಖೆ ಪ್ರಾರಂಭಿಸಬಹುದು.

3. ಸಂಬಂಧಪಟ್ಟ ಸರಕಾರ ಅಥವಾ ಪ್ರಾಧಿಕಾರ ಅಗತ್ಯ ಕ್ರಮ ಕೈಗೊಂಡಿದ್ದರೆ ದೂರುದಾರನಿಗೆ ಆ ವಿಷಯವನ್ನು ತಿಳಿಸಲಾಗುತ್ತದೆ

**ತನಿಖೆಯ ನಂತರ ಆಯೋಗ ತೆಗೆದುಕೊಳ್ಳುವ ಕ್ರಮ**

1. ಸರಕಾರಿ ಅಧಿಕಾರಿಯಿಂದ ಮಾನವ ಹಕ್ಕು ರಕ್ಷಣೆಯಲ್ಲಿ ನಿರ್ಲಕ್ಷ್ಯವಾಗಿದ್ದರೆ:

    ಅ) ಆಯೋಗಕ್ಕೆ ಅಗತ್ಯವೆಂದು ಮನದಟ್ಟಾದಾಗ ಫಿರ್ಯಾದಿದಾರರಿಗೆ ಅಥವಾ ಆ ಘಟನೆಯಿಂದ ಬಲಿಪಶು ಆಗಿರುವ ವ್ಯಕ್ತಿಗೆ ಅಥವಾ ಅವನ ಕುಟುಂಬದ ಸದಸ್ಯರಿಗೆ ಪರಿಹಾರ ಅಥವಾ ನಷ್ಟ ಪಾವತಿಸಲು ಆದೇಶ

    ಆ) ಅಪರಾಧ ಮಾಡಿದ್ದಾರೆ ಎಂದು ಗೊತ್ತಾಗಿರುವ ವ್ಯಕ್ತಿ / ವ್ಯಕ್ತಿಗಳ ವಿರುದ್ದ ಸೂಕ್ತ ಕ್ರಮಕ್ಕೆ ಆದೇಶ.

    ಇ) ಆಯೋಗಕ್ಕೆ ಸೂಕ್ತವೆನಿಸುವ ಇನ್ನಿತರ ಕ್ರಮ ತೆಗೆದುಕೊಳ್ಳಬಹುದು.

2. ಸುಪ್ರೀಮ್ ಕೋರ್ಟ್ ಅಥವಾ ಹೈ ಕೋರ್ಟನ್ನು ಸಂಪರ್ಕಿಸಿ / ಭೇಟಿಯಾಗಿ ಅಗತ್ಯವಿರುವ ಆದೇಶ, ನಿರ್ದೇಶ ಅಥವಾ ರಿಟ್ ದಾಖಲಿಸಲು ಆ ನ್ಯಾಯಾಲಯ ತಿಳಿಸಿದಂತೆ ಕ್ರಮ ತೆಗೆದುಕೊಳ್ಳಬಹುದು.

3. ತನಿಖೆಯ ಯಾವುದೇ ಸಂದರ್ಭದಲ್ಲಿ ಬಲಿಪಶು ಆದ ವ್ಯಕ್ತಿಗೆ ಅಥವಾ ಅವನ ಕುಟುಂಬದ ಸದಸ್ಯರಿಗೆ ಮಧ್ಯಂತರ ಪರಿಹಾರ ಕೊಡಲು ಆಯಾ ಸರಕಾರಕ್ಕೆ ಅಥವಾ ಪ್ರಾಧಿಕಾರಕ್ಕೆ ಶಿಫಾರಸು ಮಾಡುವುದು.

4. ತನಿಖೆಯ ವರದಿಯ ಪ್ರತಿಯನ್ನು ಫಿರ್ಯಾದಿಗೆ ಅಥವಾ ಅವರ ಸಂಬಂಧಿತರಿಗೆ ಕೊಡುವುದು.

5. ತನಿಖೆಯ ವರದಿ ಮತ್ತು ಶಿಫಾರಸುಗಳನ್ನು ಕಳುಹಿಸಿದ ವರದಿ, ಸರಕಾರ ಅಥವಾ ಸೂಕ್ತ ಪ್ರಾಧಿಕಾರಕ್ಕೆ ತಲುಪಿದ ಒಂದು ತಿಂಗಳ ಒಳಗೆ ತಮ್ಮ ವ್ಯಾಖ್ಯಾನ ಮತ್ತು ತೆಗೆದುಕೊಂಡ ಕ್ರಮಗಳ ವಿವರದ ವರದಿ ಆಯೋಗಕ್ಕೆ ಕಳುಹಿಸುತ್ತಾರೆ.

6. ಸಂಬಂಧಿತ ಸರಕಾರ ಅಥವಾ ಪ್ರಾಧಿಕಾರ ಕಳುಹಿಸಿದ ವ್ಯಾಖ್ಯಾನಗಳ ಮತ್ತು ತೆಗೆದುಕೊಂಡ ಕ್ರಮಗಳ ವಿವರದ ಜೊತೆಗೆ ಆಯೋಗ ತನ್ನ ತನಿಖಾ ವರದಿಯನ್ನು ಪ್ರಕಟಿಸುತ್ತದೆ.

7. ಸಶಸ್ತ್ರ ಪಡೆಗಳಿಗೆ ಸಂಬಂಧಿಸಿದ ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ಆಯೋಗ ತನಗೆ ಬಂದಿರುವ ದೂರುಗಳ ಆಧಾರದಲ್ಲಿ ಕೇಂದ್ರ ಸರಕಾರದಿಂದ ವರದಿಯನ್ನು ಕೇಳಬಹುದು.

8. ಆಯೋಗವು ಕೇಂದ್ರ ಸರಕಾರದ ವರದಿಗೆ ನೀಡಿದ ಶಿಫಾರಸ್ಸುಗಳು ಸರಕಾರಕ್ಕೆ ತಲುಪಿದ 3 ತಿಂಗಳ ಒಳಗೆ, ಸರಕಾರವು ಆಯೋಗಕ್ಕೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸತಕ್ಕದ್ದು.

9. ಘಟನೆ ಸಂಭವಿಸಿ ಒಂದು ವರ್ಷ ಕಳೆದಿದ್ದರೆ, ಸಂಬಧಿಸಿದ ದೂರು ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿದ್ದರೆ ಯಾ ಗುಪ್ತ ನಾಮಧೇಯದ್ದಾದರೆ ಯಾ ಸೇವಾ ವಿಚಾರಗಳಿಗೆ ಸಂಬಧಿಸಿದ್ದಾಗಿದ್ದರೆ ಇಂತಹ ದೂರುಗಳನ್ನು ಆಯೋಗ ತನಿಖೆಗೆ ಸ್ವೀಕರಿಸುವುದಿಲ್ಲ.

## ಆಯೋಗದ ಕಾರ್ಯಚಟುವಟಿಕೆಯ ವಿಷಯಗಳು:

ಮಾನವ ಹಕ್ಕುಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಆಯೋಗ ಕ್ರಿಯಾಶೀಲತೆಯಿಂದ ಪತ್ತೆಹಚ್ಚಿ ಸ್ವಯಂ ಪ್ರೇರಿತವಾಗಿ ತನಿಖೆ ಮಾಡುತ್ತದೆ. ಅಂತೆಯೇ ಮಾಧ್ಯಮ, ತಜ್ಞ ಸಲಹೆಗಾರರು, ಆತಂಕಿತ ನಾಗರಿಕರು ಆಯೋಗದ ಗಮನ ಸೆಳೆದಾಗಲೂ ಈ ಕಾರ್ಯ ಮಾಡಲಾಗುತ್ತದೆ.

ನಾಗರಿಕ ಹಕ್ಕುಗಳು, ರಾಜಕೀಯ ಹಕ್ಕುಗಳು, ಅರ್ಥಿಕ ಹಕ್ಕುಗಳು, ಸಾಮಾಜಿಕ ಹಕ್ಕುಗಳು, ಸಾಂಸ್ಕೃತಿಕ ಹಕ್ಕುಗಳು, ಆಯೋಗದ ವ್ಯಾಪ್ತಿಯಲ್ಲಿ ಬರುತ್ತವೆ. ಅಂತೆಯೇ ಅತ್ಯಾಚಾರ ಮತ್ತು ಚಿತ್ರಹಿಂಸೆಯ ಪ್ರಕರಣಗಳು, ಸೆರೆಮನೆಯ ಸಾವುಗಳು, ಪೋಲಿಸ್ ವ್ಯವಸ್ಥೆಯ ಸುಧಾರಣೆ, ಸೆರೆಮನೆ, ಮಹಿಳಾ ಆಶ್ರಮಗಳ ಸುಧಾರಣೆ, ಮಾನಸಿಕ ರೋಗಿಗಳ ಆಸ್ಪತ್ರೆ ಇವುಗಳಿಗೂ ಆಯೋಗ ವಿಶೇಷ ಗಮನ ನೀಡುತ್ತದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಅವಕಾಶ ವಂಚಿತ ಪ್ರಜೆಗಳಿಗೆ ನ್ಯಾಯ ಒದಗಿಸುವ ಬಗ್ಗೆ ಮತ್ತು ಅವರ ವಿರುದ್ಧ ನಡೆಯುವ ಅತ್ಯಾಚಾರಗಳ ಮೇಲೂ ಆಯೋಗ ಕಾರ್ಯಪ್ರವೃತ್ತವಾಗಿದೆ. ಅಲ್ಪಸಂಖ್ಯಾತರ ಹಕ್ಕುಗಳು, ಆಹಾರದ ಅಭಾವ ಮತ್ತು ಹಸಿವಿನಿಂದ ಆಗುವ ಸಾವುಗಳು, ಸಾರ್ವಜನಿಕ ಸೇವೆಗಳ ಲಭ್ಯತೆ, ಲೈಂಗಿಕ ಕಿರುಕುಳ ಮತ್ತು ಮಹಿಳೆಯರ ಹಕ್ಕುಗಳ ವಿಷಯಗಳಲ್ಲಿ ಆಯೋಗ ಕ್ರಮ ತೆಗೆದುಕೊಂಡಿರುತ್ತದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ರಚನೆಯಾದ ರೀತಿಯಲ್ಲಿ ಎಲ್ಲಾ ರಾಜ್ಯಗಳು ಆಯಾ ರಾಜ್ಯದ ಹೆಸರಿನಲ್ಲಿ ಮಾನವ ಹಕ್ಕುಗಳ ಆಯೋಗಗಳನ್ನು ರಚಿಸಿವೆ. ಈ ಆಯೋಗಗಳಲ್ಲಿ ಆ ರಾಜ್ಯದ ಉಚ್ಚ ನ್ಯಾಯಾಲಯದ ಚೀಫ್ ಜಸ್ಟಿಸ್ ಮತ್ತು ಇತರ ನೇಮಕಗೊಂಡ ಸದಸ್ಯರು ಇರುತ್ತಾರೆ. ರಾಜ್ಯ ಆಯೋಗದ ಕಾರ್ಯದರ್ಶಿ ಅವರಿಗೆ ವಹಿಸಿರುವ ಕೆಲಸಗಳನ್ನು ಮಾಡುತ್ತಾರೆ. ಸಂವಿಧಾನದ 7ನೇ ಅನುಸೂಚಿಯ 11 ಮತ್ತು 111 ಲಿಸ್ಟ್‌ನಲ್ಲಿ ವಿವರಿಸಿದ ಮಾನವ ಹಕ್ಕುಗಳ ಉಲ್ಲಂಘನೆಯ ವಿಷಯಗಳನ್ನು ತನಿಖೆಗೆ ಒಳಪಡಿಸಬಹುದು. ರಾಜ್ಯ ಅಸೆಂಬ್ಲಿಯ ಸ್ಪೀಕರ್, ರಾಜ್ಯ ಗೃಹಮಂತ್ರಿ, ವಿರೋಧ ಪಕ್ಷದ ಮುಖ್ಯಸ್ಥರು ಇವರೆಲ್ಲರ ಶಿಫಾರಸ್ಸು ಮೇರೆಗೆ ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷರನ್ನು ನೇಮಿಸುತ್ತಾರೆ. ಆಯೋಗದ ಅಧ್ಯಕ್ಷರ ಅವಧಿಯು 5 ವರ್ಷದ್ದಾಗಿರುತ್ತದೆ ಅಥವಾ ಅವರಿಗೆ 70 ವರ್ಷ ವಯಸ್ಸು ಆದಾಗ ಕೊನೆಗೊಳ್ಳುತ್ತದೆ.

ರಾಜ್ಯ ಸರಕಾರವು ಉಚ್ಚ ನ್ಯಾಯಾಲಯದ ಚೀಫ್ ಜಸ್ಟಿಸ್ ಇವರ ಸಹಮತದೊಂದಿಗೆ ಅಧಿಸೂಚನೆ ಮೂಲಕ ಜಿಲ್ಲಾ ಸತ್ರ ನ್ಯಾಯಾಲಯವನ್ನು 'ಮಾನವ ಹಕ್ಕುಗಳ ನ್ಯಾಯಾಲಯವಾಗಿ ಸೂಚಿಸುತ್ತದೆ.

## ಸದ್ಭಾವನೆಯಿಂದ ತೆಗೆದುಕೊಂಡ ಕ್ರಮಗಳಿಗೆ ರಕ್ಷಣೆ

ಕೇಂದ್ರ ಸರಕಾರದ, ರಾಜ್ಯ ಸರಕಾರದ, ಕೇಂದ್ರ ಆಯೋಗದ, ರಾಜ್ಯ ಆಯೋಗದ ಅಥವಾ ಕೇಂದ್ರ ರಾಜ್ಯ ಆಯೋಗ ಅಥವಾ ರಾಜ್ಯ ಸರಕಾರದ ಯಾವುದೇ

ಸದಸ್ಯರ ನಿರ್ದೇಶನದಿಂದ ಯಾವುದೇ ವ್ಯಕ್ತಿ ಸದ್ಭಾವನೆಯಿಂದ ಯಾವುದೇ ಕ್ರಮವನ್ನು ತೆಗೆದುಕೊಂಡಿದ್ದರೆ ಅಥವಾ ಕ್ರಮ ತೆಗೆದುಕೊಳ್ಳಲು ಇಚ್ಛಿಸಿದ್ದರೆ ಅಥವಾ ಯಾವುದೇ ಆದೇಶವನ್ನು ಪ್ರಕಟಿಸಿದ್ದರೆ ಅಥವಾ ಕೇಂದ್ರ ರಾಜ್ಯ ಅಯೋಗ ಅಥವಾ ರಾಜ್ಯ ಆಯೋಗದ ವರದಿಯನ್ನು ಅಥವಾ ವ್ಯವಹರಣೆಯನ್ನು ಸದ್ಭಾವನೆಯಿಂದ ಪ್ರಕಟಿಸಿದ್ದರೆ, ಅವುಗಳ ವಿರುದ್ಧ ಯಾವುದೇ ಧಾವೆ ಅಥವಾ ಕಾನೂನು ಕ್ರಮ ಜರಗಿಸುವುದನ್ನು ನಿರ್ಬಂಧಿಸಲಾಗಿದೆ.

## ಕೇಂದ್ರ ಸರಕಾರದ ನಿಯಮಗಳನ್ನು ರಚಿಸುವ ಅಧಿಕಾರ

ಈ ಕಾನೂನಿನ ನಿಭಾವಣೆಗೆ ಕೇಂದ್ರ ಸರಕಾರವು ಅಧಿಸೂಚನೆ ಮೂಲಕ–

ಅ) ಅಧ್ಯಕ್ಷರ ಮತ್ತು ಸದಸ್ಯರ ಸಂಬಳ ಮತ್ತು ಭತ್ಯೆಗಳ ನಿರ್ಧಾರಣೆಯ ಬಗ್ಗೆ;

ಆ) ಯಾವ ಷರತ್ತುಗಳ ಆಧಾರದಲ್ಲಿ ಆಯೋಗದ ಆಡಳಿತ, ತಾಂತ್ರಿಕ ಮತ್ತು ವೈಜ್ಞಾನಿಕ ಶಿಬ್ಬಂಧಿಯನ್ನು ನೇಮಿಸಬೇಕು, ಅವರ ಸಂಬಳ ಮತ್ತು ಭತ್ಯೆಗಳ ನಿರ್ಧಾರಣೆಯ ಬಗ್ಗೆ;

ಇ) ಆಯೋಗಕ್ಕೆ ಸಿವಿಲ್ ನ್ಯಾಯಾಲಯದ ಇತರ ಯಾವುದೇ ಅಧಿಕಾರವನ್ನು ದಯಪಾಲಿಸಬೇಕೆಂಬ ಬಗ್ಗೆ;

ಈ) ಆಯೋಗದ ವಾರ್ಷಿಕ ಲೆಕ್ಕಪತ್ರ ಯಾವ ನಮೂನೆಯಲ್ಲಿ ತಯಾರಿಸಬೇಕೆಂಬ ಬಗ್ಗೆ; ನಿಯಮಗಳನ್ನು ರಚಿಸಬಹುದು.

ಈ ಕಾನೂನಿನಡಿಯಲ್ಲಿ ಮಾಡಿರುವ ಎಲ್ಲಾ ನಿಯಮಗಳನ್ನು, ಪಾರ್ಲಿಮೆಂಟಿನ ಎರಡೂ ಸದನಗಳು 30 ದಿನಗಳ ಕಾಲ ಕಾರ್ಯಪ್ರವೃತ್ತವಾಗಿರುವಾಗ ಅನುಮೋದನೆಗೆ ಇಡತಕ್ಕದ್ದು.

# ಮೋಟಾರು ವಾಹನ ಅಧಿನಿಯಮ 1988

ಈ ಆಧುನಿಕ ಯುಗದಲ್ಲಿ ಮೋಟಾರು ವಾಹನವು ಮಾನವನ ಜೀವನದ ಅವಿಭಾಜ್ಯ ಅಂಗ ಎಂದು ಹೇಳಿದರೆ ಅತಿಶೋಕ್ತಿಯಾಗಲಾರದು. ಇಂದಿನ ಯುವ ಜನಾಂಗಕ್ಕೆ ಮೊಬೈಲ್ ಇಲ್ಲದೆ ಜೀವಿಸುವುದು ಅಸಾಧ್ಯ ಎಂಬಂತಾಗಿದೆ. ಅದೇ ರೀತಿಯಲ್ಲಿ ಮೋಟಾರು ವಾಹನಗಳಿಲ್ಲದೆ ಜೀವನ ನಡೆಸುವುದು ಹೇಗೆ ಎಂದು ಊಹಿಸಲೂ ಅಸಾಧ್ಯ ಎಂಬಂತಹ ಪರಿಸ್ಥಿತಿ ಇಂದು ಉದ್ಭವವಾಗಿದೆ. ಇಂದು ಮಧ್ಯಮ ವರ್ಗದ ಬಹುತೇಕ ಜನರು ಮೋಟಾರ್ ಬೈಕ್/ಸ್ಕೂಟರ್ ಅಥವಾ ಸಣ್ಣ ಕಾರಿನ ಮಾಲಕರಾಗಿದ್ದಾರೆ. ಆದರೆ ವಾಹನವನ್ನು ಸಾರ್ವಜನಿಕ ರಸ್ತೆಯಲ್ಲಿ ಚಲಾಯಿಸುವಾಗ ಕಾನೂನು ರೀತ್ಯಾ ಯಾವ ದಾಖಲೆಗಳು ನಮ್ಮ ವಶದಲ್ಲಿರಬೇಕು? ಅವುಗಳನ್ನು ಪಡೆದುಕೊಳ್ಳುವುದು ಹೇಗೆ? ವಾಹನ ಅಪಘಾತ ಸಂಭವಿಸಿದಾಗ ಏನು ಮಾಡಬೇಕು? ಈ ಸಂದರ್ಭದಲ್ಲಿ ಪೋಲಿಸರ ಅಧಿಕಾರ ವ್ಯಾಪ್ತಿಯೆನು? ನ್ಯಾಯಾಲಯವನ್ನು ಹೇಗೆ ಸಂಪರ್ಕಿಸುವುದು? ವಾಹನ ಅಪಘಾತದಿಂದ ಬಲಿಪಶುವಾದ ವ್ಯಕ್ತಿ ಪರಿಹಾರ ಪಡೆಯುವ ವಿಧಾನ ಯಾವುದು? ವಾಹನಗಳಿಗೆ ಇನ್ಶೂರೆನ್ಸ್ ಕಡ್ಡಾಯವೇ? ಇತ್ಯಾದಿ., ವಿಷಯಗಳು ವಾಹನದ ಮಾಲೀಕರಿಗೆ ಮತ್ತು ಸಾರ್ವಜನಿಕರಿಗೆ ತಿಳಿದಿರಬೇಕಾದುದು ಇಂದಿನ ಪ್ರಾಮುಖ್ಯ ವಿಷಯಗಳಲ್ಲಿ ಒಂದಾಗಿದೆ.

### ವಾಹನ ಚಾಲನಾ ಪರವಾನಿಗೆ (ಲೈಸನ್ಸ್) ಪಡೆಯುವುದು ಹೇಗೆ?

1. ಗೇರು ಇರುವ ಅಥವಾ ಗೇರು ಇಲ್ಲದ ದ್ವಿಚಕ್ರ ವಾಹನದ ಲೈಸನ್ಸ್.
2. ಲಘು ಮೋಟಾರು ವಾಹನ. ಇದರಲ್ಲಿ 2 ವಿಧದ ಲೈಸನ್ಸ್ ಇರುತ್ತದೆ. ಖಾಸಗಿ ಮತ್ತು ಸಾರ್ವಜನಿಕ ಸೇವೆಯ ವಾಹನ (ಉದಾ: ಕಾರು, ಮಿನಿ ಬಸ್ಸು, ಮ್ಯಾಕ್ಸಿ ಕ್ಯಾಬ್ ಇತ್ಯಾದಿ. ಈ ವಾಹನಗಳ ಭಾರ 7,500 ಕಿಲೊ ಗ್ರಾಂಕ್ಕಿಂತ ಕಡಿಮೆ ಇರತಕ್ಕದ್ದು.
3. ಘನ ಮೋಟಾರು ವಾಹನ ಲೈಸನ್ಸ್

   ಅ) ಹೆವಿ ಗೂಡ್ಸ್ ವಾಹನ ಉದಾ: ಲಾರಿ

   ಆ) ಹೆವಿ ಪ್ಯಾಸೆಂಜರ್ ವಾಹನ ಉದಾ: ಬಸ್ಸು

18 ವರ್ಷ ಪ್ರಾಯ ತುಂಬಿದ ವ್ಯಕ್ತಿಯು ಸಾರ್ವಜನಿಕ ಸ್ಥಳದಲ್ಲಿ ವಾಹನ ಚಲಾಯಿಸಲು ಸಂಬಂಧಿತ ಆರ್.ಟಿ.ಒ. ಕಚೇರಿಯಲ್ಲಿ ಲರ್ನಿಂಗ್ (ಕಲಿಯುವಿಕೆಯ)

ಚಾಲನಾ ಪರವಾನಿಗೆಗೆ ಅರ್ಜಿ ಸಲ್ಲಿಸಬೇಕು. ಈ ಚಾಲನಾ ಪರವಾನಿಗೆಯು 6 ತಿಂಗಳು ಊರ್ಜಿತದಲ್ಲಿರುತ್ತದೆ. ಲರ್ನಿಂಗ್ ಲೈಸೆನ್ಸ್ ಹೊಂದಿರುವ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ವಾಹನ ಚಲಾಯಿಸುವಾಗ ಖಾಯಂ ಚಾಲನಾ ಪರವಾನಿಗೆ ಹೊಂದಿರುವ ವ್ಯಕ್ತಿಯನ್ನು ಹಿಂಬದಿ ಸವಾರರಾಗಿ ಕುಳ್ಳಿರಿಸಿ ವಾಹನ ಚಲಾಯಿಸತಕ್ಕದ್ದು. ಲರ್ನಿಂಗ್ ಚಾಲನಾ ಪರವಾನಿಗೆ ಹೊಂದಿರುವವರು 6 ತಿಂಗಳು ಅವದಿ ಮುಗಿಯುವ ಮೊದಲು ಶಾಶ್ವತ/ಖಾಯಂ ಚಾಲನಾ ಪರವಾನಿಗೆ ಪಡೆದುಕೊಳ್ಳತಕ್ಕದ್ದು.

ಲೈಸನ್ಸ್ ಕೊಡುವ ಅಧಿಕಾರಿ ಲರ್ನಿಂಗ್ ಚಾಲನಾ ಪರವಾನಿಗೆ ನವೀಕರಣ ಮಾಡಲು ಅಥವಾ ಲೈಸನ್ಸ್ ಕೊಡಲು ನಿರಾಕರಿಸಿದ ಪಕ್ಷದಲ್ಲಿ, ಅರ್ಜಿದಾರರಿಗೆ ಲೈಸನ್ಸ್ ನಿರಾಕರಿಸದ ಬಗ್ಗೆ ಕಾರಣಗಳನ್ನು ಆದೇಶದಲ್ಲಿ ಬರೆದು ತಿಳಿಸತಕ್ಕದ್ದು. ಲೈಸನ್ಸ್ ಕೊಡಲು ನಿರಾಕರಿಸಿದ ವ್ಯಕ್ತಿಯು 30 ದಿನಗಳ ಒಳಗೆ ಸೂಕ್ತ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಿ ಲೈಸನ್ಸ್ ನೀಡಲು ವಿನಂತಿಸಬಹುದು.

**ಲೈಸನ್ಸಿಂಗ್ ಅಧಿಕಾರಿ ಯಾವ ಸಂಧರ್ಭಗಳಲ್ಲಿ ಚಾಲನಾ ಪರವಾನಿಗೆ ರದ್ದು ಮಾಡಬಹುದು?**

1. ರೂಢಿಗತ ಕ್ರಿಮಿನಲ್ ಅಥವಾ ರೂಢಿಗತ ಕುಡುಕನಿಗೆ
2. ರೂಢಿಗತ ನಿದ್ರಾಜನಕ/ಮಂಪರು ತರಿಸುವ ಪಧಾರ್ಥ ಸೇವಿಸುವವನಿಗೆ
3. ಸಂಜ್ಞೇಯ ಅಪರಾಧದಲ್ಲಿ ಮೋಟಾರು ವಾಹನ ಉಪಯೋಗಿಸಿದ್ದರೆ
4. ಮೊದಲಿನ ವರ್ತನೆ ಸಾರ್ವಜನಿಕರಿಗೆ ಅಪಾಯ ಉಂಟುಮಾಡುವ ರೀತಿಯಲ್ಲಿದ್ದರೆ
5. ಮೋಸ ಮತ್ತು ತಪ್ಪು ನಿರೂಪಣೆ ಮೂಲಕ ಲೈಸನ್ಸ್ ಪಡೆದುಕೊಂಡಿದ್ದರೆ
6. ಸಾರ್ವಜನಿಕರಿಗೆ ಕೆಡುಕು ತಂದಿದ್ದರೆ ಅಥವಾ ಅಪಾಯ ಉಂಟು ಮಾಡಿದ್ದರೆ
7. ಅಗತ್ಯವಿರುವ ದಾಖಲೆಗಳನ್ನು ಕೊಡದಿದ್ದರೆ ಅಥವಾ ಚಾಲನಾ ಪರವಾನಿಗೆ ಪರೀಕ್ಷೆಯಲ್ಲಿ ಫೇಲ್ ಆಗಿದ್ದರೆ
8. 18 ವರ್ಷಗಳು ತುಂಬಿರದಿದ್ದರೆ

ಮೇಲ್ಕಾಣಿಸಿದ ಸಂದರ್ಭಗಳಲ್ಲಿ ಲೈಸನ್ಸಿಂಗ್ ಅಧಿಕಾರಿ ಚಾಲನಾ ಪರವಾನಿಗೆ ರದ್ದು ಮಾಡುವ ಆದೇಶವನ್ನು ಮಾಡಬಹುದು.

**ಚಾಲನಾ ಪರವಾನಿಗೆ ಅಮಾನತುಗೊಳಿಸುವುದು.**

1. ಅತೀ ವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಲಾಯಿಸಿ ಅಪರಾಧಿ

ಎಂದು ಘೋಷಿಸಲ್ಪಟ್ಟ ವ್ಯಕ್ತಿ ಅಪಾಯಕಾರಿಯಾದ ವಾಹನ ಚಲಾವಣೆಯಿಂದ ಯಾವುದೇ ವ್ಯಕ್ತಿಯ ದುರ್ಮರಣಕ್ಕೆ ಕಾರಣನಾದರೆ ಅಥವಾ ತೀವ್ರತರದ ಗಾಯವನ್ನು ಉಂಟುಮಾಡುವಂತಹ ಅಪಘಾತ ಮಾಡಿದ್ದರೆ ಅಂತಹ ವ್ಯಕ್ತಿಯ ಚಾಲನಾ ಪರವಾನಿಗೆಯನ್ನು ಅಮಾನತುಗೊಳಿಸಬಹುದು. ಈ ಅಮಾನತು–

ಅ) ಕೇಸು ದಾಖಲಿಸಿದ ದಿನದಿಂದ 6 ತಿಂಗಳ ಅವಧಿಗೆ, ಅಥವಾ

ಆ) ಅಂತಹ ಆರೋಪಿಯು ಕೇಸಿನಲ್ಲಿ ತಪ್ಪಿತಸ್ಥನಲ್ಲವೆಂದು ಮೇಲ್ಕಾಣಿಸಿದ ಅವಧಿಯೊಳಗೆ ಘೋಷಿತನಾದರೆ, ಅಲ್ಲಿಯ ತನಕ ಊರ್ಜಿತದಲ್ಲಿರುತ್ತದೆ.

2. ಸಂಬಂಧಿಸಿದ ಕೇಸು ದಾಖಲಿಸಿದ ಪೋಲಿಸ್ ಠಾಣಾಧಿಕಾರಿ ಚಾಲನಾ ಪರವಾನಿಗೆಯನ್ನು ರದ್ದು ಮಾಡಿರುವ ಬಗ್ಗೆ ನ್ಯಾಯಾಲಯದ ತಿಳುವಳಿಕೆಗೆ ತಂದು ಅಪರಾಧದ ಸಂಜ್ಞಾನ ಮಾಡಲು ತಿಳಿಸುತ್ತಾರೆ. ಆ ತರುವಾಯ ನ್ಯಾಯಾಲಯವು ಆ ಆರೋಪಿಯ ಚಾಲನಾ ಪರವಾನಿಗೆಯನ್ನು ವಶಪಡಿಸಿ ಅಮಾನತು ಮಾಡಿರುವ ಬಗ್ಗೆ ದಾಖಲಿಸಲು ಚಾಲನಾ ಪರವಾನಿಗೆ ನೀಡಿರುವ ಲೈಸನ್ಸಿಂಗ್ ಅಧಿಕಾರಿಗೆ ತಿಳಿಸುತ್ತಾರೆ.

3. ನ್ಯಾಯಾಲಯದಲ್ಲಿ ಅಪಘಾತದ ಕೇಸಿನಲ್ಲಿ ಆ ವ್ಯಕ್ತಿ ನಿರ್ದೋಷಿಯೆಂದು ಘೋಷಿಸಲ್ಪಟ್ಟರೆ, ಆ ವ್ಯಕ್ತಿಯ ಚಾಲನಾ ಪರವಾನಿಗೆಯಲ್ಲಿ ಅಮಾನತು ಮಾಡಿರುವ ಬಗ್ಗೆ ದಾಖಲಿಸಿರುವ ಸೂಚನೆಯನ್ನು ರದ್ದು ಮಾಡುವಂತೆ ಲೈಸನ್ಸಿಂಗ್ ಅಧಿಕಾರಿಗೆ ತಿಳಿಸಲಾಗುತ್ತದೆ.

## ಮೋಟಾರು ವಾಹನಗಳ ನೋಂದಣಿ

ನೋಂದಣಿ ಆಗದ ಯಾವುದೇ ಮೋಟಾರು ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಅಥವಾ ಯಾವುದೇ ಸ್ಥಳದಲ್ಲಿ ಚಲಾಯಿಸುವುದು ನಿಷಿದ್ಧವಾಗಿದೆ. ಮೋಟಾರು ವಾಹನದ ಮಾಲೀಕನು, ಅವನು ವಾಸಿಸುವ ಸ್ಥಳದ ಅಥವಾ ಅವನ ವ್ಯಾಪಾರದ ಸ್ಥಳದ ನೋಂದಣಿ ಪ್ರಾಧಿಕಾರದಲ್ಲಿ ವಾಹನವನ್ನು ನೋಂದಣಿ ಮಾಡತಕ್ಕದ್ದು.

ಮೋಟಾರು ವಾಹನದ ಮಾಲೀಕರ ಪರವಾಗಿ ಅರ್ಜಿಯ ಜೊತೆಗೆ ಕೇಂದ್ರ ಸರಕಾರ ನಿಗದಿಪಡಿಸಿದ ದಾಖಲೆಗಳನ್ನು ನೀಡಿ ಶುಲ್ಕ ಪಾವತಿ ಮಾಡಿದರೆ ಸಂಬಂಧಿತ ನೋಂದಣಿ ಪ್ರಾಧಿಕಾರವು ವಾಹನದ ಮಾಲಿಕನಿಗೆ ನೋಂದಣಿ ಸರ್ಟಿಫಿಕೇಟು ನೀಡುತ್ತದೆ. ಇದರಲ್ಲಿ ಕೇಂದ್ರ ಸರಕಾರ ನಿಗದಿಪಡಿಸಿದಂತೆ, ಅದು ಯಾವ ರೀತಿಯ

ವಾಹನ, ಆ ವಾಹನದ ರಚನೆ, ಉಪಯೋಗ ಇತ್ಯಾದಿ ವಾಹನದ ವಿವರಗಳನ್ನು ಬರೆಯಲಾಗುತ್ತದೆ. ಕೇಂದ್ರ ಸರಕಾರದ ಸೂಚನೆಯಂತೆ ಅಕ್ಷರ ಮತ್ತು ನೋಂದಣಿ ಕ್ರಮಸಂಖ್ಯೆಗಳನ್ನೊಳಗೊಂಡ ಫಲಕವನ್ನು ಮೋಟಾರು ವಾಹನದ ಮುಂದುಗಡೆ ಮತ್ತು ಹಿಂದುಗಡೆ ಪ್ರದರ್ಶಿಸಲು ತಿಳಿಸಲಾಗುತ್ತದೆ.

## ವಾಸ್ತವ್ಯ ಮತ್ತು ವ್ಯಾಪಾರದ ಸ್ಥಳದ ಬದಲಾವಣೆ

ಮೋಟಾರು ವಾಹನದ ಮಾಲೀಕನ ವಾಸ್ತವ್ಯ ಅಥವಾ ವ್ಯಾಪಾರದ ಸ್ಥಳದ ವಿಳಾಸದ ಬದಲಾವಣೆಯಾದಾಗ ನೋಂದಣಿ ಸರ್ಟಿಫಿಕೇಟಿನಲ್ಲಿ ಈ ಬದಲಾವಣೆಯನ್ನು ನಮೂದಿಸಲು, 30 ದಿನಗಳೊಳಗೆ ಮೂಲ ನೋಂದಣಿ ಸರ್ಟಿಫಿಕೇಟನ್ನು ಅಗತ್ಯವಿರುವ ದಾಖಲೆಗಳ ಜೊತೆಗೆ ಕೇಂದ್ರ ಸರಕಾರ ನಿಗದಿಪಡಿಸಿದ ಸಂಬಂಧಿತ ನೋಂದಣಿ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು. ತಪ್ಪಿದಲ್ಲಿ ನೋಂದಣಿ ಪ್ರಾಧಿಕಾರ ರೂ.100/- ಜುಲ್ಮಾನೆ ವಿಧಿಸಬಹುದು.

## ಮೋಟಾರು ವಾಹನದ ಮಾಲಕತ್ವದ ವರ್ಗಾವಣೆ

1. ಮೋಟಾರು ವಾಹನ ಒಂದೇ ರಾಜ್ಯದಲ್ಲಿ ನೋಂದಣಿಯಾಗಿದ್ದರೆ ವರ್ಗಾವಣೆ ಮಾಡಿದ 14 ದಿನಗಳ ಒಳಗೆ ಕೇಂದ್ರ ಸರಕಾರ ಸೂಚಿಸಿದ ದಾಖಲೆಗಳೊಂದಿಗೆ ನೋಂದಣಿ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. ಅಂತೆಯೇ ಅದರ ಒಂದು ಪ್ರತಿಯನ್ನು ವಾಹನ ವರ್ಗಾವಣೆ ಮಾಡಿದವರಿಗೆ ಕಳುಹಿಸುವುದು.

2. ವಾಹನವು ಬೇರೆ ರಾಜ್ಯದಲ್ಲಿ ನೋಂದಣಿ ಆಗಿದ್ದಲ್ಲಿ 45 ದಿನಗಳ ಒಳಗೆ

   ಅ) ಏನೂ ಆಕ್ಷೇಪ ಇಲ್ಲ ಎಂಬ ಸರ್ಟಿಫಿಕೇಟು,

   ಆ) ಆಕ್ಷೇಪ ಇಲ್ಲ ಎಂಬ ಸರ್ಟಿಫಿಕೇಟು ಇಲ್ಲದ ಪಕ್ಷದಲ್ಲಿ ವಾಹನ ಖರೀದಿಸಿದವನು ಅವನ ಅರ್ಜಿಯನ್ನು ನೋಂದಣಿ ಮಾಡಲು ಕಳುಹಿಸಿದಲ್ಲಿ, ಆ ಅರ್ಜಿಯ ಪೋಸ್ಟ್ ಒಪ್ಪಿಗೆಯ ನಮೂನೆ ಮತ್ತು ನೋಂದಣಿ ಮಾಡಲು ನಿರಾಕರಿಸಿದ ಯಾವುದೇ ಮಾಹಿತಿ ಸಿಕ್ಕಿಲ್ಲ ಎಂಬ ಘೋಷಣೆ ಪತ್ರ ಬರೆದು ನೋಂದಣಿ ಸರ್ಟಿಫಿಕೇಟು ವರ್ಗಾವಣೆಗೆ ಕೋರಿಕೆ ಸಲ್ಲಿಸುವುದು.

   ಇ) ವಾಹನದ ಮಾಲೀಕನು ಮೃತಪಟ್ಟರೆ ಅಥವಾ ವಾಹನವನ್ನು ಸಾರ್ವಜನಿಕ ಏಲಂನಲ್ಲಿ ಖರೀದಿಸಿದರೆ ಆ ವಾಹನದ ವಾರೀಸುದಾರ ಅಥವಾ ವಾಹನ ಖರೀದಿಸಿದವರು ನಿಗದಿತ ನಮೂನೆಯಲ್ಲಿ ನಿಗದಿತ ಅವಧಿಯೊಳಗೆ ಅರ್ಜಿಯನ್ನು ಶುಲ್ಕದೊಂದಿಗೆ ನೋಂದಣಿ ಸರ್ಟಿಫಿಕೇಟು ವರ್ಗಾವಣೆಗೆ ಕೋರಿಕೆ ಸಲ್ಲಿಸುವುದು.

## ಟ್ರಾನ್ಸ್‌ಪೋರ್ಟ್ ವಾಹನಗಳ ಯೋಗ್ಯತೆ/ಸೂಕ್ತತೆ ಸರ್ಟಿಫಿಕೇಟು

ಕೇಂದ್ರ ಸರಕಾರ ತಿಳಿಯಪಡಿಸಿದ ವಿವರಗಳೊಂದಿಗೆ ಅಧಿಕೃತ ತಪಾಸಣಾ ಕೇಂದ್ರದಲ್ಲಿ ಮೋಟಾರು ವಾಹನದ ತಪಾಸಣೆ ನಡೆಸಿ ಮೋಟಾರು ವಾಹನ ಕಾಯಿದೆಯ ಅಗತ್ಯತೆಗಳನ್ನು ತಪಾಸಣೆ ನಡೆಸಿದ ವಾಹನ ಪೂರೈಸುತ್ತದೆ ಎಂಬುದಾದರೆ ಸೂಕ್ತ ನೋಂದಣಿ ಅಧಿಕಾರಿಯು ವಾಹನಗಳ ಯೋಗ್ಯತೆ/ಸೂಕ್ತತೆ ಸರ್ಟಿಫಿಕೇಟು ನೀಡುತ್ತಾರೆ. ವಾಹನ ಯೋಗ್ಯತೆ/ಸೂಕ್ತತೆ ಪೂರೈಸುವುದಿಲ್ಲ ಎಂಬ ಕಾರಣಕ್ಕೆ ಸರ್ಟಿಫಿಕೇಟು ನೀಡಲು ನಿರಾಕರಿಸಿದಲ್ಲಿ ಆ ವಾಹನಕ್ಕೆ ನೀಡಿರುವ ಪರ್ಮಿಟ್ ಅಮಾನತುಗೊಳ್ಳುತ್ತದೆ. ವಾಹನಕ್ಕೆ ನೀಡಿರುವ ಯೋಗ್ಯತೆ/ಸೂಕ್ತತೆ ಸರ್ಟಿಫಿಕೇಟು ಇಡೀ ಭಾರತ ದೇಶದಲ್ಲಿ ಪರಿಣಾಮಕಾರಿಯಾಗಿ ಕಾನೂನು ಮಾನ್ಯತೆ ಹೊಂದಿರುತ್ತದೆ.

## ವಾಹನಗಳಿಗೆ ಇನ್ಸೂರೆನ್ಸ್ (ವಿಮೆ)

ಯಾವುದೇ ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಉಪಯೋಗಿಸಬೇಕಾದಲ್ಲಿ ಆ ವಾಹನಕ್ಕೆ ಕಡ್ಡಾಯವಾಗಿ ವಿಮೆ ಮಾಡಿಸತಕ್ಕದ್ದು. ವಾಹನದ ವಿಮಾ ಪಾಲಿಸಿಗಳಲ್ಲಿ ಥರ್ಡ್ ಪಾರ್ಟಿ ಮತ್ತು ಫಸ್ಟ್ ಪಾರ್ಟಿ (ಕಾಂಪ್ರಹೆನ್ಸಿವ್ ವಿಮೆ) ಎಂಬ 2 ರೀತಿಯ ವಿಮಾ ಪಾಲಿಸಿಗಳು ಇರುತ್ತವೆ.

ವಾಹನಗಳಿಗೆ ವಿಮೆ ಮಾಡುವ ಇನ್ಸೂರೆನ್ಸ್ ಕಂಪೆನಿಯು ಆ ವಾಹನದ ಮಾಲೀಕನ ಜವಾಬ್ದಾರಿಯನ್ನು ತಾನು ವಹಿಸುತ್ತದೆ ಅಂದರೆ ವಿಮೆ ಮಾಡಿದ ವಾಹನವು ಅಪಘಾತಕ್ಕೆ ಒಳಗಾದಲ್ಲಿ ಅದರಿಂದ ಉದ್ಭವಿಸುವ ಎಲ್ಲಾ ನಷ್ಟಗಳನ್ನು ಮಾಲಕನ ಪರವಾಗಿ ತಾನೇ ಭರಿಸುತ್ತೇನೆ ಎಂಬ ಜವಾಬ್ದಾರಿಯನ್ನು ವಿಮಾ ಕಂಪೆನಿಯು ವಿಮಾ ಪಾಲಿಸಿಯಲ್ಲಿ ಲಿಖಿತವಾಗಿ ಆಶ್ವಾಸನೆ ನೀಡುತ್ತದೆ.

## ಥರ್ಡ್ ಪಾರ್ಟಿ ಇನ್ಸೂರೆನ್ಸ್ (ವಿಮೆ) ಎಂದರೇನು?

ವಾಹನಗಳಿಗೆ ಥರ್ಡ್ ಪಾರ್ಟಿ ಇನ್ಸೂರೆನ್ಸ್ (ವಿಮೆ) ಮಾಡುವುದು ಎಂದರೆ ವಾಹನದ ಮಾಲೀಕ, ಚಾಲಕ ಮತ್ತು ಅವರ ವಾಹನ ಹೊರತುಪಡಿಸಿ, ಈ ವಾಹನ ಉಪಯೋಗ ಮಾಡುವ ಸಂದರ್ಭದಲ್ಲಿ ಆಗುವ ಯಾವುದೇ ಅಪಘಾತದಲ್ಲಿ ಮೂರನೇ ವ್ಯಕ್ತಿಯ ಆಸ್ತಿಗೆ ಅಥವಾ ಜೀವಕ್ಕೆ ಹಾನಿ/ನಷ್ಟ ಉಂಟಾದರೆ ಆ ವ್ಯಕ್ತಿಗೆ ವಿಮಾ ಪರಿಹಾರ ಲಭಿಸುತ್ತದೆ. ವಾಹನದ ಚಾಲಕನು ತನ್ನ ತಪ್ಪಿನಿಂದ ಅಪಘಾತವುಂಟು ಮಾಡಿದಲ್ಲಿ ಅವನ ಗಾಯಗಳ ಚಿಕಿತ್ಸಾ ವೆಚ್ಚ ಮತ್ತು ವಾಹನದ ರಿಪೇರಿ ವೆಚ್ಚವನ್ನು ಅವನೇ ಭರಿಸಬೇಕು. ಮೂರನೇ ವ್ಯಕ್ತಿ ರಸ್ತೆಯಲ್ಲಿ ನಡೆದುಕೊಂಡು

ಹೋಗುವಾಗ ಇಂತಹ ವಾಹನ ಡಿಕ್ಕಿಯಾಗಿ ಅಪಘಾತವುಟಾದರೆ, ಆ ವ್ಯಕ್ತಿಗೆ ಆಗುವ ಗಾಯಗಳ ಚಿಕಿತ್ಸಾ ವೆಚ್ಚ ಭರಿಸಲು ವಿಮಾ ಕಂಪೆನಿ ಬದ್ಧವಾಗಿರುತ್ತದೆ. ಇಂತಹ ವಿಮಾ ಪಾಲಿಸಿಗಳಲ್ಲಿ 'ಲಿಮಿಟೆಡ್ ಲಯಾಬಿಲಿಟಿ' ಎಂದು ನಮೂದಿಸಿದ್ದರೆ ನಿರ್ದಿಷ್ಟ ಮೊತ್ತಕ್ಕೆ ಮಾತ್ರ ವಿಮಾ ಕಂಪೆನಿಯು ಜವಾಬ್ದಾರಿ ವಹಿಸುತ್ತದೆ.

ಉದಾ: 'ಲಿಮಿಟೆಡ್ ಲಯಾಬಿಲಿಟಿ'ಯು ಎರಡು ಲಕ್ಷಗಳಿಗೆ ಸೀಮಿತವಾಗಿದ್ದು ಆ ವಾಹನದ ಅಪಘಾತದಲ್ಲಿ ಯಾವುದೇ ವ್ಯಕ್ತಿ ಮೃತಪಟ್ಟು ನ್ಯಾಯಾಲಯವು ಆ ವ್ಯಕ್ತಿಯ ವಾರಿಸುದಾರರಿಗೆ 5 ಲಕ್ಷ ರೂಪಾಯಿ ಪರಿಹಾರ ಕೊಡಬೇಕೆಂದು ಆದೇಶಿಸಿದಲ್ಲಿ, ವಿಮಾ ಕಂಪೆನಿಯು 2 ಲಕ್ಷ ರೂಪಾಯಿ ಮಾತ್ರ ಪರಿಹಾರ ಕೊಡಲು ಜವಾಬ್ದಾರಿಯುತವಾಗಿದೆ. ಉಳಿದ 3 ಲಕ್ಷ ರೂಪಾಯಿ ಪರಿಹಾರವನ್ನು ವಾಹನದ ಮಾಲೀಕನು ಕೊಡಲು ಬದ್ಧನಾಗಿದ್ದಾನೆ.

ಆದುದರಿಂದ ವಾಹನಗಳ ಮಾಲೀಕರು ತಮ್ಮ ವಾಹನಗಳಿಗೆ ಫಸ್ಟ್ ಪಾರ್ಟಿ (ಕಾಂಪ್ರಹೆನ್ಸಿವ್) ವಿಮೆ ಪಾಲಿಸಿ ಮಾಡುವುದೇ ಸೂಕ್ತವಾಗಿದೆ. ಸ್ವಲ್ಪ ಹಣದ ಉಳಿತಾಯ ಮಾಡಲು ಪ್ರಯತ್ನಿಸಿ ಕೆಲವು ಲಕ್ಷ ಹಣ ಕಳೆದುಕೊಳ್ಳುವುದನ್ನು ತಪ್ಪಿಸಬಹುದು.

## ಫಸ್ಟ್ ಪಾರ್ಟಿ (ಕಾಂಪ್ರಿಹೆನ್ಸಿವ್) ವಿಮೆ ಪಾಲಿಸಿ ಅಂದರೇನು?

ಇಂತಹ ವಿಮಾ ಪಾಲಿಸಿಗಳಲ್ಲಿ ಇನ್ಸೂರೆನ್ಸ್ ಕಂಪೆನಿ ಎಲ್ಲಾ ರೀತಿಯ ಜವಾಬ್ದಾರಿಯನ್ನು ವಹಿಸುತ್ತದೆ. ಇಂತಹ ವಿಮಾ ಪಾಲಿಸಿ ಮಾಡಿರುವ ವಾಹನದ ಮಾಲೀಕ ವಾಹನ ಅಪಘಾತಕ್ಕೊಳಗಾಗುವಾಗ, ವಾಹನ ಕಳೆದು ಹೋದರೆ ಅಥವಾ ವಾಹನದ ಚಾಲಕನ ತಪ್ಪಿನಿಂದಲೇ ಅಪಘಾತ ಆಗಿದ್ದರೂ ವಿಮಾ ಕಂಪೆನಿ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಈ ರೀತಿಯ ವಿಮೆ ಮಾಡಿಸುವ 2 ಚಕ್ರದ ವಾಹನಗಳಿಗೆ ವರ್ಷಕ್ಕೆ ಸುಮಾರು ರು.2,000/– ಗಳಿಂದ ರು.4,000/– ಅಂತೆಯೇ 4 ಚಕ್ರದ ಕಾರು ಮತ್ತು ಇತರ ವಾಹನಗಳಿಗೆ ವರ್ಷಕ್ಕೆ ರು.20,000/– ಗಳಿಂದ ರು.40,000/–ಪ್ರಿಮಿಯಂ ಹಣ ವಿಮಾ ಕಂಪೆನಿಗೆ ಪಾವತಿ ಮಾಡಬೇಕಾಗುತ್ತದೆ.

ಎರಡು ಚಕ್ರದ ವಾಹನದ ಮಾಲೀಕನು ಅವನ ಸ್ವಂತ ವಾಹನ ಚಲಾಯಿಸುವಾಗ ಅವನ ತಪ್ಪಿನಿಂದಲೇ ಆದ ಅಪಘಾತದಲ್ಲಿ ಮೃತಪಟ್ಟರೆ ಒಂದು ಲಕ್ಷ ರೂಪಾಯಿ ಪರಿಹಾರ ಲಭಿಸುತ್ತದೆ. ಇದೇ ವಾಹನ ಸಾರ್ವಜನಿಕ ರಸ್ತೆಯಲ್ಲಿ ನಡೆದುಕೊಂಡು ಹೋಗುವ ಪಾದಾಚಾರಿಗೆ ಡಿಕ್ಕಿ ಹೊಡೆದರೆ ಅಂತಹ ಗಾಯಾಳುವಿಗೆ ಆಸ್ಪತ್ರೆ

ಮತ್ತು ಇತರ ಖರ್ಚು ವೆಚ್ಚಗಳ ಪರಿಹಾರ ಲಭಿಸುತ್ತದೆ. ಇಲ್ಲಿ ಪ್ರಮುಖ ವಿಷಯವೆಂದರೆ, ವಾಹನ ಚಲಾಯಿಸುವ ಚಾಲಕನಿಗೆ ಈ ಸಂದರ್ಭದಲ್ಲಿ ಚಾಲನಾ ಪರವಾನಿಗೆ ಇರತಕ್ಕದ್ದು. ಲರ್ನಿಂಗ್ ಲೈಸನ್ಸ್ ಇರುವ ವ್ಯಕ್ತಿ 2 ಚಕ್ರದ ವಾಹನ ಚಲಾಯಿಸುವಾಗ ಅಪಘಾತ ಆದಲ್ಲಿ ಆ ವಾಹನದ ಹಿಂಬದಿ ಸವಾರನಾಗಿ ಶಾಶ್ವತ ಚಾಲನಾ ಪರವಾನಿಗೆ ಇರುವ ವ್ಯಕ್ತಿ ಪ್ರಯಾಣಿಸತಕ್ಕದ್ದು. ಹೀಗೆ ಮಾಡಲು ತಪ್ಪಿದಲ್ಲಿ ಅಪಘಾತದ ಗಾಯಾಳುವಿಗೆ ಪರಿಹಾರ ನೀಡಲು ವಿಮಾ ಕಂಪೆನಿ ಬಾಧ್ಯಸ್ಥವಲ್ಲ.

ಖಾಸಗಿ ಕಾರು ಮತ್ತು ಜೀಪುಗಳಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರಿಗಾಗಲಿ, ಚಾಲಕ/ಮಾಲಕರಿಗಾಗಲಿ ಪ್ರಸ್ತುತ ಕಾನೂನು ಪ್ರಕಾರ ಪರಿಹಾರ ಲಭಿಸುವುದಿಲ್ಲ. ಆದರೆ, ವಾಹನ ಚಲಾಯಿಸುವ ಚಾಲಕನೇ ಮಾಲಕನಾಗಿದ್ದಲ್ಲಿ, ಹೆಚ್ಚಿನ ಪ್ರೀಮಿಯಮ್ಮನ್ನು ಪಾವತಿಸಿ ವೈಯುಕ್ತಿಕ ವಿಮಾ ಪರಿಹಾರವನ್ನು ಪಡೆಯಲು ಅವಕಾಶವಿದೆ. ವಿವಿದ ಉಚ್ಚ ನ್ಯಾಯಾಲಯಗಳು ನೀಡಿರುವ ಆದೇಶಗಳ ಪ್ರಕಾರ ಹೇಳುವುದಾದಲ್ಲಿ ಖಾಸಗಿ ಕಾರುಗಳಿಗೆ ಫಸ್ಟ್ ಪಾರ್ಟಿ (ಕಾಂಪ್ರಹೆನ್ಸಿವ್) ವಿಮಾ ಪಾಲಿಸಿ ಮಾಡುವಾಗ ಕಡ್ಡಾಯವಾಗಿ ಆ ವಾಹನದ ಮಾಲೀಕನಿಗೆ/ಚಾಲಕನಿಗೆ ಮತ್ತು ಕಾರಿನ ಒಳಗಡೆ ಆಸೀನರಾಗುವ 3–4 ಜನರಿಗೆ ಹೆಚ್ಚಿನ ಪ್ರಿಮಿಯಂ ಹಣ ಪಾವತಿಸಿ ವಿಮಾ ಪಾಲಿಸಿ ಮಾಡಿಸಿದಲ್ಲಿ ಮಾತ್ರ ಅವರಿಗೆ ಅಪಘಾತದ ಸಮಯದಲ್ಲಿ ಪರಿಹಾರ ಲಭಿಸುತ್ತದೆ.

ಉದಾ: ಮಾಲೀಕನಿಗೆ/ಚಾಲಕನಿಗೆ 2 ಲಕ್ಷ ರೂಪಾಯಿ ಪರಿಹಾರ ಲಭಿಸುತ್ತದೆ. ಆದರೆ ಇಂತಹ ವಾಹನಗಳು ಬೇರೆ ವಾಹನಗಳಿಗೆ ಡಿಕ್ಕಿ ಆಗಿ ಅಪಘಾತವಾದ ಸಂದರ್ಭದಲ್ಲಿ ನ್ಯಾಯಾಲಯವು, ಕಾರಿನ ಚಾಲಕ ತಪ್ಪು ಮಾಡಿಲ್ಲ ಬೇರೆ ವಾಹನದ ತಪ್ಪಿನಿಂದ ಅಪಘಾತ ಆಗಿದೆ ಎಂದು ನಿರ್ಧರಿಸಿದರೆ ಆ ಕಾರಿನ ಮಾಲೀಕನಿಗೆ/ ಚಾಲಕನಿಗೆ ಮತ್ತು ಒಳಗಡೆ ಆಸೀನರಗಿದ್ದ 4 ಪ್ರಯಾಣಿಕರಿಗೂ ಕಾನೂನು ರೀತ್ಯಾ ಸಿಗಬೇಕಾದ ಪರಿಹಾರ ಲಬಿಸುತ್ತದೆ.

ಆದರೆ ಟ್ರಾನ್ಸ್‌ಪೋರ್ಟ್/ಟೂರಿಸ್ಟ್ ಟ್ಯಾಕ್ಸಿಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೆ ಆ ವಾಹನ ಅಪಘಾತಕ್ಕೀಡಾದಲ್ಲಿ ಪರಿಹಾರ ಲಭಿಸುತ್ತದೆ ಏಕೆಂದರೆ ಈ ಟ್ಯಾಕ್ಸಿಗಳು ಸೂಚಿತ ಉದ್ದೇಶಕ್ಕಾಗಿ ಅಂದರೆ ಸಾರ್ವಜನಿಕ ಉಪಯೋಗಕ್ಕಾಗಿ ಪರ್ಮಿಟ್ ಪಡೆದುಕೊಂಡು ಚಲಿಸುತ್ತವೆ. ಇಂತಹ ವಾಹನಗಳಿಗೆ ವಿಮೆ ಪಾವತಿಯ ಹಣ ಖಾಸಗಿ ಕಾರುಗಳಿಗಿಂತ ಹೆಚ್ಚು ಇರುತ್ತದೆ.

ಲಾರಿ ಮಾಲಕರು ಫಸ್ಟ್ ಪಾರ್ಟಿ (ಕಾಂಪ್ರಹೆನ್ಸಿವ್) ವಿಮಾ ಪಾಲಿಸಿ ತೆಗೆದುಕೊಂಡಿದ್ದರೂ ಆ ಲಾರಿಯ ಕೇಬಿನ್ ಒಳಗಡೆ ಆಸೀನರಾಗಿ ಪ್ರಯಾಣಿಸಿದ ಎಲ್ಲಾ ಪ್ರಯಾಣಿಕರಿಗೆ ಅಪಘಾತದ ಸಂಧರ್ಭದಲ್ಲಿ ಪರಿಹಾರ ಲಭಿಸುವುದಿಲ್ಲ. ಲಾರಿಯ ಡ್ರೈವರ್, ಕಂಡಕ್ಟರ್ ಕಂ ಕ್ಲೀನರ್ ಹೊರತುಪಡಿಸಿ ಇತರ ಯಾವುದೇ ಪ್ರಯಾಣಿಕರಿಗೆ ಅಪಘಾತದ ಪರಿಹಾರ ಲಭಿಸುವುದಿಲ್ಲ. ಆದರೆ, ಆ ಪ್ರಯಾಣಿಕರು ಅವರಿಗೆ ಸಂಬಂಧಿಸಿದ ಸರಕುಗಳನ್ನು ಅದೇ ವಾಹನದಲ್ಲಿ ಸಾಗಾಟ/ಸಾಗಣೆ ಮಾಡುತ್ತಿದ್ದು ಕೇಬಿನ್‌ನಲ್ಲಿ ಕುಳಿತು ಪ್ರಯಾಣಿಸುವಾಗ ಈ ಅಪಘಾತ ಆದಲ್ಲಿ ಅಂತಹ ಪ್ರಯಾಣಿಕರಿಗೆ ಇನ್ಶೂರೆನ್ಸ್ ಕಂಪೆನಿ ವಿಮಾ ಪರಿಹಾರ ಕೊಡಲು ಬದ್ಧವಾಗಿರುತ್ತದೆ.

ವಾಹನಕ್ಕೆ ಇನ್ಶೂರೆನ್ಸ್ ಪಾಲಿಸಿ ಇದ್ದರೂ, ಡ್ರೈವಿಂಗ್ ಲೈಸನ್ಸ್ ಇಲ್ಲದವರು ಡ್ರೈವಿಂಗ್ ಮಾಡುವಾಗ ವಾಹನ ಅಪಘಾತಕ್ಕೆ ಒಳಗಾದರೆ, ಆ ವಾಹನದ ಮಾಲೀಕರೇ ಗಾಯಾಳುಗಳಿಗೆ ಅಥವಾ ಅಪಘಾತದಲ್ಲಿ ಮೃತಪಟ್ಟವರ ವಾರೀಸುದಾರರಿಗೆ ಪರಿಹಾರ ಕೊಡಲು ಜವಾಬ್ದಾರರಾಗಿದ್ದಾರೆ. ಲೈಸನ್ಸ್ ಇಲ್ಲದೆ ವಾಹನ ಚಲಾಯಿಸಿ ಅಪಘಾತವಾದ ಸಂಧರ್ಭದಲ್ಲಿ ತಮ್ಮ ಆಸ್ತಿಯನ್ನು ಮಾರಿ ಬಂದ ಹಣದಿಂದ ಪರಿಹಾರ ನೀಡಿ ವಾಹನದ ಮಾಲೀಕರು ದಿವಾಳಿಯಾದ ತುಂಬಾ ಉದಾಹರಣೆಗಳಿವೆ. ಏಕೆಂದರೆ ಅಪಘಾತಕ್ಕೀಡಾದ ವಾಹನ ಮಾರಿ ಬಂದ ಹಣದಿಂದಲೂ ನ್ಯಾಯಾಲಯ ಆದೇಶಿಸಿದ ಪರಿಹಾರದ ಹಣ ಸಂದಾಯ ಆಗದಿದ್ದಲ್ಲಿ ಅಂತಹ ಮಾಲಕ ತನ್ನ ಖಾಸಗಿ ಅಸ್ತಿಯನ್ನಾದರೂ ಮಾರಿ ಪರಿಹಾರ ನೀಡಲು ಬಾಧ್ಯರು.

ಆದುದರಿಂದ ವಾಹನದ ಮಾಲಕರು ಲೈಸನ್ಸ್ ಇದ್ದ ವ್ಯಕ್ತಿಯನ್ನು ಮಾತ್ರ ವಾಹನ ಚಲಾಯಿಸಲು ನಿಯುಕ್ತಿಗೊಳಿಸಬೇಕು. ದ್ವಿಚಕ್ರ ವಾಹನದಲ್ಲಿ ಲರ್ನಿಂಗ್ ಲೈಸನ್ಸ್ ಇದ್ದವರ ಹಿಂಬದಿಯಲ್ಲಿ ಖಾಯಂ ಲೈಸನ್ಸ್ ಇದ್ದವರು ಸಹ ಪ್ರಯಾಣಿಕರಾಗಿರಬೇಕು. ದ್ವಿಚಕ್ರ ವಾಹನಗಳಿಗೆ ಅದರ ಮಾಲಕರು ತಪ್ಪಿಯೂ ಥರ್ಡ್ ಪಾರ್ಟಿ ವಿಮೆ ಮಾಡಿಸಕೂಡದು. ಅದರ ಬದಲು ಫಸ್ಟ್ ಪಾರ್ಟಿ (ಕಾಂಪ್ರಹೆನ್ಸಿವ್) ವಿಮಾ ಪಾಲಿಸಿ ಮಾಡಿಸತಕ್ಕದ್ದು. ಏಕೆಂದರೆ ದ್ವಿಚಕ್ರ ವಾಹನದ ಹಿಂಬದಿ ಸವಾರರಿಗೆ ಅಪಘಾತದಿಂದಾದ ಗಾಯಗಳಿಗೆ ಪರಿಹಾರ ಸಿಗಬೇಕಾದರೆ ಫಸ್ಟ್ ಪಾರ್ಟಿ (ಕಾಂಪ್ರಿಹೆನ್ಸಿವ್) ವಿಮಾ ಪಾಲಿಸಿ ಇದ್ದರೆ ಮಾತ್ರ ಪರಿಹಾರ ಲಭಿಸುತ್ತದೆ. ಅಂತೆಯೇ ಖಾಸಗಿ ಕಾರು, ಜೀಪು ಮಾಲಕರು ತಮ್ಮ ವಾಹನಗಳಲ್ಲಿ ಪ್ರಯಾಣಿಸಲು ಅನುಮತಿ ಇರುವಷ್ಟು ಜನರಿಗೆ ಪ್ರತ್ಯೇಕ ಹಣ ಪಾವತಿಸಿ ಫಸ್ಟ್ ಪಾರ್ಟಿ ವಿಮೆ

ಮಾಡಿಸತಕ್ಕದ್ದು. ಕಮಿಷನ್ ಆಸೆಗೆ ಏಜಂಟ್‌ಗಳು ಹೇಳುವ ಮಾತುಗಳಿಗೆ ನಾವು ಕಿವಿ ಕೊಡದೆ ನಮ್ಮ ಮತ್ತು ನಮ್ಮ ಕುಟುಂಬದವರ ಸುರಕ್ಷೆಯನ್ನು ನಾವೇ ಮಾಡಬೇಕು. ವಿಮಾ ಪಾಲಿಸಿ ನಮ್ಮ ಕೈ ಸೇರಿದ ತಕ್ಷಣ ಅದನ್ನು ಪರಿಶೀಲಿಸಿ ನಾವು ನಿರ್ದೇಶ ನೀಡಿದಂತೆ ನಮ್ಮ ವಾಹನಕ್ಕೆ ವಿಮೆ ಮಾಡಿದ್ದಾರೋ ಎಂದು ಮನವರಿಕೆ ಮಾಡುವುದು ನಮ್ಮ ಕರ್ತವ್ಯ.

ಇತ್ತೀಚೆಗೆ ಹಲವು ಖಾಸಗಿ ವಿಮಾ ಕಂಪೆನಿಗಳು ಭಾರತದಲ್ಲಿ ಕಾರ್ಯಪ್ರವೃತ್ತವಾಗಿವೆ. ಈ ಕಂಪೆನಿಗಳ ಪ್ರಮುಖ ಧ್ಯೇಯ-ಉದ್ದೇಶ ಲಾಭ ಮಾಡುವುದು ಆಗಿರುತ್ತದೆ. ಕೆಲವು ಕಂಪೆನಿಗಳು ತಮ್ಮ ವಾಹನದ ತಪ್ಪಿನಿಂದಲೇ ಅಪಘಾತವಾಗಿದ್ದರೂ ಮತ್ತು ಅದರ ಚಾಲಕನು ನ್ಯಾಯಾಲಯದಲ್ಲಿ ತನ್ನ ತಪ್ಪನ್ನು ಒಪ್ಪಿದ್ದರೂ, ಗಾಯಾಳು ಪರಿಹಾರಕ್ಕೆ ಅರ್ಜಿ ಸಲ್ಲಿಸಿದಾಗ ಅನಗತ್ಯ ವರದಿಗಳನ್ನು ತಯಾರಿಸಿ ಅವುಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸುವುದರಿಂದ ಗಾಯಾಳು ಅಥವಾ ಮೃತರ ಹೆಂಡತಿ ಮಕ್ಕಳು ತಮಗೆ ನ್ಯಾಯವಾಗಿ ಸಿಗಬೇಕಾದ ಪರಿಹಾರ ದೊರಕಿಸಿಕೊಳ್ಳಲು ಹರಸಾಹಸ ಪಡಬೇಕಾಗುತ್ತದೆ.

## ವಾಹನ ಅಪಘಾತಕ್ಕೆ ಒಳಗಾದಾಗ ಏನು ಮಾಡಬಹುದು?

ದ್ವಿಚಕ್ರ, ಕಾರು, ಲಾರಿ, ಬಸ್ಸು ಯಾವುದೇ ವಾಹನವಾಗಿರಲಿ ಅದರ ಮಾಲಕನ ಅಥವಾ ಚಾಲಕನ ಅಜಾಗರೂಕತೆಯಿಂದ ಅಪಘಾತವಾಗಿದ್ದು ಮೂರನೇ ವ್ಯಕ್ತಿಗೆ ಗಾಯಗಳಾಗಿದ್ದಲ್ಲಿ ಸದರಿ ವಾಹನದ ಚಾಲಕನಿಗೆ ಆ ವಾಹನದ ಚಲಾವಣೆಗೆ ಸಿಂಧುವಾದ ಖಾಯಂ ಚಾಲನಾ ಪರವಾನಿಗೆಯಿದ್ದು ಫಸ್ಟ್ ಪಾರ್ಟಿ (ಕಾಂಪ್ರೆಹೆನ್ಸಿವ್) ವಿಮಾ ಪಾಲಿಸಿ ಇದ್ದರೆ ಮಾಲಕರು ಯಾವುದೇ ಚಿಂತೆ ಮಾಡುವ ಅಥವಾ ಹೆದರುವ ಅವಶ್ಯಕತೆ ಇಲ್ಲ. ಹೆಚ್ಚಿನ ವಾಹನಗಳ ಚಾಲಕರು/ಮಾಲಕರು ಅಫಘಾತವಾದ ಕೂಡಲೇ ಹೆದರುತ್ತಾರೆ. ಅವರ ವಾಹನವನ್ನು ರಸ್ತೆಯ ಮಧ್ಯದಲ್ಲಿಯೇ ಬಿಟ್ಟು ವಾಹನ ಸಂಚಾರಕ್ಕೆ ಅಡಚಣೆಯುಂಟು ಮಾಡುತ್ತಾರೆ. ಅಪಘಾತದಲ್ಲಿ ಯಾರೂ ಮೃತಪಟ್ಟಿರುವುದಿಲ್ಲವಾದಲ್ಲಿ ನಾವು ಹೆದರುವ ಅವಶ್ಯಕತೆಯೇ ಇಲ್ಲ. ಇಂತಹ ಸನ್ನಿವೇಶದಲ್ಲಿ ನಾವು ಮಾಡಬೇಕಾದ ಕೆಲಸಗಳು –

1. ಅಪಘಾತ ಆದ ಕೂಡಲೇ ನಮ್ಮ ವಾಹನವನ್ನು ಮಾರ್ಗದ ಬದಿಯಲ್ಲಿ ನಿಲ್ಲಿಸಿ ವಾಹನ ಸಂಚಾರ ಸುಸೂತ್ರವಾಗಿ ನಡೆಯುವಂತೆ ಸಹಕರಿಸಬೇಕು.

2. ಅಪಘಾತದಲ್ಲಿ ಗಾಯಗೊಂಡ ಗಾಯಾಳುವನ್ನು ಒಂದೋ ನಮ್ಮದ್ದೇ ವಾಹನದಲ್ಲಿ ಅಥವಾ ಬೇರೆ ವಾಹನದಲ್ಲಿ ಹತ್ತಿರದ ಆಸ್ಪತ್ರೆಗೆ ಸಾಗಿಸಿ ಗಾಯಾಳುವಿನ ಜೀವ ರಕ್ಷಣೆಗೆ ಆದ್ಯತೆ ನೀಡಬೇಕು.

3. ಗಾಯಾಳುವಿಗೆ ತೀವ್ರತರದ ಗಾಯಗಳಾಗಿದ್ದಲ್ಲಿ ಆಸ್ಪತ್ರೆಯಲ್ಲಿ 'ಮೆಡಿಕೊ ಲೀಗಲ್ ಕೇಸ್' ಎಂಬುದಾಗಿ ದಾಖಲಿಸಲು ತಿಳಿಸಬೇಕು. ಹಾಗೆ ಮಾಡಿದಲ್ಲಿ ಆಸ್ಪತ್ರೆಯವರು ನೀಡಿದ ಲಿಖಿತ ಮಾಹಿತಿ ಪ್ರಕಾರ ಪೋಲಿಸರು ಆಸ್ಪತ್ರೆಗೆ ಬಂದು ಗಾಯಾಳುವಿನ ಹೇಳಿಕೆ ಪಡೆಯುತ್ತಾರೆ ಮತ್ತು ಆ ಆಧಾರದಲ್ಲಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸುತ್ತಾರೆ.

4. ಗಾಯಾಳುವಿಗೆ ಸ್ಮೃತಿ ಇರದಿದ್ದಲ್ಲಿ, ಅಪಘಾತ ನೋಡಿದ ಪ್ರತ್ಯಕ್ಷದರ್ಶಿಯ ಫಿರ್ಯಾದಿ ಪಡೆದುಕೊಂಡು ಆ ಆಧಾರದಲ್ಲಿ ಪೋಲಿಸರು ಪ್ರಥಮ ವರ್ತಮಾನ ವರದಿ ತಯಾರಿಸುತ್ತಾರೆ. ಅಂತೆಯೇ ಪೋಲಿಸರು ಅಪಘಾತ ಸ್ಥಳಕ್ಕೆ ಭೇಟಿ ನೀಡಿ ಆ ಸ್ಥಳದ ನಕ್ಷೆ ಮತ್ತು ಮಹಾಜರು ತಯಾರಿಸುತ್ತಾರೆ. ಮಹಾಜರುವಿಗೆ ಸಹಿ ಮಾಡಲು ಅಪಘಾತ ನೋಡಿದ ಯಾರೂ ತಮ್ಮ ಸಹಿ ಹಾಕಬಹುದು.

ಅಪಘಾತ ನೋಡಿದವರು ಮಹಜರುವಿಗೆ ಸಹಿ ಮಾಡದಿದ್ದಲ್ಲಿ ನಿರ್ಲಕ್ಷತನದಿಂದ ವಾಹನ ಚಲಾಯಿಸಿ ಅಪಘಾತಕ್ಕೆ ಕಾರಣರಾದ ಆರೋಪಿಗೆ ನ್ಯಾಯಾಲಯದಲ್ಲಿ ಶಿಕ್ಷೆಯಾಗದೆ ಗಾಯಾಳುವಿಗೆ ಅಥವಾ ಮೃತರ ವಾರೀಸುದಾರರಿಗೆ ಪರಿಹಾರ ಸಿಗದೆ ಅವರು ಅನಾಥರಾಗಲು ನಾವೇ ಕಾರಣರಾಗುತ್ತೇವೆ. ಆದುದರಿಂದ ನಾವೆಲ್ಲರೂ ನಮ್ಮ ಕರ್ತವ್ಯವನ್ನು ಮರೆಯದಿರೋಣ. ಮಹಜರುವಿಗೆ ಸಹಿ ಹಾಕಿದ ವ್ಯಕ್ತಿಗೆ ಅಗತ್ಯವಿದ್ದರೆ ಕೇವಲ ಒಂದು ಬಾರಿ ನ್ಯಾಯಾಲಯಕ್ಕೆ ಹಾಜರಾಗಿ ಅಪಘಾತ ಯಾವ ರೀತಿ ಆಗಿರುತ್ತದೆ ಎಂದು ವಿವರಿಸಲು ಕೇಳಿಕೊಳ್ಳುತ್ತಾರೆ. ಆ ವ್ಯಕ್ತಿ ತಾನು ಏನು ನೋಡಿದ್ದೇನೆ? ಅಪಘಾತವಾಗಲು ಯಾರು ಕಾರಣರು ಈ ವಿಷಯವನ್ನು ನ್ಯಾಯಾಲಯದಲ್ಲಿ ಹೇಳಿದರೆ ಅವರ ಕರ್ತವ್ಯ ಮುಗಿಯುತ್ತದೆ. ಆಗ ಅಪಘಾತಕ್ಕೆ ಬಲಿಯಾದ ದುರಾದೃಷ್ಟ ವ್ಯಕ್ತಿಗೆ ಅಥವಾ ಮೃತರ ವಾರಿಸುದಾರರಿಗೆ ಪರಿಹಾರ ಲಭಿಸುವಲ್ಲಿ ಸಹಾಯ ಮಾಡಿದ ಆತ್ಮ ತೃಪ್ತಿ ನಮಗೆ ಸಿಗುತ್ತದೆ.

ವಾಹನ ಚಲಾಯಿಸುವ ಚಾಲಕನಿಗೆ ಚಾಲನಾ ಪರವಾನಗಿ ಇದ್ದರೆ ಹಾಗೂ ಅದೇ ವೇಳೆ ಸಿಂಧುವಾದ ವಿಮಾ ಪಾಲಿಸಿ ಊರ್ಜಿತದಲ್ಲಿದ್ದರೆ, ಚಾಲಕರು ವಾಹನ ಅಪಘಾತ ಆದರೆ ಅನಾವಶ್ಯಕ ಹೆದರುವ ಅಗತ್ಯವಿಲ್ಲ. ಏಕೆಂದರೆ ನಾವು ನಮ್ಮ ವಾಹನಗಳಿಗೆ ವಿಮಾ ಪಾಲಿಸಿ ಮಾಡಿರುವುದರಿಂದ ಅಪಘಾತದಲ್ಲಿ ಗಾಯಗೊಂಡವರಿಗೆ ಯಾ ಬಲಿಯಾದವರಿಗೆ ಮತ್ತು ಅವರ ಕುಟುಂಬದವರಿಗೆ ನ್ಯಾಯವಾಗಿ ಸಿಗಬೇಕಾದಂತಹ ಆಸ್ಪತ್ರೆ ಖರ್ಚು, ಊನತ್ವದ ಪರಿಹಾರ, ಸಾವನ್ನಪ್ಪಿದ ಕುಟುಂಬಗಳಿಗೆ ಪರಿಹಾರ ಇತ್ಯಾದಿಗಳನ್ನು ನೀಡಲು ವಾಹನ ಮಾಲಕನ ಪರವಾಗಿ ವಿಮಾ ಕಂಪೆನಿಯೇ ಸಂಪೂರ್ಣ ಜವಾಬ್ದಾರಿಯನ್ನು ವಹಿಸುತ್ತದೆ. ಆದುದರಿಂದ

ವಾಹನ ಚಾಲಕರು ಅಪಘಾತಕ್ಕೆ ಬಲಿಯಾದವರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಿ ಅವರ ಜೀವ ರಕ್ಷಣೆಗೆ ಪ್ರಥಮ ಆದ್ಯತೆ ನೀಡಬೇಕು. ಅದೇ ರೀತಿ ಅಪಘಾತದ ವಿಷಯವನ್ನು ಹತ್ತಿರದ ಪೋಲಿಸ್ ಠಾಣೆಗೆ ಲಿಖಿತ ದೂರು ನೀಡುವ ಮೂಲಕ ತಿಳಿಸತಕ್ಕದ್ದು. ಈ ಸಂದರ್ಭದಲ್ಲಿ ಪೋಲಿಸರು ತಮ್ಮ ಕರ್ತವ್ಯ ನಿರ್ವಹಿಸಿ ವಾಹನವನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಮಾಡುತ್ತಾರೆ.

ಅಪಘಾತದ ಪ್ರಥಮ ವರ್ತಮಾನ ವರದಿ ನ್ಯಾಯಾಲಯಕ್ಕೆ ರವಾನಿಸಿದ ತಕ್ಷಣ ವಾಹನ ಮಾಲಕರು ನ್ಯಾಯಾಲಯದಲ್ಲಿ ಅಥವಾ ನ್ಯಾಯಾಲಯದ ಆದೇಶದ ಮೇರೆಗೆ ಈ ಅಪಘಾತದ ಮೊಕದ್ದಮೆಯ ಬಗ್ಗೆ ನ್ಯಾಯಾಲಯದಲ್ಲಿ ಆದೇಶ ಆಗುವ ವರೆಗೆ ವಾಹನದ ವರ್ಣ ಬದಲಾಯಿಸುವುದಿಲ್ಲ ಮತ್ತು ಮೂರನೇ ವ್ಯಕ್ತಿಗೆ ವಾಹನ ಮಾರಾಟ ಮಾಡುವುದಿಲ್ಲ ಎಂಬಿತ್ಯಾದಿ ನ್ಯಾಯಾಲಯ ವಿಧಿಸುವ ಶರ್ತಗಳೊಂದಿಗೆ ಪೋಲಿಸ್ ಠಾಣೆಯಲ್ಲಿ ನಷ್ಟಭರ್ತಿ ಬಂಧಪತ್ರಕ್ಕೆ (indemnity Bond) ಸಹಿ ಹಾಕಿ ತಮ್ಮ ವಾಹನವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು.

ಎರಡು ವಾಹನಗಳು ಡಿಕ್ಕಿಯಾಗಿ ಅಪಘಾತ ಸಂಭವಿಸಿದಲ್ಲಿ ಪ್ರಥಮ ವರ್ತಮಾನ ವರದಿ ದಾಖಲು ಮಾಡುವಾಗ ಯಾರ ತಪ್ಪಿನಿಂದ ಈ ಅಪಘಾತ ಸಂಭವಿಸಿದೆಯೆಂದು ಪೋಲಿಸರು ಇತ್ಯರ್ಥಪಡಿಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಹೆಚ್ಚಾಗಿ ವಾಹನಗಳ ಚಾಲಕರಿಗೆ ಯಾರ ತಪ್ಪಿನಿಂದ ಅಪಘಾತ ಆಗಿದೆ ಎಂದು ತಿಳಿದಿರುತ್ತದೆ. ಆದರೆ ಹಣಬಲ ಮತ್ತು ತೋಳು ಬಲವಿದ್ದವರು ತಮ್ಮ ವಶೀಲಿಯಿಂದ ಪೋಲಿಸರ ಮೇಲೆ ಪ್ರಭಾವ ಬೀರಿ  ತಪ್ಪು ಮಾಡದ ವಾಹನದ ಚಾಲಕರ ವಿರುದ್ದ ಮೊಕದ್ದಮೆ ದಾಖಲಿಸುವಂತೆ ಪ್ರೇರೇಪಿಸುತ್ತಾರೆ. ಈ ಸಂಧರ್ಭದಲ್ಲಿ ಬಲಿಪಶು ಆದವರು ಹೆದರುವ ಅಗತ್ಯವಿಲ್ಲ. ಏಕೆಂದರೆ ಇವರು ಒಂದು ದೂರು ಬರೆದು ಪೋಲಿಸ್ ಅಧೀಕ್ಷಕರಿಗೆ ನೀಡಬೇಕು. ಅವರೂ ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿದಲ್ಲಿ ತಮ್ಮ ಪರಿಚಯದ ವಕೀಲರನ್ನು ಭೇಟಿಯಾಗಿ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಬೇಕು. ಆಗ ನ್ಯಾಯಾದೀಶರು ತಮಗೆ ಸೂಕ್ತವೆಂದು ಕಂಡಲ್ಲಿ ಪೋಲಿಸ್ ಅಧೀಕ್ಷಕರಿಗೆ ಈ ಅಪಘಾತದ ತಪ್ಪಿನ ಬಗ್ಗೆ ಮರು ತನಿಖೆ ನಡೆಸಿ ನ್ಯಾಯಾಲಯಕ್ಕೆ ವರದಿ ನೀಡಲು ಆದೇಶ ನೀಡುತ್ತಾರೆ. ಈ ತನಿಖೆ ನಿಷ್ಪಕ್ಷವಾಗಿ ನಡೆದು ಹಣಬಲ ಮತ್ತು ವಶೀಲಿಯಿಂದ ಮೊಕದ್ದಮೆ ದಾಖಲು ಮಾಡಲಾಗಿದೆ ಎಂದು ವರದಿ ನೀಡಿದರೆ ಪೋಲಿಸರು ಮೊದಲು ದಾಖಲಿಸಿದ ಮೊಕದ್ದಮೆ ರದ್ದುಪಡಿಸಿ ಹಣಬಲ ಪ್ರಯೋಗಿಸಿದ ವಾಹನದ ವಿರುದ್ದ ಕೇಸು ದಾಖಲಿಸಲು ನ್ಯಾಯಾಲಯ ಆದೇಶ ನೀಡುತ್ತದೆ.

## ಅಪಘಾತದಲ್ಲಿ ಗಾಯಗೊಂಡವರು, ಮೃತ ಪಟ್ಟವರ ವಾರಿಸುದಾರರು ನ್ಯಾಯಾಲಯದಿಂದ ವಿಮಾ ಪರಿಹಾರ ಪಡೆಯುವ ಕ್ರಮ:

1. ವಿಮಾ ಪರಿಹಾರ ಪಡೆಯಲು ಪೋಲಿಸ್ ಠಾಣೆಯಿಂದ ಪಡೆಯಬೇಕಾದ ಅಗತ್ಯದ ದಾಖಲೆಗಳು:

   ಅ) ಪ್ರಥಮ ವರ್ತಮಾನ ವರದಿಯ ಪ್ರತಿ

   ಆ) ಮೋಟಾರು ವಾಹನ ಕಾಯಿದೆಯ ಸೆಕ್ಷನ್ 160 ಪ್ರಕಾರ ಪೋಲಿಸರ ಸೂಚನಾಪತ್ರ (ಈ ಸೂಚನಾಪತ್ರದಲ್ಲಿ ಮೊಕದ್ದಮೆ ನಂಬ್ರ, ಅಪಘಾತದ ದಿನಾಂಕ, ವಾಹನದ ನಂಬ್ರ, ಚಾಲಕರ ಹೆಸರು–ವಿಳಾಸ, ಚಾಲನಾ ಪರವಾನಗಿ ವಿವರ, ವಾಹನ ಮಾಲಕರ ಹೆಸರು–ವಿಳಾಸ, ವಿಮಾ ಕಂಪೆನಿಯ ಹೆಸರು–ವಿಳಾಸ ಮತ್ತು ಪಾಲಿಸಿ ನಂಬ್ರ ಇತ್ಯಾದಿಗಳನ್ನು ನಮೂದಿಸುತ್ತಾರೆ)

   ಇ) ಅಪಘಾತ ಸ್ಥಳದ ನಕ್ಷೆ ಮತ್ತು ಮಹಾಜರು

   ಈ) ಮೋಟಾರು ವಾಹನ ನಿರೀಕ್ಷಕರ ವರದಿ

   ಉ) ಅಂತಿಮ ತನಿಖಾ ವರದಿ

   ಊ) ಗಾಯದ ಪ್ರಮಾಣ ಪತ್ರ

   ಎ) ಗಾಯಾಳು ಮೃತಪಟ್ಟಲ್ಲಿ ಪೋಸ್ಟ್ ಮಾರ್ಟೆಮ್ ವರದಿ

### 2. ವಕೀಲರ ನೇಮಖಾತಿ

ಮೇಲೆ ತಿಳಿಸಿದ ಪೋಲಿಸ್ ದಾಖಲೆಗಳನ್ನು ನಮಗೆ ವಿಶ್ವಾಸವಿರುವ ವಕೀಲರಿಗೆ ಹಸ್ತಾಂತರಿಸಿ ವಿಮಾ ಪರಿಹಾರಕ್ಕೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲು ಸೂಚಿಸಬೇಕು. ತರುವಾಯ ವಿಮಾ ಕಂಪೆನಿ ಮತ್ತು ವಾಹನದ ಮಾಲೀಕರಿಗೆ ನಿಗದಿಪಡಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಸ್ವತಹ ಅಥವಾ ಅವರ ವಕೀಲರ ಮುಖಾಂತರ ಹಾಜರಾಗಲು ನೋಟೀಸು ನೀಡಲಾಗುತ್ತದೆ ಹಾಗೂ ಅವರ ಲಿಖಿತ ಆಕ್ಷೇಪಗಳನ್ನು ಪಡೆಯಲಾಗುತ್ತದೆ. ತದನಂತರ ಇತರ ವ್ಯಾಜ್ಯ/ಧಾವೆಗಳಲ್ಲಿರುವಂತೆ ನ್ಯಾಯಾಲಯದಲ್ಲಿ ಗಾಯಾಳುವಿನ ವಿಚಾರಣೆ, ಊನತ್ವವಿದ್ದಲ್ಲಿ ಗಾಯಾಳುವಿಗೆ ಚಿಕಿತ್ಸೆ ನೀಡಿದ ವೈದ್ಯರ ವಿಚಾರಣೆ ಮತ್ತು ಗಾಯಾಳು ಮೃತಪಟ್ಟಿದ್ದಲ್ಲಿ ಅಪಘಾತದ ಪ್ರತ್ಯಕ್ಷದರ್ಶಿಯ ವಿಚಾರಣೆ ನಡೆಸಲಾಗುತ್ತದೆ. ಅಂತಿಮವಾಗಿ ವಿಮಾ ಕಂಪೆನಿಯು ತಾವು ಪರಿಹಾರ ನೀಡಲು

ಜವಾಬ್ದಾರರು ಎಂಬುದಾಗಿ ವಾಹನದ ಮಾಲಕರಿಗೆ ನೀಡಿರುವ ವಿಮಾ ಪಾಲಿಸಿಯನ್ನು ತಮ್ಮ ಪರವಾಗಿ ನ್ಯಾಯಾಲಯಕ್ಕೆ ದಾಖಲೆಯಾಗಿ ಹಾಜರು ಪಡಿಸುತ್ತಾರೆ. ತರುವಾಯ ಇತ್ತಂಡಗಳ ವಕೀಲರ ವಾದವನ್ನು ಆಲಿಸಿ ನ್ಯಾಯಾದೀಶರು ಪರಿಹಾರದ ಮೊತ್ತವನ್ನು ಘೋಷಣೆ ಮಾಡುತ್ತಾರೆ.

## 3. ನ್ಯಾಯಾಲಯದ ಆದೇಶ ಮತ್ತು ವಿಮಾ ಪರಿಹಾರ

ನ್ಯಾಯಾಲಯವು ತನ್ನ ತೀರ್ಪು ಘೋಷಿಸಿದ 2–3 ತಿಂಗಳುಗಳ ಒಳಗೆ ಪರಿಹಾರದ ಮೊತ್ತ ಮತ್ತು ಪರಿಹಾರದ ಅರ್ಜಿ ಸಲ್ಲಿಸಿದ ದಿನದಿಂದ ಪರಿಹಾರ ಮೊತ್ತ ನ್ಯಾಯಾಲಯದಲ್ಲಿ ಠೇವಣಿ/ಜಮೆ ಮಾಡುವ ವರೆಗೆ 6 ರಿಂದ 7.5 ಶೇಕಡ ಬಡ್ಡಿಯ ಜೊತೆಗೆ ಪರಿಹಾರಧನದ ಮೊತ್ತವನ್ನು ನ್ಯಾಯಾಲಯದಲ್ಲಿ ಜಮೆ ಮಾಡಲು ಪ್ರತಿವಾದಿಗಳಿಗೆ ಆದೇಶಿಸಲಾಗುತ್ತದೆ. ಕೆಳಗಿನ ನ್ಯಾಯಾಲಯದಲ್ಲಿ ಘೋಷಿಸಿದ ಪರಿಹಾರದ ಮೊತ್ತ ನ್ಯಾಯಯುತವಾಗಿಲ್ಲ ಅಥವಾ ಕಡಿಮೆ ಎಂದು ವಕೀಲರು ಅಥವಾ ಕಕ್ಷಿದಾರರು ಅಭಿಪ್ರಾಯಪಟ್ಟಲ್ಲಿ, ಕೆಳಗಿನ ನ್ಯಾಯಾಲಯದಲ್ಲಿ ನ್ಯಾಯಯುತ ಪರಿಹಾರ ನೀಡುವಲ್ಲಿ ನ್ಯಾಯಾಧೀಶರು ಎಲ್ಲಿ ಎಡವಿದ್ದಾರೆ ಯಾವ ಕಾರಣಗಳಿಗಾಗಿ ಹೆಚ್ಚು ಪರಿಹಾರ ಸಿಗಬೇಕು ಎಂಬುದನ್ನು ವಿವರವಾಗಿ ಸೂಚಿಸಿ/ ವಿವರಿಸಿ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಮಾಡಬಹುದು. ಉಚ್ಚ ನ್ಯಾಯಾಲಯದಲ್ಲಿ ನಾವು ಸಲ್ಲಿಸಿದ ಅಪೀಲು ಮನವಿ ಸೂಕ್ತವೆಂದು ನ್ಯಾಯಾಧೀಶರಿಗೆ ಮನದಟ್ಟಾದಲ್ಲಿ ಹೆಚ್ಚಿನ ಪರಿಹಾರ ನೀಡಲು ವಿಮಾ ಕಂಪೆನಿಗೆ ಆದೇಶಿಸಲಾಗುತ್ತದೆ.

## 4. ಅಪಘಾತತಲ್ಲಿ ಮೃತಪಟ್ಟವರ ಬಾಬ್ತು ವಿಮಾ ಪರಿಹಾರ ಪಡೆಯಲು ಅರ್ಹರಾದ ವಾರಿಸುದಾರರು ಯಾರು?

ಅ) ಗಂಡ ಮೃತಪಟ್ಟಲ್ಲಿ ಅವರ ಹೆಂಡತಿ–ಮಕ್ಕಳು ಮತ್ತು ಗಂಡನ ತಂದೆ–ತಾಯಿ

ಆ) ಹೆಂಡತಿ ಮೃತಪಟ್ಟಲ್ಲಿ ಅವರ ಗಂಡ–ಮಕ್ಕಳು ಮತ್ತು ಹೆಂಡತಿಯ ತಂದೆ–ತಾಯಿ

ಇ) ಮದುವೆಯಾಗದ ಮಗ/ಮಗಳು ಮೃತಪಟ್ಟಲ್ಲಿ ಅವರ ತಂದೆ–ತಾಯಿ ಮತ್ತು ಅವರ ಅಪ್ರಾಪ್ತ ವಯಸ್ಸಿನ ತಮ್ಮ–ತಂಗಿಯಂದಿರು

ಈ) ಮೃತಪಟ್ಟ ವ್ಯಕ್ತಿಗೆ ಮದುವೆಯಾಗದ ಮಗಳು ಮಾತ್ರ ವಾರಿಸುದಾರಳಾಗಿದ್ದರೆ ಮದುವೆಯಾಗದ ಮಗಳು

# ಪರಿಸರ ಸಂರಕ್ಷಣ ಕಾನೂನು 1986

## (ತಿದ್ದುಪಡಿ ಕಾಯಿದೆ 2009 ಪ್ರಕಾರ)

ಸ್ಟಾಕ್‌ಹೋಂನಲ್ಲಿ ಜೂನ್ 1972 ರಂದು ಜರಗಿದ ಯುನ್ಯಾಟೆಡ್ ನೇಶನ್ಸ್ ಸಮ್ಮೇಳನದಲ್ಲಿ ಮನುಷ್ಯರ ರಕ್ಷಣೆಗೆ ಮತ್ತು ಸುಧಾರಣೆಗೆ ಅಗತ್ಯವಿರುವ ವಾತಾವರಣವನ್ನು ತಯಾರಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ಪ್ರಯುಕ್ತ ಭಾರತ ದೇಶವು ಆ ಸಮ್ಮೇಳನದಲ್ಲಿ ಭಾಗವಹಿಸಿತ್ತು. ಮನುಷ್ಯರಿಗೆ, ಇತರ ಜೀವಿಗಳಿಗೆ, ಮರ–ಗಿಡಗಳಿಗೆ ಮತ್ತು ಆಸ್ತಿಗೆ ಸಂಬಂಧಿಸಿದಂತೆ ಪರಿಸರದ ಸುಧಾರಣೆಗೆ / ರಕ್ಷಣೆಗೆ ಅಗತ್ಯ ಕ್ರಮ ತೆಗೆದುಕೊಳ್ಳುವ ಅಗತ್ಯವಿದೆಯಾದುದರಿಂದ ಮೇಲ್ಕಾಣಿಸಿದ ನಿರ್ಧಾರಗಳನ್ನು ಜ್ಯಾರಿಗೆ ತರುವ ಅಗತ್ಯವನ್ನು ಭಾರತ ಮನಗಂಡಿತ್ತು.

1960ರ ದಶಕದಲ್ಲಿ ಭೂಲೋಕದಾದ್ಯಂತ ಪರಿಸರ / ವಾತಾವರಣದ ವಿಷಯದಲ್ಲಿ ಕಾಳಜಿ ಹೆಚ್ಚುತ್ತಾ ಬಂದಿರುತ್ತದೆ. ವಾತಾವರಣದ ಗುಣಮಟ್ಟ, ಹೆಚ್ಚುತ್ತಿರುವ ಮಾಲಿನ್ಯ, ಕಾಡುಗಳನ್ನು ನಾಶಪಡಿಸುವುದು, ಜೀವಿಗಳಿಗೆ ಅಪಾಯಕಾರಿಯಾದ ರಾಸಾಯನಿಕಾಂಶಗಳು ವಾತಾವರಣದಲ್ಲಿ ಹೆಚ್ಚುತ್ತಿರುವುದು ಈ ಎಲ್ಲಾ ವಿಷಯಗಳು ಸ್ಟಾಕ್‌ಹೋಂನಲ್ಲಿ ಜರಗಿದ ಯುನೈಟೆಡ್ ನೇಶನ್ಸ್ ಸಮ್ಮೇಳನದಲ್ಲಿ ಚರ್ಚೆಯಾಗಿ ಈ ತೊಂದರೆಗಳನ್ನು ಹೇಗೆ ನಿವಾರಿಸುವುದು ಮತ್ತು ಅಪಾಯವನ್ನು ಹೇಗೆ ತಡೆಗಟ್ಟಬಹುದು ಎಂಬ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿತ್ತು.

1991ರ ಸಾಮಾಜಿಕ ಕಾರ್ಯಕರ್ತರು ಮತ್ತು ಬಿಹಾರ ಈ ವ್ಯಾಜ್ಯದಲ್ಲಿ ಭಾರತದ ಸುಪ್ರೀಮ್ ಕೋರ್ಟ್ ಈ ಕೆಳಗಿನಂತೆ ಆದೇಶ ನೀಡಿರುತ್ತದೆ.

ಬದುಕುವ ಹಕ್ಕು ಮೂಲಭೂತ ಹಕ್ಕು ಎಂಬುದಾಗಿ ಸಂವಿಧಾನದ ಪರಿಚ್ಛೇದ 21 ಸ್ಪಷ್ಟಪಡಿಸುತ್ತದೆ. ಇದರಲ್ಲಿ ಜೀವನವನ್ನು ಅನುಭವಿಸಲು ಧರ್ಮಾರ್ಥ ಮಾಲಿನ್ಯರಹಿತ ನೀರು, ಗಾಳಿ ಇರಬೇಕೆಂದು ತಿಳಿಸಿದೆ. ಇವುಗಳಲ್ಲಿ ಯಾವುದನ್ನಾದರೂ ಅಪಾಯಕ್ಕೀಡು ಮಾಡಿದರೆ ಅಥವಾ ಶಿಥಿಲಗೊಳಿಸಿದರೆ, ಕಾನೂನನ್ನು ನ್ಯೂನಗೊಳಿಸಿದರೆ ನಾಗರಿಕರು ಸಂವಿಧಾನದ ಪರಿಚ್ಛೇದ 32 ರಂತೆ ಪರಿಸರದ ಮಾಲಿನ್ಯವನ್ನು ತೆಗೆದುಹಾಕಲು ದಾಖಲಿಸುವ ಅರ್ಜಿ / ಮನವಿ ಭಾದಿತ ಜನರ ಮಟ್ಟಿಗೆ ಸೂಕ್ತವಾಗಿದೆ ಎಂದು ಸುಪ್ರೀಮ್ ಕೋರ್ಟ್ ಅಭಿಪ್ರಾಯ ನೀಡಿರುತ್ತದೆ.

1988 ರಲ್ಲಿ ಎಂ.ಸಿ. ಮೆಹ್ತಾ ಕೇಸಿನಲ್ಲಿ ಸುಪ್ರೀಮ್ ಕೋರ್ಟು ಆದೇಶ ಈ ರೀತಿ ಇದೆ. ಕಾನ್ಪುರದಲ್ಲಿರುವ ಕಂಪೆನಿ ಆರೋಗ್ಯಕ್ಕೆ ಅಪಾಯಕಾರಿಯಾದ ಚರ್ಮ

ಹದ ಮಾಡಿದ ಹಾಳು ರಾಸಾಯನಿಕ ಭರಿತ ನೀರನ್ನು ಗಂಗಾ ನದಿಗೆ ಬಿಡುವುದು ಸರಿಯಲ್ಲ. ಆದುದರಿಂದ ಇಂತಹ ಕಂಪೆನಿಗಳು ಗಂಗಾ ನದಿಗೆ ಹಾಳು ಮಾಲಿನ್ಯಭರಿತ ನೀರನ್ನು ಬಿಡುವ ಮೊದಲು ಅಂತಹ ನೀರನ್ನು ಶುದ್ಧೀಕರಿಸುವ ಯಂತ್ರೋಪಕರಣಗಳುಳ್ಳ ಪ್ಲಾಂಟ್‌ನಲ್ಲಿ ಅಳವಡಿಸಿ, ನೀರನ್ನು ಶುದ್ಧೀಕರಿಸಿ ತದನಂತರ ಗಂಗಾ ನದಿಗೆ ಬಿಡತಕ್ಕದು. ಗಂಗಾ ನದಿಯನ್ನು ಮಾಲಿನ್ಯಗೊಳಿಸುವುದು ಸಾರ್ವಜನಿಕ ಉಪದ್ರವ ಆಗಿದೆ. ಆದುದರಿಂದ ಈ ವಿಷಯದಲ್ಲಿ ಸಾರ್ವಜನಿಕರು ನ್ಯಾಯಾಲಯದ ಬಾಗಿಲು ಬಡಿಯಬೇಕು ಎಂದು ಅಪೇಕ್ಷಿಸುವುದು ಸರಿಯಲ್ಲವೆಂದು ಸುಪ್ರೀಮ್ ಕೋರ್ಟ್ ಆದೇಶಿಸಿದೆ.

## ಪರಿಸರ ಅರ್ಥ ವಿವರಣೆ

ನೀರು, ಗಾಳಿ, ಭೂಮಿ, ಮತ್ತು ಪರಸ್ಪರ ಸಂಬಂಧದಿಂದ ಅಸ್ತಿತ್ವದ ಜೊತೆಗೆ ಮತ್ತು ನಡುವೆ ಇರುವ ನೀರು, ಗಾಳಿ ಮತ್ತು ಭೂಮಿ ಮತ್ತು ಮಾನವ ಜೀವಿಗಳು, ಇತರ ಜೀವಿಗಳು, ಸಸ್ಯಗಳು, ಜೀವ-ಜಂತುಗಳು ಮತ್ತು ಆಸ್ತಿ ಇವೆಲ್ಲಾ ಒಟ್ಟಾಗಿ 'ಪರಿಸರ' ಎನ್ನಲ್ಪಡುವುದು.

## ಪರಿಸರ ಮಾಲಿನ್ಯಕಾರಕ

ಯಾವುದೇ ಗಟ್ಟಿ, ದ್ರವ, ಅನಿಲ ದ್ರವ ಪರಿಸರದಲ್ಲಿ ಹಾಜರಿದ್ದು ಪರಿಸರಕ್ಕೆ ಹಾನಿಕಾರವಾಗಿರುವುದು ಪರಿಸರ ಮಾಲಿನ್ಯಕಾರಕವಾಗಿದೆ

## ಕೇಂದ್ರ ಸರಕಾರದ ಅಧಿಕಾರ

ಪರಿಸರವನ್ನು ಸಂರಕ್ಷಿಸಲು, ಪರಿಸರದಲ್ಲಿ ಸುಧಾರಣೆ ತರಲು ಮತ್ತು ಪರಿಸರ ಕಲುಷಿತವಾಗದಂತೆ ಕಾಪಾಡುವ ಸಲುವಾಗಿ ಅಗತ್ಯವಿರುವ ಕ್ರಮ ತೆಗೆದುಕೊಳ್ಳುವ ಅಧಿಕಾರ ಕೇಂದ್ರ ಸರಕಾರಕ್ಕೆ ಇರುತ್ತದೆ.

ಉದಾ:
1. ಪರಿಸರ ಸಂರಕ್ಷಣೆಗೆ, ಮಾಲಿನ್ಯವನ್ನು ನಿವಾರಿಸಲು, ತಡೆಗಟ್ಟಲು ಮತ್ತು ಕೊನೆಗೊಳಿಸಲು ರಾಷ್ಟ್ರವ್ಯಾಪಿ ಕಾರ್ಯಕ್ರಮಗಳ ಆಯೋಜನೆ ಮತ್ತು ಜ್ಯಾರಿ.
2. ಪರಿಸರದ ಗುಣಮಟ್ಟ ಕಾಪಾಡಲು ಮಾನದಂಡ ನಿರ್ಧಾರ.
3. ಮಾಲಿನ್ಯಕಾರಕ ಗಾಳಿಯನ್ನು ಪರಿಸರದಲ್ಲಿ ಯಾವ ಮಟ್ಟದಲ್ಲಿ ಬಿಡಬಹುದು.

4. ಕಾರ್ಖಾನೆಗಳಲ್ಲಿ ತಯಾರಾಗುವ ಉತ್ಪಾದನೆಗಳಿಂದ ವಾತಾವರಣವನ್ನು ಎಷ್ಟು ಮಾಪನೆಯಲ್ಲಿ ಕಲುಲಷಿತಗೊಳಿಸಬಹುದು.
5. ಪರಿಸರ ಮಾಲಿನ್ಯವಾಗದಂತೆ ಮತ್ತು ಅಪಘಾತ ತಡೆಗಟ್ಟಲು ಅಗ್ಯತ ಸುರಕ್ಷ ವ್ಯವಸ್ಥೆ
6. ಮಾನವ ಜೀವಕ್ಕೆ ಅಪಾಯಕಾರಿಯಾದ ರಾಸಾಯನಿಕಗಳನ್ನು ಉಪಯೋಗಿಸುವ ಸಂಧರ್ಭಗಳಲ್ಲಿ ಅಗತ್ಯವಿರುವ ಸುರಕ್ಷಾ ವ್ಯವಸ್ಥೆಗೆ ಕ್ರಮ ಮತ್ತು ಆ ರಾಸಾಯನಿಕಗಳಿಂದ ಪರಿಸರ ಹಾಳಾಗದಂತೆ ಕ್ರಮ.
7. ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ಉತ್ಪಾದನ ಘಟಕಗಳು, ಸಾಮಾಗ್ರಿಗಳು ಮತ್ತು ಪದಾರ್ಥಗಳನ್ನು ಪರೀಕ್ಷಿಸುವುದು ಮತ್ತು ಅಗತ್ಯ ಕ್ರಮಗಳಿಗೆ ಆದೇಶಿಸುವುದು.
8. ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ವಿಷಯಗಳ ಅಧ್ಯಯನದ ಮತ್ತು ಅನ್ವೇಷಣೆಯ ಹೊಣೆ ಹೊರುವುದು.
9. ಕೈಪಿಡಿ ತಯಾರಿಸುವುದು, ಪರಿಸರ ಸಂರಕ್ಷಣೆ ವಿಷಯದಲ್ಲಿ ಮಾಲಿನ್ಯ ತಡೆಗಟ್ಟಲು ಮತ್ತು ಕೊನೆಗೊಳಿಸಲು ನಿಯಮಾವಳಿಗಳನ್ನು ತಯಾರಿಸುವುದು.

ಕೇಂದ್ರ ಸರ್ಕಾರ ಅಗತ್ಯವೆಂದು ಭಾವಿಸಿದಲ್ಲಿ ಅಧಿಕೃತ ಗಜೆಟ್ ಪ್ರಕಟಣೆ ಮೂಲಕ ಈ ಕಾನೂನಿನ ಅಧಿಕಾರ ಚಲಾಯಿಸಲು ಪ್ರಾಧಿಕಾರಗಳನ್ನು ಸೂಕ್ತ ಹೆಸರುಗಳಲ್ಲಿ ರಚಿಸುತ್ತದೆ ಮತ್ತು ಪರಿಸರ ಸಂರಕ್ಷಣೆಗೆ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸುತ್ತದೆ.

ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ವೈರಿಗಳಲ್ಲ. ಪರಿಸರವನ್ನು ಮಾಲಿನ್ಯಗೊಳಿಸದೆ ಅಗತ್ಯ ರಕ್ಷಣಾ ಕ್ರಮಗಳನ್ನು ತೆಗೆದುಕೊಂಡಲ್ಲಿ ಅಭಿವೃದ್ಧಿಯನ್ನು ಸಾಧಿಸಬಹುದು. ನೀರಾವರಿ, ವಿದ್ಯುತ್ ಅಗತ್ಯವಿರುವಂತೆ ಉದ್ಯೋಗಳನ್ನು ಸೃಷ್ಟಿಸುವುದು, ಕಂದಾಯ ಒಟ್ಟುಗೂಡಿಸುವುದು ಇವೆಲ್ಲವುಗಳಲ್ಲಿ ಸಮತೋಲನದ ಅಗತ್ಯವಿದೆ. ಯಾವುದೇ ಘಟಕವನ್ನು / ಉತ್ಪಾದನೆಯನ್ನು ಪ್ರಾರಂಭಿಸಲು ಅನುಮತಿ ನೀಡಿದಲ್ಲಿ ಪರಿಸರದ ಮೇಲೆ ಸರಿಪಡಿಸಲು ಆಗದಂತಹ ದುಷ್ಪರಿಣಾಮ ಉಂಟಾಗಬಹುದು. ಅದನ್ನು

ನಿಲ್ಲಿಸಿದಲ್ಲಿ ಆರ್ಥಿಕ ಸ್ಥಿತಿಗತಿಗಳ ಮೇಲೆ ಸರಿಪಡಿಸಲಾಗದಂತಹ ನಷ್ಟ ಉಂಟಾಗಬಹುದು. ಆದರೆ ಇಂತಹ ಪರಿಸ್ಥಿತಿಯಲ್ಲಿ ಪರಿಸರವನ್ನು ಕಾಪಾಡುವುದು ಆರ್ಥಿಕ ನಷ್ಟಗಳಿಗಿಂತ ಪ್ರಾಮುಖ್ಯವಾಗಿದೆ. ಆದ್ದರಿಂದ ನಷ್ಟವಾಗದಂತೆ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಪರಿಯಾಗಿ ಭಾರತದ ಸುಪ್ರೀಮ್ ಕೋರ್ಟ್ 2004 ರ ಎಂ.ಸಿ ಮೆಹ್ತಾ ಕೇಸಿನಲ್ಲಿ ತೀರ್ಪು ನೀಡುತ್ತಾ ಅಭಿಪ್ರಾಯ ವ್ಯಕ್ತಪಡಿಸಿದೆ.

ಸರಕಾರವು ಸಾರ್ವಜನಿಕ ಜೀವನಕ್ಕೆ ಅಗತ್ಯವಿರುವ ಜೀವನ ಸೌಕರ್ಯಗಳನ್ನು ಒದಗಿಸಲು ಸಾರ್ವಜನಿಕ ಯೋಜನೆಗಳಿಗೆ ಆದ್ಯತೆ ನೀಡುವಂತೆ ಸಾಮಾಜಿಕ ಮತ್ತು ಜೀವ ಪರಿಸರ ಸಮತೋಲನ ರಕ್ಷಿಸಲು ಮತ್ತು ಮಾಲಿನ್ಯರಹಿತ ಪರಿಸರ ಒದಗಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ವಿಷಯದಲ್ಲಿ ಸಂಘ-ಸಂಸ್ಥೆಗಳು, ಪರಿಣಿತರು, ಸಾರ್ವಜನಿಕ ಕೆಲಸಗಾರರು ಈ ವಿಷಯಗಳನ್ನು ನ್ಯಾಯಾಲಯದ ಗಮನಕ್ಕೆ ತಂದಿರುವುದರಿಂದ, ನ್ಯಾಯಾಲಯ ಎರಡೂ ವಿಷಯಗಳನ್ನು ಸಮಾನ ತೂಕದಲ್ಲಿ ನೋಡಬೇಕಾಗಿದೆ. ಸರಕಾರವು ಸಂಬಂಧಪಟ್ಟ ವಿಷಯಗಳನ್ನು ಪರಿಗಣಿಸಿದೆಯೋ ಅಥವಾ ಕಡೆಗಣಿಸಿದೆಯೋ/ಅಥವಾ ಸರಿಯಾಗಿ ಗಮನಿಸಿಲ್ಲವೋ ಮತ್ತು ವಶೀಲಾತಿ ನಡೆದಿಯೋ, ಯಾವುದೇ ಆಮಿಷಕ್ಕೊಳಾಗಿದೆಯೋ ಎಂಬ ವಿಷಯಗಳನ್ನು ಮಾತ್ರ ನ್ಯಾಯಾಲಯವು ಖಾತ್ರಿ ಪಡಿಸಬೇಕಾಗಿದೆ, ಎಂದು 1991 ರಂದು ತಾಲೂಕು ಪರಿಸರ ಸಂರಕ್ಷಣಾ ಗುಂಪು ಈ ಕೇಸಿನಲ್ಲಿ ತೀರ್ಪು ನೀಡುತ್ತಾ ಭಾರತದ ಸುಪ್ರೀಮ್ ಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿದೆ.

ಸಾರ್ವಜನಿಕರಿಗೆ ಪರಿಸರವನ್ನು ಸಂರಕ್ಷಿಸುವಲ್ಲಿ ಶಿಕ್ಷಿತರನ್ನಾಗಿಸಲು ಮತ್ತು ಪರಿಸರವನ್ನು ಮಾಲಿನ್ಯಗೊಳಿಸದಂತೆ ಅವರ ಸಾಮಾಜಿಕ ಜವಾಬ್ದಾರಿ ಗೊತ್ತುಪಡಿಸಲು ಆಕಾಶವಾಣಿಯಲ್ಲಿ ದೇಶೀಯ ಮತ್ತು ರಾಜ್ಯ ಭಾಷೆಗಳಲ್ಲಿ ಅಂತೆಯೇ ಸಿನೇಮಾ ಥಿಯೇಟರ್‌ಗಳಲ್ಲೂ ಪರಿಸರದ ಬಗ್ಗೆ ಮಾಹಿತಿ ನೀಡಬೇಕು. ಜೊತೆಗೆ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಪರಿಸರ ವಿಷಯವನ್ನು ಕಡ್ಡಾಯ ಶಿಕ್ಷಣವಾಗಿ ತೆಗೆದುಕೊಳ್ಳಬೇಕು ಎಂದು 1992 ರಂದು ಭಾರತದ ಸುಪ್ರೀಮ್ ಕೋರ್ಟು ಆದೇಶ ನೀಡಿರುತ್ತದೆ.

ಕೇಂದ್ರ ಸರಕಾರ ಅಧಿಕೃತ ಗಜೆಟ್ ಪ್ರಕಟಣೆ ಮೂಲಕ ಈ ಕೆಳಗೆ ವಿವರಿಸಿದ ನಿಯಮಗಳನ್ನು ತಯಾರಿಸಬಹುದು.

1. ಆಯಾ ಪ್ರದೇಶಗಳಲ್ಲಿ ಗಾಳಿ ಮತ್ತು ನೀರು ಯಾವ ಗುಣಮಟ್ಟದಲ್ಲಿರಬೇಕು.
2. ವಿವಿದ ರೀತಿಯ ಪರಿಸರ ಮಾಲಿನ್ಯಕಾರಕಗಳು (ಶಬ್ದ ಮಾಲಿನ್ಯವನ್ನೂ ಸೇರಿಸಿ) ವಾತಾವರಣದಲ್ಲಿ ಎಷ್ಟು ಮಾಪನದಲ್ಲಿ ಇರಬಹುದು.

3. ಅಪಾಯಕಾರಿ ಪದಾರ್ಥಗಳ ನಿರ್ವಹಣೆಗೆ ಮತ್ತು ರಕ್ಷಣೆಗೆ ನಿಯಮಾವಳಿಗಳನ್ನು ರೂಪಿಸುವುದು
4. ವಿವಿದ ಪ್ರದೇಶಗಳಲ್ಲಿ ಅಪಾಯಕಾರಿ ಪದಾರ್ಥಗಳ ನಿರ್ವಹಣೆಗೆ ನಿರ್ಬಂಧಿಸುವುದು ಮತ್ತು ಪರಿಬಂಧಿಸುವುದು
5. ಯಾವ ಪ್ರದೇಶದಲ್ಲಿ ಯಾವ ಕಾರ್ಖಾನೆ ಯಾವ ಕಾರ್ಯನಿರ್ವಹಿಸಬೇಕು ಎಂಬ ವಿಷಯದಲ್ಲಿ ನಿರ್ಬಂಧ ಮತ್ತು ಪರಿಬಂಧ
6. ಅಪಘಾತ / ಆಕಸ್ಮಿಕ ಸಂಭವಿಸಿ ಪರಿಸರ ಮಾಲಿನ್ಯವಾಗುವುದನ್ನು ತಡೆಗಟ್ಟಲು ನಿಯಮಾವಳಿ ಮತ್ತು ರಕ್ಷಣೆ ರೂಪಿಸುವುದು ಮತ್ತು ಆಕಸ್ಮಿಕಗಳಿಗೆ ಅಗತ್ಯ ಕ್ರಮಗಳನ್ನು ಒದಗಿಸುವುದು.

## ಪರಿಸರ ಮಾಲಿನ್ಯ ಪ್ರತಿಬಂಧಿಸುವುದು, ನಿಯಂತ್ರಿಸುವುದು ಮತ್ತು ಕೊನೆಗೊಳಿಸುವುದು.

1. ಕೈಗಾರಿಕೆ, ಉದ್ದಿಮೆಗಳನ್ನು ನಡೆಸುವವರು ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಮಾಲಿನ್ಯವನ್ನು ಪರಿಸರಕ್ಕೆ ಬಿಡದಂತೆ ನೋಡಿಕೊಳ್ಳುವುದು.
2. ಮಾನವ ಜೀವಕ್ಕೆ ಅಪಾಯಕಾರಿಯಾಗುವಂತಹ ವಸ್ತುಗಳನ್ನು ಜೀವರಕ್ಷಣ ಕ್ರಮಗಳನ್ನು ತೆಗೆದುಕೊಂಡು ನಿರ್ವಹಿಸುವುದು.
3. ಅಪಘಾತದ ಪರಿಣಾಮ ಅಗತ್ಯಕ್ಕಿಂತ ಹೆಚ್ಚು ಮಾಲಿನ್ಯ ಪರಿಸರದಲ್ಲಿ ಹೊರ ಹೊಮ್ಮಿದಾಗ ಕೂಡಲೇ ಸಂಬಂಧಿತ ಸರ್ಕಾರಿ ಅಧಿಕಾರಿಗಳಿಗೆ ತಿಳಿಸತಕ್ಕದ್ದು ಮತ್ತು ಮಾಲಿನ್ಯವನ್ನು ಪರಿಹರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.
4. ಕೇಂದ್ರ ಸರ್ಕಾರದಿಂದ ನಿಯುಕ್ತಿಗೊಂಡ ಅಧಿಕಾರಿಗಳು ಯಾವುದೇ ಕಾರ್ಖಾನೆಯನ್ನು ತಪಾಸಣೆಗೊಳಪಡಿಸಿ, ಕಾರ್ಖಾನೆಯ ಯಾವುದೇ ಸಾಮಾಗ್ರಿ, ಕಾರ್ಖಾನೆ ಘಟಕ, ದಾಖಲೆಗಳು ಅಥವಾ ಸಾಮಾಗ್ರಿಗಳನ್ನು ವಶಪಡಿಸಿಕೊಳ್ಳಬಹುದು.

### ಕೇಂದ್ರ ಸರಕಾರದ ಪರಿಸರ ಪ್ರಯೋಗಾಲಯಗಳ ರಚನೆ

ಕೇಂದ್ರ ಸರ್ಕಾರವು ರಾಜಪತ್ರ ಪ್ರಕಟನೆ ಮೂಲಕ

1. ಒಂದು ಅಥವಾ ಹೆಚ್ಚು ಪ್ರಯೋಗಾಲಯಗಳು, ಅಥವಾ ಪರಿಸರ ಪ್ರಯೋಗಾಲಯಗಳಾಗಿ ಸಂಸ್ಥೆಗಳನ್ನು ಸ್ಥಾಪಿಸಿ ಈ ಕಾನೂನಿನನ್ವಯ

ಅಗತ್ಯವಿರುವ ಪರಿಸರ ಪ್ರಯೋಗಾಲಯದ ಕೆಲಸಗಳನ್ನು ಕಾರ್ಯರೂಪಗೊಳಿಸಬಹುದು.

2. ಮೇಲ್ಕಾಣಿಸಿದ ಪ್ರಯೋಗಾಲಯಗಳಿಗೆ, ಗಾಳಿ, ನೀರು, ಮಣ್ಣು ಮತ್ತು ಇತರ ಪದಾರ್ಥಗಳ ತಪಾಸಣೆಗೆ / ಪರೀಕ್ಷೆಗೆ ಕಳುಹಿಸಬಹುದು.

3. ಕೇಂದ್ರ ಸರಕಾರ ಪರಿಸರ ಪ್ರಯೋಗಾಲಯಗಳಿಗೆ ಗಾಳಿ, ನೀರು, ಮಣ್ಣು ಮತ್ತು ಇತರ ಪದಾರ್ಥಗಳ ಮಾದರಿಯ ತಪಾಸಣೆಗಾಗಿ ಗೊತ್ತುಪಡಿಸಿದ ವಿಧ್ಯಾಭ್ಯಾಸವಿರುವ ಸರಕಾರಿ ಅನಾಲಿಸ್ಟ್‌ಗಳ ನೇಮಕ ಮಾಡಲಾಗುತ್ತದೆ. ಈ ಅನಾಲಿಸ್ಟ್‌ಗಳು ತಯಾರಿಸಿದ ವರದಿಯನ್ನು ಸಾಕ್ಷ್ಯವಾಗಿ ಸ್ವೀಕರಿಸಲಾಗುತ್ತದೆ.

## ಅಪರಾಧಗಳಿಗೆ ಶಿಕ್ಷೆ

ಈ ಕಾನೂನಿನನ್ವಯ ಮಾಡಿದ ಆದೇಶಗಳನ್ನು ಅಥವಾ ನಿರ್ದೇಶಗಳನ್ನು ಪಾಲಿಸಲು ವಿಫಲರಾದ ಅಥವಾ ಇವುಗಳನ್ನು ಉಲ್ಲಂಘಿಸಿದವರಿಗೆ 5 ವರ್ಷಗಳ ಜೈಲು ಶಿಕ್ಷೆ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಗಳಿಂದ ಶಿಕ್ಷಿಸಬಹುದು. ಈ ಕಾನೂನಿನ ಆದೇಶಗಳ ಉಲ್ಲಂಘನೆ ಒಂದು ವರ್ಷಕ್ಕೂ ಹೆಚ್ಚಿನ ಅವಧಿಗೆ ಮುಂದುವರಿದಲ್ಲಿ 7 ವರ್ಷ ಜೈಲು ಶಿಕ್ಷೆಯಿಂದ ದಂಡಿಸಬಹುದು.

# ಪಾಲಕ ಮತ್ತು ರಕ್ಷಕ ಕಾನೂನು

18 ವರ್ಷ ಪ್ರಾಯ ಆಗದವನನ್ನು ಈ ಕಾನೂನಿಂತೆ ಮೈನರ್ ಅಥವಾ ಅಪ್ರಾಪ್ತ ವಯಸ್ಕನೆಂದು ಕರೆಯಬಹುದು. ಅಪ್ರಾಪ್ತ ವಯಸ್ಕನ ಜೀವದ ಮತ್ತು ಆಸ್ತಿಯ ರಕ್ಷಣೆ ಮಾಡುವವನು ಈ ಕಾನೂನಿನಂತೆ ಅವರ ಪಾಲಕ ಎನ್ನಬಹುದು. ರಕ್ಷಕನೆಂದರೆ ಅಪ್ರಾಪ್ತನ ಜೀವದ ಮತ್ತು ಆಸ್ತಿಯ ಪಾಲಕನಾಗಿದ್ದಾನೆ.

ಅಪ್ರಾಪ್ತ ವಯಸ್ಕನ ತಂದೆ–ತಾಯಿ ಜೀವಂತವಾಗಿಲ್ಲದಿದ್ದಲ್ಲಿ ಅಂತಹ ಅಪ್ರಾಪ್ತ ವಯಸ್ಕನ ಪಾಲನೆಗೆ ಅವನ ಜೀವದ ಮತ್ತು ಆಸ್ತಿಯ ರಕ್ಷಣೆಗೆ ಪಾಲಕ ಮತ್ತು ರಕ್ಷಕನ ನೇಮಕ ಮಾಡಲು ಅಪ್ರಾಪ್ತ ವಯಸ್ಕನು ವಾಸಿಸುವ ಪ್ರದೇಶದ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬೇಕು.

ಅರ್ಜಿಯಲ್ಲಿ ಬರೆಯಬೇಕಾದ ವಿಷಯಗಳ ವಿವರ ಈ ಕೆಳಗಿನಂತಿದೆ.

1. ಅಪ್ರಾಪ್ತ ವಯಸ್ಕನ ಹೆಸರು, ಲಿಂಗ, ಹುಟ್ಟಿದ ತಾರೀಕು, ವಾಸಿಸುವ ಸ್ಥಳ
2. ಅಪ್ರಾಪ್ತ ವಯಸ್ಕಳು ಹುಡುಗಿಯಾಗಿದ್ದಲ್ಲಿ ಅವಳಿಗೆ ಮದುವೆಯಾಗಿದೆಯೋ? ಆಗಿದ್ದಲ್ಲಿ ಅವಳ ಗಂಡನ ಹೆಸರು (ಅಪ್ರಾಪ್ತ ವಯಸ್ಕಳ ಮದುವೆ ಕಾನೂನುಬದ್ಧ ಅಪರಾಧವಾಗಿದೆ).
3. ಅಪ್ರಾಪ್ತ ವಯಸ್ಕರ ಆಸ್ತಿ/ಭೂಮಿ ಇರುವ ಪ್ರದೇಶ ಅದರ ಅಂದಾಜು ಮೌಲ್ಯ
4. ಅಪ್ರಾಪ್ತ ವಯಸ್ಕ ಮತ್ತು ಅಸ್ತಿಯು  ಯಾರ ಪಾಲನೆ ಮತ್ತು ರಕ್ಷಣೆಯಲ್ಲಿದೆ ಅವರ ಹೆಸರು ಮತ್ತು ವಿಳಾಸ
5. ಅಪ್ರಾಪ್ತ ವಯಸ್ಕರಿಗೆ ಹತ್ತಿರದ ಸಂಬಂಧಿಗಳು ಯಾರು ಅವರ ವಿಳಾಸ
6. ನ್ಯಾಯಾಲಯದಿಂದ ಪಾಲಕ ಆಗಲು ಅಪೇಕ್ಷಿಸುವವರು ಕೇವಲ ಅಪ್ರಾಪ್ತ ವಯಸ್ಕರ ಜೀವದ ರಕ್ಷಣೆಗೆ ಅಥವಾ ಆಸ್ತಿಯ ರಕ್ಷಣೆಗೆ ಅಥವಾ ಎರಡೂ ವಿಷಯಗಳಿಗೆ ಎಂದು ನಮೂದಿಸುವುದು.
7. ಈ ಅರ್ಜಿ ದಾಖಲು ಮಾಡುವುದಕ್ಕಿಂತ ಮೊದಲು ಇನ್ಯಾವುದೇ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಲಾಗಿದೆಯೇ? ಮಾಡಿದ್ದಲಿ ಅದರ ಫಲಿತಾಂಶ ಏನಾಗಿದೆ?

8. ಅರ್ಜಿ ದಾಖಲಿಸುವುದು ಅಪ್ರಾಪ್ತ ವಯಸ್ಕನ ಜೀವದ ಮತ್ತು ಆಸ್ತಿಯ ಪಾಲಕ/ ರಕ್ಷಕನನ್ನು ನೇಮಿಸಲು ಅಥವಾ ಘೋಷಿಸಲು.
9. ಪಾಲಕ ಮತ್ತು ರಕ್ಷಕನಾಗಿ ನೇಮಕ ಮಾಡಲು ಅರ್ಜಿ ದಾಖಲಿಸಿದ ವ್ಯಕ್ತಿಯ ವಿದ್ಯಾರ್ಹತೆ
10. ಯಾವ ಆಧಾರದಲ್ಲಿ / ಕಾರಣಕ್ಕಾಗಿ ಪಾಲಕ ಮತ್ತು ರಕ್ಷಕನಾಗಿ ನೇಮಿಸಬೇಕು.
11. ಯಾವ ಕಾರಣಕ್ಕಾಗಿ ಅರ್ಜಿ ದಾಖಲಿಸಿದೆ
12. ಮೇಲ್ಕಾಣಿಸಿದ ವಿಷಯಗಳಲ್ಲದೆ ಬೇರೆ ಯಾವುದೇ ವಿಷಯಗಳಿದ್ದಲ್ಲಿ ಅರ್ಜಿಯಲ್ಲಿ ನಮೂದಿಸುವುದು.

## ನ್ಯಾಯಾಲಯದಿಂದ ಅರ್ಜಿ ಸ್ವೀಕ್ರತಿಯ ಕ್ರಮ

ಪಾಲಕ ಮತ್ತು ರಕ್ಷಕನಾಗಿ ನೇಮಕ ಮಾಡಲು ನೀಡಿದ ಅರ್ಜಿಯಲ್ಲಿ ದಾಖಲಿಸಿದ ವಿಷಯಗಳು ಸೂಕ್ತವಾಗಿದೆ ಮತ್ತು ಅರ್ಜಿಯನ್ನು ಸ್ವೀಕರಿಸಬಹುದು ಎಂದು ನ್ಯಾಯಲಯಕ್ಕೆ ಮನವರಿಕೆ ಆದರೆ ಮೊಕದ್ದಮೆಯ ಚುನಾವಣೆಗೆ ದಿನಾಂಕ ನಿಗಧಿಪಡಿಸಿ ನೋಟೀಸಿ ಜ್ಯಾರಿಗೊಳಿಸಲಾಗುತ್ತದೆ.

## ಮಧ್ಯಂತರ ಆದೇಶ ಮತ್ತು ಸ್ವಾಧೀನತೆ:–

ಅ. ನ್ಯಾಯಲಯದಲ್ಲಿ ಅರ್ಜಿ ದಾಖಲಿಸಿದ ವ್ಯಕ್ತಿಯ ಸ್ವಾಧೀನತೆಯಲ್ಲಿ ಅಪ್ರಾಪ್ತ ವಯಸ್ಕನು ಇದ್ದಲ್ಲಿ ಅವನನ್ನು ನ್ಯಾಯಾಲಯದಲ್ಲಿ ಹಾಜರು ಮಾಡಲು ಆದೇಶ ಅಥವಾ ತಾತ್ಕಾಲಿಕವಾಗಿ ಅಪ್ರಾಪ್ತ ವಯಸ್ಕನನ್ನು ಮತ್ತು ಅವನ ಆಸ್ತಿಯ ಸ್ವಾಧೀನತೆಗೆ ನ್ಯಾಯಾಲಯ ಆದೇಶ ನೀಡಬಹುದು.

ಆ. ಅಪ್ರಾಪ್ತ ವಯಸ್ಕ ಹುಡುಗಿಯಾಗಿದ್ದಲ್ಲಿ ಅವಳ ಸಂಸ್ಕ್ರತಿಗನುಗುಣವಾಗಿ ನ್ಯಾಯಾಲಯದಲ್ಲಿ ಹಾಜರು ಮಾಡಲು ತಿಳಿಸಬಹುದು.

## ತನಿಖೆ:–

ನಿಗಧಿಪದಿಸಿದ ದಿನಾಂಕ ನ್ಯಾಯಾಲಯ ಅರ್ಜಿಯ ವಿಚಾರಣೆ ನಡೆಸಿ ಅರ್ಜಿಗೆ ಪೂರಕವಾಗಿ ಅಥವಾ ವಿರುದ್ಧವಾಗಿ ನೀಡಿರುವ ದಾಖಲೆಗಳನ್ನು ಸ್ವೀಕರಿಸುತ್ತದೆ.

## ಪಾಲಕ/ರಕ್ಷಕರ ನೇಮಕಾತಿ

1. ಅಪ್ರಾಪ್ತ ವಯಸ್ಕನ ಕಲ್ಯಾಣಕ್ಕಾಗಿ ಅವನ ವಯಸ್ಸು, ಲಿಂಗ, ಧರ್ಮ, ಪಾಲಕ/ ರಕ್ಷಕನಾಗಿ ನೇಮಿಸಲು ಅಪೇಕ್ಷಿಸುವವರು ಹತ್ತಿರದ ಸಂಬಂಧಿಯೋ ಅಥವಾ ಮೃತಪಟ್ಟ ಹೆತ್ತವರ ಅಪೇಕ್ಷೆ ಏನಾಗಿತ್ತು ಇತ್ಯಾದಿ., ವಿಷಯಗಳನ್ನು ನ್ಯಾಯಾಲಯ ಪರಿಗಣಿಸಬೇಕು.
2. ಅಪ್ರಾಪ್ತ ವಯಸ್ಕನು ಆಲೋಚನೆ / ಬುದ್ಧಿಮತ್ತೆ ಮಾಡುವ ಪ್ರಾಯದವನಾಗಿದ್ದಲ್ಲಿ ಅವನ ಅಪೇಕ್ಷೆ ಏನು ಎಂಬ ವಿಷಯಕ್ಕೆ ನ್ಯಾಯಾಲಯ ಪ್ರಾಶಸ್ತ್ಯ ನೀಡಬೇಕು.
3. ಅಪ್ರಾಪ್ತ ವಯಸ್ಕನ ಇಚ್ಛೆಗೆ ವಿರುದ್ಧವಾಗಿ ನ್ಯಾಯಾಲಯ ರಕ್ಷಕರ ನೇಮಕಾತಿ ಮಾಡಬಾರದು.
4. ಅಪ್ರಾಪ್ತ ವಯಸ್ಕನ ಜೀವಕ್ಕೆ ಮತ್ತು ಅವರ ಅಸ್ತಿಗೆ ಪ್ರತ್ಯೇಕ ಪಾಲಕ / ರಕ್ಷಕರ ನೇಮಕಾತಿ ಮಾಡಬಹುದು.
5. ಅಪ್ರಾಪ್ತ ವಯಸ್ಕನಿಗೆ ತುಂಬಾ ಆಸ್ತಿಪಾಸ್ತಿಗಳು ಇದ್ದಲ್ಲಿ ನ್ಯಾಯಾಲಕ್ಕೆ ಸೂಕ್ತವೆಂದು ಮನದಟ್ಟಾದಲ್ಲಿ ಯಾವುದಾದರೂ ಒಂದು ಅಥವಾ ಹೆಚ್ಚಿನ ಆಸ್ತಿಗಳಿಗೆ ಬೇರೆಯೇ ರಕ್ಷಕನನ್ನು ನೇಮಿಸಬಹುದು.
6. ಅಪ್ರಾಪ್ತ ವಯಸ್ಕನ ತಂದೆ ಜೀವಂತವಿದ್ದು ರಕ್ಷಕನಾಗಿ ನೇಮಕ ಮಾಡಲು ಸೂಕ್ತ ವ್ಯಕ್ತಿಯಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಲ್ಲಿ ರಕ್ಷಕರಾಗಿ ನೇಮಕ ಮಾಡಲಾಗದು.

## ಪಾಲಕ / ರಕ್ಷಕರ ಕರ್ತವ್ಯಗಳು, ಹಕ್ಕುಗಳು ಮತ್ತು ಹೊಣೆಗಾರಿಕೆ

1. ನ್ಯಾಸಪತ್ರ ಅಥವಾ ಇಚ್ಛಾಪತ್ರ ಮುಖೇನ ನೇಮಕವಾದ ರಕ್ಷಕ ಈ ನೇಮಕದಿಂದಾಗಿ ಲಾಭ ಮಾಡಲಾಗದು.
2. ಅಪ್ರಾಪ್ತ ವಯಸ್ಕನ ಸ್ವಾಧೀನತೆ ಹೊಂದಿರುವವನು ಅವನಿಗೆ ಆಧಾರವಾಗಿದ್ದು ಅವನ ವಿಧ್ಯಾಭ್ಯಾಸ, ಆರೋಗ್ಯ ಮತ್ತು ಇತರ ವಿಷಯಗಳಲ್ಲಿ ಕಾನೂನು ರೀತ್ಯಾ ನಡೆಯತಕ್ಕದ್ದು.
3. ಅಪ್ರಾಪ್ತ ವಯಸ್ಕನ ಆಸ್ತಿಯ ರಕ್ಷಕನು ಜಾಗರೂಕತೆಯಿಂದ ವಿವೇಕವುಳ್ಳ ವ್ಯಕ್ತಿಯಂತೆ ತನ್ನ ಸ್ವಂತ ಆಸ್ತಿಯನ್ನು ಕಾಪಾಡುವ ರೀತಿಯಲ್ಲಿ ವ್ಯವಹರಿಸಬೇಕು

4. ನ್ಯಾಯಾಲಯದಿಂದ ನೇಮಕವಾದ ಪಾಲಕ /ರಕ್ಷಕರು ನ್ಯಾಯಾಲಯದ ಅನುಮತಿ ಇಲ್ಲದೆ ಆಸ್ತಿಯನ್ನು ಅಡವು ಇಡುವುದು, ವಿಕ್ರಯಿಸುವುದು, ದಾನ ನೀಡುವುದು ನಿಷೇಧಿಸಿದೆ. ಅದೇ ರೀತಿ ಆಸ್ತಿಯ ಯಾವುದೇ ಅಂಶವನ್ನು ಅಪ್ರಾಪ್ತ ವಯಸ್ಕನು ಪ್ರಾಪ್ತ ವಯಸ್ಕನಾಗುವ ಅವಧಿಗಿಂತ ಜಾಸ್ತಿ ಅವಧಿಗೆ ಗೇಣಿಗೆ ಕೊಡುವುದು ನಿಷೇಧಿಸಿದೆ.
5. ಆಸ್ತಿಯನ್ನು ಮಾರಾಟ ಮಾಡಲು ನ್ಯಾಯಾಲಯದ ಅನುಮತಿಯಿಂದ ಹರಾಜಿನಲ್ಲಿ ಹೆಚ್ಚಿನ ಹಣಕ್ಕೆ ಖರೀದಿಸುವವನಿಗೆ ನ್ಯಾಯಾಲಯ ನೇಮಿಸಿದ ಅಧಿಕಾರಿಯ ಸಮ್ಮುಖದಲ್ಲಿ ಮತ್ತು ಸೂಚಿತ ಸ್ಥಳದಲ್ಲಿ ನಡೆಸಬಹುದು.
6. ನ್ಯಾಯಾಲಯದಿಂದ ನೇಮಕವಾದ ಪಾಲಕ /ರಕ್ಷಕರು ನ್ಯಾಯಾಲಯದಲ್ಲಿ ಅರ್ಜಿ ನೀಡಿ ಅಪ್ರಾಪ್ತ ವಯಸ್ಕನ ಆಸ್ತಿಯ ಜವಾಬ್ದಾರಿ ಹೇಗೆ ವಹಿಸುವುದು ಮತ್ತು ಅದರ ಆಡಳಿತ ಹೇಗೆ ಮಾಡುವುದು ಎಂಬ ವಿಷಯಗಳಲ್ಲಿ ಮಾರ್ಗದರ್ಶನ ಕೇಳಬಹುದು.
7. ಜಿಲ್ಲಾಧಿಕಾರಿಯನ್ನು ಹೊರತುಪಡಿಸಿ ನ್ಯಾಯಾಲಯದಿಂದ ನೇಮಕವಾದ ಪಾಲಕ /ರಕ್ಷಕರು ಸೂಚಿತ ರೀತಿಯಲ್ಲಿ ನಷ್ಟಭರ್ತಿ ಬಂಧಪತ್ರವನ್ನು ಜಾಮೀನುದಾರರಲ್ಲದೆ ಅಥವಾ ಜಾಮಿನುದಾರರ ಸಮ್ಮುಖ ಅಪ್ರಾಪ್ತ ವಯಸ್ಕನ ಆಸ್ತಿಯ ಲೆಕ್ಕ ಕೊಡುತ್ತೇನೆಂದು ಮುಚ್ಚಳಿಕೆ ಕೊಡಬೇಕು.
8. ನ್ಯಾಯಾಲಯ ಅಗತ್ಯವಿದ್ದಲ್ಲಿ 6 ತಿಂಗಳೊಳಗೆ ಅಪ್ರಾಪ್ತ ವಯಸ್ಕನ ಆಸ್ತಿ, ಹಣಕಾಸು ಮತ್ತಿತರ ವಿಷಯಗಳು ಹಾಗೂ ಬಾಕಿಯಿರುವ ಸಾಲಗಳ ವಿವರಣೆಯನ್ನು ನೀಡಬೇಕು.

## ಪಾಲಕ / ರಕ್ಷಕನನ್ನು ಅವರ ಸ್ಥಾನದಿಂದ ತೆಗೆದು ಹಾಕುವುದು

ಆಸಕ್ತಿಯುಳ್ಳ ಯಾವುದೇ ವ್ಯಕ್ತಿ ಅರ್ಜಿ ದಾಖಲಿಸಿದರೆ ಅಥವಾ ನ್ಯಾಯಾಲಯದ ಇಚ್ಛೆಯ ಮೇರೆಗೆ, ನ್ಯಾಯಾಲಯದಿಂದ ನೇಮಕವಾದ ಅಥವಾ ಇಚ್ಛಾಪತ್ರದ ಮುಖೇನ ನೇಮಕವಾದ ರಕ್ಷಕ / ಪಾಲಕನನ್ನು ಈ ಕೆಳಗಿನ ಕಾರಣಗಳಿಗೆ ತೆಗೆದು ಹಾಕಬಹುದು.

1. ನ್ಯಾಸದ ದುರುಪಯೋಗ ಮಾಡಿದಾಗ
2. ಸತತವಾಗಿ ನ್ಯಾಸದ ಕರ್ತವ್ಯವನ್ನು ನಿರ್ವಹಿಸಲು ವಿಫಲರಾದಲ್ಲಿ

3. ನ್ಯಾಸದ ಕರ್ತವ್ಯದಲ್ಲಿ ಸಾಮರ್ಥ್ಯ ಇಲ್ಲದಿದ್ದಲ್ಲಿ
4. ಅಪ್ರಾಪ್ತ ವಯಸ್ಕನಿಗೆ ಸರಿಯಾಗಿ ಉಪಚರಿಸದೆ ಅಲಕ್ಷಿಸುವುದು
5. ನ್ಯಾಯಾಲಯದಿಂದ ಅಪರಾಧಿ ಎಂದು ಘೋಷಿಸಿದ ಪರಿಣಾಮ ಪಾಲಕ / ರಕ್ಷಕನಾಗಲು ಅವರ ವರ್ತನೆಯಲ್ಲಿ ನ್ಯೂನ್ಯತೆ ಇರುವುದು.
6. ನ್ಯಾಯಾಲಯದ ಪರಿಮಿತಿಯಲ್ಲಿ ವಾಸಿಸದೆ ಇರುವುದು.

**ಪಾಲಕ / ರಕ್ಷಕನ ಅಧಿಕಾರದ ಸಮಾಪ್ತಿ**

1. ಪಾಲಕರ ನಿಧನದಿಂದ, ಅವರನ್ನು ತೆಗೆದು ಹಾಕಿದಲ್ಲಿ ಅಥವಾ ಹೊಣೆಯ ವಿಮೋಚನೆಯಿಂದ
2. ನ್ಯಾಯಾಲಯ ಅಪ್ರಾಪ್ತ ವಯಸ್ಕನ ಮೇಲ್ವಿಚಾರಣೆ ಮಾಡುವಾಗ
3. ಅಪ್ರಾಪ್ತ ವಯಸ್ಕನು ಪ್ರಾಪ್ತ ವಯಸ್ಕನಾದಾಗ
4. ಅಪ್ರಾಪ್ತ ವಯಸ್ಕ ಹುಡುಗಿ ಅವಳ ಮದುವೆಯಾಗಿ ಗಂಡನಾದವನು ಪಾಲಕ / ರಕ್ಷಕನಾಗಲು ಅನರ್ಹನಾದಾಗ ಅಥವಾ ನ್ಯಾಯಾಲಯವು ಗಂಡನು ರಕ್ಷಕನಾಗಲು ಅನರ್ಹ / ಅಯೋಗ್ಯನೆಂದು ಪರಿಗಣಿಸಿದಾಗ
5. ಅಪ್ರಾಪ್ತ ವಯಸ್ಕನ ತಂದೆಯೇ ರಕ್ಷಕನಾಗಿರುವಾಗ ನ್ಯಾಯಾಲಯವು ತಂದೆ ಅನರ್ಹ/ ಅಯೋಗ್ಯನೆಂದು ಪರಿಗಣಿಸಿದಾಗ

**ಹೈಕೋರ್ಟನಲ್ಲಿ ಅಪೀಲು / ಮೇಲ್ಮನವಿ ದಾಖಲಿಸಲು ಕಾರಣಗಳು**

1. ನ್ಯಾಯಾಲಯ ರಕ್ಷಕನನ್ನು ನೇಮಿಸಲು ಅಥವಾ ಘೋಷಿಸಲು ನಿರಾಕರಿಸಿದಾಗ
2. ರಕ್ಷಕನಾಗಲು ದಾಖಲಿಸಿದ ಅರ್ಜಿಯನ್ನು ವಾಪಸ್ಸು ನೀಡಿದಾಗ
3. ಅಪ್ರಾಪ್ತ ವಯಸ್ಕನ ಸ್ವಾಧೀನತೆ ಮರಳಿ ನೀಡಲು ನಿರಾಕರಿಸಿದಾಗ
4. ಅಪ್ರಾಪ್ತ ವಯಸ್ಕನನ್ನು ನ್ಯಾಯಾಲಯದ ಪರಿಮಿತಿಯಿಂದ ಹೊರಗೆ ಹೋಗಲು ಷರತ್ತುಗಳನ್ನು ಹಾಕಿದಾಗ
5. ಪಾಲಕ / ರಕ್ಷಕನ ಅಧಿಕಾರವನ್ನು ಮೊಟಕುಗೊಳಿಸಿದಾಗ ಅಥವಾ ವಿಸ್ತರಿಸಿದಾಗ
6. ಪಾಲಕ / ರಕ್ಷಕನನ್ನು ತೆಗೆದು ಹಾಕಿದಾಗ ಅಥವಾ ತೆಗೆಯಲು ನಿರಾಕರಿಸಿದಾಗ
7. ದಂಡ ಹಾಕಿದಾಗ ಈ ಮೇಲ್ಕಾಣಿಸಿದ ಸಂದರ್ಭಗಳಲ್ಲಿ ಕೌಟುಂಬಿಕ ನ್ಯಾಯಾಲಯದ ಆದೇಶದ ವಿರುದ್ಧ ಹೈಕೋರ್ಟನಲ್ಲಿ ಮೇಲ್ಮನವಿ ಸಲ್ಲಿಸಬಹುದು.

# ಕಾನೂನು ರೀತ್ಯಾ ಹೆಸರು ಬದಲಾವಣೆ

ಕೆಲವು ವ್ಯಕ್ತಿಗಳಿಗೆ ತಮ್ಮ ಹೆಸರು ಬದಲಾವಣೆ ಮಾಡಬೇಕೆಂಬ ಆಶೆ ಅಥವಾ ಅವಶ್ಯಕತೆ ಇರುತ್ತದೆ. ಆ ಸಂದರ್ಭದಲ್ಲಿ ಏನು ಮಾಡಬೇಕು? ಯಾವ ಕಾನೂನು ಪ್ರಕಾರ ಹೆಸರು ಬದಲಾವಣೆ ಮಾಡಬಹುದು ಎಂಬ ಮಾಹಿತಿ ಜನಸಾಮಾನ್ಯರಿಗೆ ಇರುವುದಿಲ್ಲ. ಹೆಚ್ಚಿನ ಮಕ್ಕಳ ಹಿರಿಯರಿಗೆ ತಮ್ಮ ಮಕ್ಕಳ ಹೆಸರು ತಿದ್ದುಪಡಿ ಮಾಡಲು ಏನೂ ಮಾಡುವ ಅವಶ್ಯಕತೆಯಿಲ್ಲ ಎಂಬ ಸುಳ್ಳು ವಿಶ್ವಾಸದಿಂದ ಇರುತ್ತಾರೆ. ಈ ವಿಷಯದಲ್ಲಿ ಕಾನೂನು ಇಲ್ಲದಿದ್ದರೂ ಸಾರ್ವಜನಿಕರ ಒಳಿತಿಗಾಗಿ ಹೆಸರು ಬದಲಾವಣೆ ಮಾಡಲು ನಿಯಮಗಳನ್ನು ರೂಪಿಸಲಾಗಿದೆ. ಶಾಲೆಯ ವಿದ್ಯಾರ್ಥಿಗಳಿಗೆ, ಕೆಲಸದಲ್ಲಿರುವವರಿಗೆ, ರಾಜ್ಯ ಅಥವಾ ಕೇಂದ್ರ ಸರಕಾರಿ ನೌಕರರಿಗೆ, ಕೆಲವು ಪ್ರಾಧಿಕಾರಗಳು ಅವರ ನಿಯಮಗಳನ್ನು ರಚಿಸಿರುತ್ತಾರೆ.

ಮಗು ಜನಿಸುವಾಗ ಹೆಸರಿರಿಸಿಕೊಂಡೇ ಹುಟ್ಟುವುದಿಲ್ಲ. ಆದರೆ ಗಂಡು ಅಥವಾ ಹೆಣ್ಣು ಮಗುವಾಗಿ ಜನಿಸುತ್ತದೆ. ಜನನ ಮತ್ತು ಮರಣ ಕಾನೂನು ಪ್ರಕಾರ ಹುಟ್ಟಿದ ಪ್ರತಿಯೊಂದು ಮಗುವಿನ ಜನನದ ನೋಂದಣಿಯನ್ನು ಸ್ಥಳೀಯ ಜನನ ಮತ್ತು ಮರಣ ನೋಂದಣಾಧಿಕಾರಿ ಕಚೇರಿಯಲ್ಲಿ ಕಡ್ಡಾಯವಾಗಿ ಮಾಡತಕ್ಕದ್ದು. ಹುಟ್ಟಿದ ಪ್ರತಿಯೊಂದು ಮಗುವಿನ ಹೆಸರು ಒಂದು ವಾರದೊಳಗೆ ಅಥವಾ ಒಂದು ತಿಂಗಳಲ್ಲಿ ಜನನ ಮತ್ತು ಮರಣ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಆಗುತ್ತದೆ. ತಮ್ಮ ವಶದಲ್ಲಿರುವ ನೋಂದಣಿ ಪುಸ್ತಕದಲ್ಲಿ ಹೆಸರಿನ ದಾಖಲಾತಿಯು ತಪ್ಪಾಗಿ ನಮೂದಿಸಿದೆಯೆಂದು ಜನನ ಮತ್ತು ಮರಣ ನೋಂದಣಾಧಿಕಾರಿಗೆ ಮನದಟ್ಟಾದಲ್ಲಿ ಅಂತಹ ತಪ್ಪುಗಳನ್ನು ರದ್ದುಪಡಿಸಿ ಸರಿಯಾದ ದಾಖಲಾತಿಯನ್ನು ಪುಸ್ತಕದ ಮಾರ್ಜಿನ್‌ನಲ್ಲಿ ಬರೆದು ಸಹಿ ಮಾಡಿ, ತಾಕೀಖು ನಮೂದಿಸಿ ತಿದ್ದುಪಡಿ ಮಾಡುತ್ತಾರೆ. ಕರ್ನಾಟಕ ಸರಕಾರದ ಆದೇಶ ಸಂಖ್ಯೆ:2854/12–13 ದಿನಾಂಕ 01–02–2013 ರಂತೆ ಜನನ ಮತ್ತು ಮರಣ ನೋಂದಣಾಧಿಕಾರಿಯವರು ಹೆಸರಿನ ದಾಖಲಾತಿಯ ತಪ್ಪುಗಳನ್ನು ನೋಂದಣಿ ಪುಸ್ತಕದಲ್ಲಿ ಒಂದು ಬಾರಿ ಮಾತ್ರ ತಿದ್ದುಪಡಿ ಮಾಡಬಹುದು.

ಮಗು ಅಪ್ರಾಪ್ತ ವಯಸ್ಸು ಮುಗಿಯುವ ವರೆಗೆ ತನ್ನ ತಂದೆ–ತಾಯಿ ಅಥವಾ ಪಾಲಕ/ರಕ್ಷಕರ ಆಧೀನದಲ್ಲಿರುವುದರಿಂದ ಇವರು ಮಗುವಿನ ಹೆಸರು ಬದಲಾವಣೆ ಮಾಡುವ ಬಗ್ಗೆ ತೀರ್ಮಾನಿಸಬೇಕು. ಮೆಜಾರಿಟಿ ಕಾನೂನು ಪ್ರಕಾರ ಮಗುವಿಗೆ 18 ವರ್ಷ ಮತ್ತು ಕೆಲವು ವಿಷಯಗಳಲ್ಲಿ 21 ವರ್ಷ ವಯಸ್ಸು ಆಗುವ ವರೆಗೆ ಆ ಮಗು ನ್ಯಾಯಾಲಯದ ಆದೇಶದ ಮೇರೆಗೆ ಪಾಲಕ / ರಕ್ಷಕರ ಸ್ವಾಧೀನದಲ್ಲಿದ್ದರೆ

ತದನಂತರ ಆ ವ್ಯಕ್ತಿಯು ಸ್ವಂತ ನಿರ್ಧಾರ ತೆಗೆದುಕೊಳ್ಳಬಹುದು. ಬೇರೆ ವಿಷಯಗಳಲ್ಲಿ ಪ್ರಾಪ್ತ ವಯಸ್ಕನು ಅಥವಾ ಅವನ ತಂದೆ–ತಾಯಿ ಅಥವಾ ಪಾಲಕರು ರೂ.20/–ರ ಠಸೆ ಪೇಪರಿನಲ್ಲಿ ಶಾಲಾ ದಾಖಲಾತಿಯಲ್ಲಿ ನನ್ನ ಹೆಸರು 'ಅ' ಎಂದು ತಪ್ಪಾಗಿ ನಮೂದಿಸಲಾಗಿದೆ. ಜನನ–ಮರಣ ನೊಂದಣಾಧಿಕಾರಿ ನೀಡಿರುವ ಜನನ ಸರ್ಟಿಫಿಕೇಟ್‌ನಲ್ಲಿ 'ಬಿ' ಎಂದು ನಮೂದಿಸಲಾಗಿದೆ. ಆದುದರಿಂದ ಶಾಲಾ ದಾಖಲೆಗಳಲ್ಲಿ ನನ್ನ ಹೆಸರು 'ಬಿ' ಎಂದು ಬದಲಾವಣೆ ಮಾಡತಕ್ಕದ್ದು ಎಂಬುದಾಗಿ ಪ್ರಮಾಣ ಪತ್ರ ತಯಾರಿಸಿ ನೋಟರಿ ಪಬ್ಲಿಕ್ ಸಮ್ಮುಖದಲ್ಲಿ ಸಹಿ ಮಾಡಿಸಿ ಶಾಲಾ ಮುಖ್ಯಸ್ಥರಿಗೆ ನೀಡಿದಲ್ಲಿ ಹೆಸರು ಬದಲಾವಣೆ/ತಿದ್ದುಪಡಿ ಮಾಡುತ್ತಾರೆ. 17–2–1998 ರ ಕರ್ನಾಟಕ ಸರಕಾರದ ಆದೇಶದಂತೆ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಗಳ ಹೆಸರು, ತಂದೆ ಹೆಸರು, ದತ್ತು ತಂದೆಯ ಹೆಸರು, ಜಾತಿ ಮುಂತಾದವುಗಳ ಬದಲಾವಣೆ ಬಗ್ಗೆ ಯಾವುದೇ ಮಾರ್ಪಾಟುಗಳನ್ನು ಬಯಸುವವರು ನ್ಯಾಯಾಲಯದ ಡಿಕ್ರಿ ಪಡೆದಲ್ಲಿ ಮಾತ್ರ ಅಂತಹ ಅರ್ಜಿಗಳನ್ನು ಪರಿಗಣಿಸಿ ಸರಕಾರಕ್ಕೆ ಮುಂದಿನ ಆದೇಶಕ್ಕಾಗಿ ಸಲ್ಲಿಸಬಹುದು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಗೆ ನಿರ್ದೇಶಿಸಿರುತ್ತಾರೆ.

ಪ್ರಾಪ್ತ ವಯಸ್ಕರು ಹೆಸರು ಬದಲಾವಣೆ ಮಾಡಿಸಲು ಪಾಸ್‌ಪೋರ್ಟ್ ಅರ್ಜಿ ನೀಡುವಾಗ ಮೇಲೆ ತಿಳಿಸಿದಂತೆ ನೋಟರಿ ಪಬ್ಲಿಕ್ ಸಮ್ಮುಖದಲ್ಲಿ ಪ್ರಮಾಣ ಪತ್ರ ಸಹಿ ಮಾಡಿಸಿ ಹೆಸರು ಬದಲಾವಣೆ ಬಗ್ಗೆ ತಾವು ವಾಸ್ತವ್ಯವಿರುವ ಸ್ಥಳದಲ್ಲಿ ಅತ್ಯಧಿಕ ಪ್ರಸಾರದಲ್ಲಿರುವ ದೈನಿಕ ಮತ್ತು ರಾಷ್ಟ್ರೀಯ ವಾರ್ತಾ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿಸತಕ್ಕದ್ದು. ಸರಕಾರಿ ನೌಕರರನ್ನು ಹೊರತುಪಡಿಸಿ ಸಿವಿಲ್ ವ್ಯಕ್ತಿಗಳ ಹೆಸರು ಬದಲಾವಣೆ ಮಾಡಿಸಲು ರಾಜಪತ್ರದಲ್ಲಿ (ಗಜೆಟ್) ಪ್ರಕಟಣೆ ಮಾಡಿಸಲು ಅವಕಾಶವಿಲ್ಲ.

### ಯುನಿವರ್ಸಿಟಿಯ ವಿದ್ಯಾರ್ಥಿಗಳು ಹೆಸರು ಬದಲಾವಣೆ ಮಾಡಲು ನಿಯಮಗಳು

1. ವಿದ್ಯಾರ್ಥಿಯು ಕಲಿಯುತ್ತಿರುವ ಶಾಲಾ ಮುಖ್ಯಸ್ಥರಿಗೆ ಗೊತ್ತುಪಡಿಸಿದ ನಮೂನೆಯಲ್ಲಿ ಅರ್ಜಿಯನ್ನು

   ಅ) ರೂ. 20/– ಠಸೆ ಪೇಪರ್‌ನಲ್ಲಿ ಪ್ರಮಾಣ ಪತ್ರ ತಯಾರಿಸಿ ಯಾವ ಕಾರಣಕ್ಕಾಗಿ ಚಾಲ್ತಿಯಲ್ಲಿರುವ ಸರು ಬದಲಾವಣೆ ಮಾಡಲು ಕೋರುವುದು ಎಂಬ ಕಾರಣ ಬರೆದು ಮೇಜಿಸ್ಟ್ರೇಟ್ ಸಮ್ಮುಖದಲ್ಲಿ ಸಹಿ ಮಾಡತಕ್ಕದ್ದು.

ಆ) ಹೆಚ್ಚು ಪ್ರಸಾರವಿರುವ ವಾರ್ತಾ ಪತ್ರಿಕೆಯಲ್ಲಿ ವಿದ್ಯಾರ್ಥಿಯು ಅವರ ಸ್ವಂತ ಖರ್ಚಿನಲ್ಲಿ ಹೆಸರು ಬದಲಾವಣೆ ಬಗ್ಗೆ ಪ್ರಕಟಣೆ ಮಾಡುವುದು.

ಇ) ಅಪ್ರಾಪ್ತ ವಯಸ್ಕನಾದಲ್ಲಿ ಅವನ ಪೋಷಕರ ಅಥವಾ ಪಾಲಕರ ಒಪ್ಪಿಗೆ ಪತ್ರ

ಈ) ರೂ.25/–ನ್ನು ಯುನಿವರ್ಸಿಟಿಯ ಫಂಡ್‌ಗೆಂದು ಸ್ಟೇಟ್ ಬೇಂಕ್ ಆಫ್ ಇಂಡಿಯಾದಲ್ಲಿ ಪಾವತಿಸಿ ಅದರ ರಶೀದಿ ಮತ್ತು ಮೇಲೆ ತಿಳಿಸಿದ ಎಲ್ಲಾ ದಾಖಲೆಗಳನ್ನು ಅರ್ಜಿಯೊಂದಿಗೆ ಲಗ್ತೀಕರಿಸುವುದು.

2. ಮೇಲ್ಕಾಣಿಸಿದ ದಾಖಲಾತಿಗಳೊಂದಿಗೆ ಅರ್ಜಿಯನ್ನು ಕಾಲೇಜಿನ ಮುಖ್ಯಸ್ಥರಿಗೆ ನೀಡಿದಲ್ಲಿ ಅದನ್ನು ಪರಿಶೀಲಿಸಿ ಸೂಕ್ತವೆಂದು ಕಂಡರೆ ಅದನ್ನು ತಮ್ಮ ಶಿಫಾರಸ್ಸು ಪತ್ರದೊಂದಿಗೆ ಅನುಮೋದನೆಗಾಗಿ ಯುನಿವರ್ಸಿಟಿಗೆ ಕಳುಹಿಸಿ ಕೊಡುತ್ತಾರೆ.

3. ಅಗತ್ಯವಿರುವ ತನಿಖೆಯನ್ನು ನಡೆಸಿ ಅಗತ್ಯವೆಂದು ಕಂಡಲ್ಲಿ ಯುನಿವರ್ಸಿಟಿಯು ಅರ್ಜಿದಾರನ ಹೆಸರು ಬದಲಾವಣೆಗೆ ಅನುಮತಿ ನೀಡುತ್ತದೆ. ಹೆಸರು ಬದಲಾವಣೆ ಮಾಡುವುದು ವಾಸ್ತವಿಕವಲ್ಲವೆಂದು ಯುನಿವರ್ಸಿಟಿಗೆ ಮನದಟ್ಟಾದಲ್ಲಿ ವಿದ್ಯಾರ್ಥಿಯ ಅರ್ಜಿಯನ್ನು ತಿರಸ್ಕರಿಸಬಹುದು.

4. ಹೆಸರು ಬದಲಾವಣೆಗೆ ಯುನಿವರ್ಸಿಟಿ ನೀಡಿರುವ ಅನುಮೋದನೆಯ ಆದೇಶವನ್ನು ವಿದ್ಯಾರ್ಥಿ ಕಲಿಯುತ್ತಿರುವ ಶಾಲಾ ಮುಖ್ಯಸ್ಥರಿಗೆ, ಯುನಿವರ್ಸಿಟಿಯ ಪರೀಕ್ಷೆಗಳ ಮೌಲೀಕರಣ ರಿಜಿಸ್ತ್ರಾರರಿಗೆ ಮತ್ತು ವಿದ್ಯಾರ್ಥಿಗೆ ಕಳುಹಿಸುತ್ತಾರೆ.

5. ಯುನಿವರ್ಸಿಟಿ ಹೆಸರು ಬದಲಾವಣೆಗೆ ಅನುಮೋದನೆ ನೀಡಿಲ್ಲವಾದಲ್ಲಿ ಆ ಬಗ್ಗೆ ಕಾರಣಗಳನ್ನು ವಿದ್ಯಾರ್ಥಿಗೆ ತಿಳಿಸಲಾಗುತ್ತದೆ.

6. ಯುನಿವರ್ಸಿಟಿಯ ಆಫೀಸಿನಲ್ಲಿ ಕಾದಿರಿಸಿದ ಒಂದು ರಿಜಿಸ್ಟರ್ / ಪುಸ್ತಕದಲ್ಲಿ ಹೆಸರು ಬದಲಾವಣೆ ಆದ ಬಗ್ಗೆ ನಮೂದಿಸುತ್ತಾರೆ.

7. ಹೆಸರು ಬದಲಾವಣೆ ಮಾಡಲು ಅಪೇಕ್ಷಿಸುವ ವಿದ್ಯಾರ್ಥಿಯು ಯುನಿವರ್ಸಿಟಿಗೆ ಸಂಬಧಪಟ್ಟ ಸಂಸ್ಥೆಯಲ್ಲಿ ಕಲಿಯುತ್ತಿದ್ದಲ್ಲಿ ಮಾತ್ರ ಅವರ ಅರ್ಜಿ ಸ್ವೀಕಾರ ಮಾಡುತ್ತಾರೆ.

8. ಯಾವುದೇ ಕಾರಣಗಳಿಗಾಗಲಿ ಒಂದಕ್ಕಿಂತ ಹೆಚ್ಚು ಬಾರಿ ಹೆಸರು ಬದಲಾವಣೆ ಮಾಡಲು ಅನುಮತಿ ದೊರಕುವುದಿಲ್ಲ.

## ಅರ್ಜಿಯ ನಮೂನೆ

1. ಯುನಿವರ್ಸಿಟಿಯಲ್ಲಿ ಪ್ರಸ್ತುತ ದಾಖಲಾಗಿರುವ ಹೆಸರು :
2. ವಾರ್ತಾ ಪತ್ರಿಕೆಯಲ್ಲಿ ಬದಲಾವಣೆ ಮಾಡಿರುವ ಹೆಸರು (ವಾರ್ತಾ ಪತ್ರಿಕೆಯ ಪುಟ ಸಂಖ್ಯೆ, ತಾರೀಕು ನಮೂದಿಸಿ ರಶೀದಿ ನಕಲು ಲಗ್ತೀಕರಿಸುವುದು) :
3. ಹೆಸರು ಬದಲಾವಣೆ ಮಾಡಲು ಇಚ್ಚಿಸುವ ಕಾರಣಗಳು ಜೊತೆಗೆ ಮೆಜಿಸ್ಟ್ರೇಟರಿಂದ ಧೃಡೀಕರಿಸಿದ ಪ್ರಮಾಣ ಪತ್ರ ಲಗ್ತೀಕರಿಸಿದೆಯೇ (ಅಪ್ರಾಪ್ತ ವಯಸ್ಕನಾದಲ್ಲಿ ಅವನ ಹೆತ್ತವರ ಅಥವಾ ಪಾಲಕರ ಒಪ್ಪಿಗೆ ಪತ್ರ ಲಗ್ತೀಕರಿಸುವುದು) :
4. ಕ್ರಿಸ್ತ ಶಕ ಪ್ರಕಾರ ಹುಟ್ಟಿದ ತಾರೀಕು ಮತ್ತು ಅಭ್ಯರ್ಥಿಯ ವಯಸ್ಸು :
5. ಕಾಲೇಜಿನ ಹೆಸರು, ತರಗತಿ ಮತ್ತು ಯಾವ ವರ್ಷದಲ್ಲಿ ವಿದ್ಯಾರ್ಥಿಯು ಕಲಿಯುತಿದ್ದಾರೆ? :
6. ಪರೀಕ್ಷೆ ಉತ್ತೀರ್ಣವಾದ ವರ್ಷ :
7. ನೊಂದಣಿ ಶುಲ್ಕ ರೂ.5/– ಬೇಂಕ್ ಹೆಸರು..

   ಯುನಿವರ್ಸಿಟಿ ನೋಟಿಫಿಕೇಶನ್ ಶುಲ್ಕ ರೂ.5/– ರಶೀದಿ ಸಂಖ್ಯೆ..
8. ವಿದ್ಯಾರ್ಥಿಯ ವಿಳಾಸ :

ಸ್ಥಳ :

ತಾರೀಕು: ವಿದ್ಯಾರ್ಥಿಯ ಸಹಿ

# ಮಾನಸಿಕ ಆರೋಗ್ಯ ಕಾಪಾಡುವ ಬಿಲ್ 2012

ಭಾರತೀಯ ದಂಡ ಕಾನೂನು ಪ್ರಕಾರ ಪ್ರಸ್ತುತ ಆತ್ಮಹತ್ಯೆ ಮಾಡುವುದು ಅಪರಾಧ ಎಂದು ಘೋಷಿಸಲಾಗಿದೆ. ಈ ಅಪರಾಧಕ್ಕೆ ಒಂದು ವರ್ಷದ ಜೈಲು ಶಿಕ್ಷೆ ಅಥವಾ ಜುಲ್ಮಾನೆ, ಅಥವಾ ಜುಲ್ಮಾನೆ ಮತ್ತು ಜೈಲು ಇವೆರಡೂ ಶಿಕ್ಷೆ ವಿಧಿಸಬಹುದು.

ಆತ್ಮಹತ್ಯೆ ಮಾಡಲು ಅಥವಾ ಆತ್ಮಹತ್ಯೆಗೆ ಪ್ರಯತ್ನ ಮಾಡಲು ಹಲವಾರು ಕಾರಣಗಳು ಇರುತ್ತವೆ. ಕೇಂದ್ರ ಸರಕಾರದ ಆರೋಗ್ಯ ಮಂತ್ರಾಲಯ ಆತ್ಮಹತ್ಯೆ ಅಪರಾಧವಲ್ಲ ಎಂದು ಘೋಷಿಸಲು ಸಂಸತ್ತಿನ ಒಪ್ಪಿಗೆ ಪಡೆಯಲು ನಿರ್ಧರಿಸಲಾಗಿದೆ. ಈ ಬಿಲ್‌ನ ಕರಡು ಪ್ರತಿಯಾಲ್ಲಿ ಇರುವ ಸಾರಾಂಶ ಏನೆಂದರೆ:

1. ಯಾವನೇ ವ್ಯಕ್ತಿ ಆತ್ಮಹತ್ಯೆ ಮಾಡಲು ಪ್ರಯತ್ನ ಪಟ್ಟ ಸಮಯದಲ್ಲಿ ಆ ವ್ಯಕ್ತಿಯ ವಿರುದ್ಧ ಕ್ರಿಮಿನಲ್ ವ್ಯಾಜ್ಯ ದಾಖಲಿಸುವ ಮೊದಲು ಆ ವ್ಯಕ್ತಿಯನ್ನು ಮಾನಸಿಕ ತಜ್ಞರಿಂದ ಪರೀಕ್ಷಿಸತಕ್ಕದ್ದು.
2. ಮಾನಸಿಕ ತಜ್ಞರು ಆತ್ಮಹತ್ಯೆ ಪ್ರಯತ್ನಿಸಿದ ವ್ಯಕ್ತಿಯ ಚರಿತ್ರೆ ಮತ್ತು ಕ್ಲಿನಿಕಲ್ ಪರೀಕ್ಷೆಯ ತರುವಾಯ–

ಅ) ಆ ವ್ಯಕ್ತಿಗೆ ಮಾನಸಿಕ ಅಸ್ವಸ್ಥತೆಯ ರೋಗ ಇದೆ

ಆ) ಮಾನಸಿಕ ಅಸ್ವಸ್ಥತೆಯ ಪರಿಣಾಮದಿಂದ ಆ ವ್ಯಕ್ತಿಯು ಆತ್ಮಹತ್ಯೆಗೆ

ಪ್ರಯತ್ನಿಸಿದ್ದರು ಎಂಬುದಾಗಿ ತಪಾಸಣೆಯಿಂದ ತಿಳಿದು ಬಂದಿದೆ ಇಂತಹ ಸಂದರ್ಭದಲ್ಲಿ ಆತ್ಮಹತ್ಯೆ ಪ್ರಯತ್ನಪಟ್ಟ ವ್ಯಕ್ತಿಯ ವಿರುದ್ಧ ಯಾವುದೇ ಫಿರ್ಯಾದಿ, ತನಿಖೆ ಅಥವಾ ಕ್ರಿಮಿನಲ್ ವ್ಯಾಜ್ಯ ಜರಗಿಸಬಾರದು. 2008ನೇ ಇಸವಿಯ ಲಾ ಕಮಿಷನ್ ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ.

'ಮಾನಸಿಕ ಅಸ್ವಸ್ಥತೆಯಿಂದ ಆತ್ಮಹತ್ಯೆಯ ಪ್ರಯತ್ನ ಘಟಿಸುತ್ತದೆ ಆದುದರಿಂದ ಅಂತಹ ವ್ಯಕ್ತಿಗಳಿಗೆ ದಯೆ, ಕನಿಕರ ಮತ್ತು ಭಾವನಾತ್ಮಕ ಆಧಾರ ಮತ್ತು ಕೆಲವು ಸಂಧರ್ಭಗಳಲ್ಲಿ ಮಾನಸಿಕ ತಜ್ಞರ ಅವಶ್ಯಕತೆ ಇರುವುದರಿಂದ ಆತ್ಮಹತ್ಯೆಯನ್ನು ಕ್ರಿಮಿನಲ್ ಅಪರಾಧ ಎಂದು ತಿಳಿಯಬಾರದು'.

ಭಾರತದ ಸುಪ್ರೀಮ್ ಕೋರ್ಟ್ 7–3–2011 ರಂದು ಅರುಣಾ ರಾಮಚಂದ್ರ ಶಾನ್‌ಭಾಗ್ ಮತ್ತು ಕೇಂದ್ರ ಸರಕಾರದ ವ್ಯಾಜ್ಯದಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ವ್ಯಕ್ತಪಡಿಸಿದೆ.

'ಒಬ್ಬ ವ್ಯಕ್ತಿಯು ಆತ್ಮಹತ್ಯೆ ಮಾಡಲು ಪ್ರಯತ್ನಿಸುವುದು ಖಿನ್ನತೆ ಮತ್ತು ಉದ್ವೇಗದಿಂದ ಆದಲ್ಲಿ ಅಂತಹ ವ್ಯಕ್ತಿಗೆ ಶಿಕ್ಷೆ ವಿಧಿಸುವುದಕ್ಕಿಂತ ಹೆಚ್ಚಾಗಿ ಅವನಿಗೆ ನೆರವಿನ ಹಸ್ತದ ಅವಶ್ಯಕತೆ ಇರುತ್ತದೆ. ಆದುದರಿಂದ ಸಂಸತ್ತು ಭಾರತೀಯ ದಂಡ ಕಾನೂನಿನ ಸೆಕ್ಷನ್ 309ನ್ನು ಯಾವ ರೀತಿಯಲ್ಲಿ ರದ್ದುಪಡಿಸಬಹುದು ಎಂಬುದನ್ನು ಆಲೋಚಿಸಬೇಕು. ಈ ಪ್ರಸಕ್ತ ಸಮಯದಲ್ಲಿ ಭಾರತದ ಆರೋಗ್ಯ ಮಂತ್ರಾಲಯ ತೆಗೆದುಕೊಳ್ಳುವ ನಿರ್ಧಾರ ಸೂಕ್ತ ಕಾಲಕ್ಕೆ ಸೂಕ್ತ ನಿರ್ಧಾರ ಎನ್ನಬಹುದು.

ಯುರೋಪ್ ರಾಷ್ಟ್ರಗಳಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸುವುದು ಅಪರಾಧವಲ್ಲ ಎಂದು 18ನೇ ಶತಮಾನದಲ್ಲಿ ರ್ಧಾರ ತೆಗೆದುಕೊಳ್ಳಲಾಗಿದೆ. ಇಂಗ್ಲೆಂಡಿನಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸುವುದು ಅಪರಾಧವಲ್ಲ ಎಂದು 1961ರಲ್ಲಿ ಕಾನೂನು ಮಾಡಲಾಗಿದೆ. ಆದರೆ ಪಾಕಿಸ್ತಾನ, ಬಾಂಗ್ಲಾ ದೇಶ, ಮಲೇಶಿಯಾ, ಸಿಂಗಾಪುರ ಮತ್ತು ಭಾರತ ದೇಶಗಳಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸುವುದು ಅಪರಾಧ ಎಂದು ಘೋಷಿಸಲಾಗಿದೆ.

ಮಾನಸಿಕ ಅಸಮತೋಲನ – ಗೊಂದಲ ಇರುವ ಯುವಜನರು ಪ್ರೇಮ ಸಂಬಂಧಗಳಲ್ಲಿ ವಿಫಲರಾದಾಗ, ಕುಟುಂಬದ ಹಿರಿಯರ ಒತ್ತಡದಿಂದ ಶಿಕ್ಷಣದಲ್ಲಿ ಏಕಾಗ್ರತೆ ಸಾಧಿಸಲು ಆಗದಿದ್ದಾಗ, ಶಿಕ್ಷಣದ ಒತ್ತಡದ ಜೊತೆಗೆ ಹಿರಿಯರಿಂದ ಮಕ್ಕಳಿಗೆ ಹೆಚ್ಚಿನ ನಿರೀಕ್ಷಣೆಯ ಒತ್ತಡವೂ ಬಿದ್ದಾಗ ಈ ಕಾರಣಗಳಿಗೆ ನಮ್ಮ ಯುವಜನರು ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ ಎಂದು ಹೇಳಬಹುದು.

ಹಿರಿಯರಾದ ನಾವು ವಾಸ್ತವಿಕತೆಯನ್ನು ಅಧ್ಯಯನ ಮಾಡಬೇಕು. ನನ್ನ ಮಗ/ಮಗಳು ಇಂಜಿನಿಯರ್/ ಡಾಕ್ಟರ್ ಆಗಬೇಕು ಎನ್ನುವ ಹಂಬಲ ಇರುವುದು ಸಹಜ. ಆದರೆ ನನ್ನ ಮಗ/ಮಗಳು ಜೀವನದಲ್ಲಿ ಏನು ಆಗಲು ಬಯಸುತ್ತಾನೆ/ಳೆ? ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಬೇಕು ಆದರೆ ಒತ್ತಡ ಹೇರುವುದು ಸೂಕ್ತವಲ್ಲ. ಮಕ್ಕಳು ಈ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದಲ್ಲಿ ಮುಂದಿನ ಪರೀಕ್ಷೆಯಲ್ಲಿ ಚೆನ್ನಾಗಿ ಓದು ಎಂದು ಹೇಳಬೇಕು ಅದರ ಬದಲು ಮಕ್ಕಳಿಗೆ ನಿನ್ನ ತಲೆಯಲ್ಲಿ ಸೆಗಣಿ ಇದೆ, ಬೊಂಡು ಇಲ್ಲ ಇತ್ಯಾದಿ., ಅವಹೇಳನ ಸಲ್ಲದು. ನಮ್ಮ ಮಕ್ಕಳಿಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡೋಣ.. ದೇವರು ದಯಪಾಲಿಸಿದ ಈ ಜೀವನವನ್ನು ಆ ದೇವರೇ ಸೂಕ್ತ ಕಾಲದಲ್ಲಿ ಕಸಿಯುವಂತಾಗಬೇಕೇ ಹೊರತು ತಮ್ಮ ಅಮೂಲ್ಯ ಜೀವನವನ್ನು ನಮ್ಮ ಮಕ್ಕಳೇ ನಾಶಪಡಿಸದಂತೆ ಅವರನ್ನು ರಕ್ಷಿಸಿ ಕಾಪಾಡೋಣ.

# ಭಾರತೀಯ ದಂಡ ಕಾನೂನು -1860

## (ತಿದ್ದುಪಡಿ ಸಂಖ್ಯೆ ದಿನಾಂಕ 7-01-2009)

ಈ ಕಾನೂನು ಜಮ್ಮು ಮತ್ತು ಕಾಶ್ಮೀರ ಹೊರತುಪಡಿಸಿ ಸಂಪೂರ್ಣ ಭಾರತ ದೇಶಕ್ಕೆ ಅನ್ವಯ ಆಗುತ್ತದೆ. ಈ ಕಾನೂನಿಗೆ ವಿರುದ್ಧವಾಗಿ ಅಪರಾಧವನ್ನು ಮಾಡಿದವರು ಶಿಕ್ಷೆಗೆ ಗುರಿಯಾಗುತ್ತಾರೆ.

ಈ ಕಾನೂನಿನಲ್ಲಿ ಅಪರಾಧಿಗಳಿಗೆ ಕೊಡುವ ಶಿಕ್ಷೆ/ ದಂಡನೆ:

1. ಮರಣ
2. ಅಜೀವ ಕಾರಾಗ್ರಹವಾಸ
3. ಶ್ರಮಸಹಿತ ಕಠಿಣ ಕಾರಾಗ್ರಹವಾಸ
4. ಸಾದಾ ಕಾರಾಗ್ರಹವಾಸ
5. ಜುಲ್ಮಾನೆ

ಮರಣ ದಂಡನೆಯನ್ನು ಕೆಲವು ರಾಷ್ಟ್ರಗಳಲ್ಲಿ ರದ್ದು ಮಾಡಲಾಗಿದೆಯಾದರೂ ಭಾರತದಲ್ಲಿ ಇನ್ನೂ ಅಸ್ಥಿತ್ವದಲ್ಲಿದೆ. ಈ ಕಾನೂನಿನಲ್ಲಿ ನಮೂದಿಸಿದ ಶಿಕ್ಷೆಯ ಪ್ರಕಾರಗಳು ಬಹು ಕ್ರೂರವಾಗಿವೆ ಎಂಬ ಅಭಿಪ್ರಾಯವಿದೆ. ಆದರೆ ಪ್ರತಿಯೊಂದು ಅಪರಾಧಕ್ಕೆ ಕೊಡುವ ಶಿಕ್ಷೆಯ ಪ್ರಮಾಣ ಆಯಾ ಅಪರಾಧಕ್ಕೆ ತಕ್ಕಂತೆ ಇರುತ್ತದೆ. ದಂಡನೆ/ ಶಿಕ್ಷೆ ಕೊಡುವಾಗ ವಿಶಾಲ ಮನೋಭಾವ ಇರಬೇಕು ಎಂದು ನಾವು ಭಾವಿಸಿದರೂ ದಂಡನೆ ರದ್ದು ಪಡಿಸಬೇಕೆಂದು ಅಗ್ರಹಿಸುವುದು ಸರಿ ಅಲ್ಲ. ಕೆಲವು ಅಪರಾಧಗಳಿಗೆ ಮರಣ ದಂಡನೆ ಶಿಕ್ಷೆ ಕೊಡಬಹುದಾದರೂ ಕೆಲವು ಹೀನ ಅಥವಾ ಕ್ರೂರ ಅಪರಾಧಗಳಿಗೆ ಕಠಿಣ ಶಿಕ್ಷೆ ಮಾತ್ರ ಕೊಡಬಹುದು. ಆದರೆ ಅಂತಹ ಶಿಕ್ಷೆಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯದ ಆಧಾರದಲ್ಲಿ ಮಾತ್ರ ಕೊಡಬಹುದು.

ಶಿಕ್ಷೆ ಸಕಾರವಾಗಿರಬೇಕು. ಅತೀ ಭಯಂಕರವಾಗಿರಬಾರದು. ಶಿಕ್ಷೆ ಹೆಚ್ಚು ಉದಾರವಾಗಿರಬಾರದು. ನ್ಯಾಯಾಧೀಶರು ನ್ಯಾಯದಾನ ಮಾಡುವ ವೇಳೆ ಪೂರ್ವಾಗ್ರಹ ಪೀಡಿತರಾಗಿರ ಕೂಡದು. ಈ ರೀತಿಯಲ್ಲಿ ದೇಶದ ವಿವಿಧ ಉಚ್ಚ ನ್ಯಾಯಾಲಯಗಳು ಅಭಿಪ್ರಾಯ ವ್ಯಕ್ತಪಡಿಸಿವೆ.

ಭಾರತೀಯ ದಂಡ ಕಾನೂನು 1955 ತಿದ್ದುಪಡಿ ಆಗುವ ಮೊದಲು, ಕ್ರೂರ ಅಪರಾಧ ಮಾಡಿದವರಿಗೆ ಗಡಿಪಾರು ಮಾಡುವ ಆದೇಶ ಕೊಟ್ಟಿದ್ದಲ್ಲಿ ಈಗ ಅದು ಅಜೀವ ಕಾರಾಗ್ರಹವಾಸ ಶಿಕ್ಷೆಯಾಗಿದೆ. ನಿರ್ಧಿಷ್ಟ ಅವಧಿಗೆ ಗಡಿಪಾರು ಆದೇಶ ಕೊಟ್ಟಿದ್ದಲ್ಲಿ ಈಗ ಅದು ಸಣ್ಣ ಅವಧಿಯ ಕಠಿಣ ಕಾರಾಗ್ರಹವಾಸ ಶಿಕ್ಷೆಯಾಗಿದೆ. ಅದಕ್ಕಿಂತ ಸಣ್ಣ ಅವಧಿಗೆ ಗಡಿಪಾರು ಶಿಕ್ಷೆ ಕೊಟ್ಟಿದ್ದಲ್ಲಿ ಆ ಶಿಕ್ಷೆ ಮಾಫಿ ಆಗಿದೆ ಎಂದು ತಿಳಿಯುವುದು ಎಂದು ಸೂಚಿಸಿದ್ದಾರೆ.

ಅಪರಾಧಿಗಳಿಗೆ ಮರಣ ದಂಡನೆ ಅಥವಾ ಗಲ್ಲು ಶಿಕ್ಷೆಯನ್ನು ನ್ಯಾಯಾಲಯ ವಿಧಿಸಿದ್ದರೆ ಆ ನ್ಯಾಯಾಲಯವಿರುವ ರಾಜ್ಯ ಸರಕಾರಕ್ಕೆ ಆ ಶಿಕ್ಷೆಯನ್ನು ಅಜೀವ ಕಾರಾಗ್ರಹವಾಸ ಶಿಕ್ಷೆಯಾಗಿ ಪರಿಗಣಿಸುವ ಅಥವಾ ಆ ಶಿಕ್ಷೆಯ ಪ್ರಮಾಣ/ಅವಧಿ ಕಡಿಮೆ ಮಾಡುವ ಅಧಿಕಾರವಿದೆ. ಅಜೀವ ಕಾರಾಗ್ರಹವಾಸ ಎಂದರೆ 14 ವರ್ಷಗಳ ಕಾರಾಗ್ರಹವಾಸ. ಅದನ್ನು ಕಡಿಮೆ ಮಾಡುವ ಅಧಿಕಾರ ಆಯಾ ರಾಜ್ಯ ಸರಕಾರಗಳಿಗೆ ಇದೆ.

ಒಬ್ಬ ಅಪರಾಧಿಗೆ 2 ರೀತಿಯ ಬೇರೆ ಬೇರೆ ಅಪರಾಧಗಳಿಗೆ ದಂಡನೆ ಆಗಿದ್ದರೆ ಅಂತಹ ಸಂದರ್ಭಗಳಲ್ಲಿ ಇಡೀ ಅವಧಿಯ ಶಿಕ್ಷೆ ಕಠಿಣವಾಗಿರಬೇಕು ಅಥವಾ ಒಂದು ಭಾಗ ಸಾದಾ ದಂಡನೆ ಮತ್ತು ಉಳಿದ ಅವಧಿಗೆ ಕಠಿಣ ದಂಡನೆ ಆದೇಶ ನೀಡಲು ನ್ಯಾಯಾಲಯಕ್ಕೆ ಅಧಿಕಾರವಿದೆ.

ಅಪರಾಧಿಗೆ ಜುಲ್ಮಾನೆ/ ದಂಡ ಭರಿಸಲು ನ್ಯಾಯಾಲಯ ಹೇಳಬಹುದು. ಅದು ಎಷ್ಟು ಗರಿಷ್ಠ ಅಥವಾ ಅತ್ಯಧಿಕ ಎಂಬ ತೀರ್ಮಾನ ಮಾಡುವ ಅಧಿಕಾರ ನ್ಯಾಯಾಲಯದ ವಿವೇಚನೆಗೆ ಬಿಟ್ಟ ವಿಷಯವಾಗಿದೆ. ಹೆಚ್ಚು ಅವಧಿಯ ದಂಡನೆ ಕೊಡುವ ಸಂದರ್ಭದಲ್ಲಿ ಜುಲ್ಮಾನೆ ವಿಧಿಸುವುದು ಸೂಕ್ತವಲ್ಲ ಎಂದು ಅಲಹಾಬಾದ್ ಉಚ್ಚ ನ್ಯಾಯಾಲಯ ಅಭಿಪ್ರಾಯ ವ್ಯಕ್ತಪಡಿಸಿದೆ.

ಜೈಲು ಶಿಕ್ಷೆಯ ಜೊತೆಗೆ ಜುಲ್ಮಾನೆಗೆ ನ್ಯಾಯಲಯ ಆದೇಶಿಸಿದ್ದಲ್ಲಿ ಮತ್ತು ಜುಲ್ಮಾನೆ ಕೊಡಲು ಅಪರಾಧಿಯು ತಪ್ಪಿದ ಸಂದರ್ಭದಲ್ಲಿ ಹೆಚ್ಚಿನ ಶಿಕ್ಷೆ ಅನುಭವಿಸಬೇಕು ಎಂಬ ಆದೇಶವನ್ನು ಕೊಡಬಹುದು. ಜುಲ್ಮಾನೆ ಕಟ್ಟದೆ ಜೈಲು ಶಿಕ್ಷೆಯನ್ನು ಅನುಭವಿಸುವ ಅವಧಿಯಲ್ಲಿ ಜುಲ್ಮಾನೆ ಪಾವತಿಸಿದಲ್ಲಿ ಅನುಭವಿಸುವ ಜೈಲು ಶಿಕ್ಷೆಯ ಅವಧಿ ಕಡಿಮೆ ಆಗುತ್ತದೆ.

ಉದಾಹರಣೆ: ಒಬ್ಬ ಅಪರಾಧಿಗೆ ವಿಧಿಸಲಾದ ರೂ.100/- ದಂಡವನ್ನು ಆತನು ಪಾವತಿಸದೇ ಇದ್ದಾಗ 4 ತಿಂಗಳ ಜೈಲುವಾಸ ಶಿಕ್ಷೆ ಕೊಟ್ಟ ಸಂದರ್ಭದಲ್ಲಿ

ಒಂದು ತಿಂಗಳ ನಂತರ ಅವನು ರೂ.75/– ಜುಲ್ಮಾನೆ ಕೊಟ್ಟರೆ ಆಗಲೇ ಅವನ ಜೈಲುವಾಸ ಮುಕ್ತಾಯವಾಗುತ್ತದೆ.

ಒಬ್ಬ ಅಪರಾಧಿಗೆ ದಂಡನೆ ಆಗಿದ್ದ 6 ವರ್ಷಗಳ ಒಳಗೆ ಜುಲ್ಮಾನೆಯನ್ನು ಕೊಡಬೇಕು ಎಂಬ ಆದೇಶ ಇದ್ದರೆ ಹಾಗೂ ಅಪರಾಧಿ 6 ವರ್ಷಗಳಿಗಿಂತ ಹೆಚ್ಚು ಅವಧಿಗೆ ಕಾರಾಗ್ರಹವಾಸದ ಶಿಕ್ಷೆಗೆ ಒಳಗಾಗಿದ್ದರೆ ಅವಧಿ ಮುಗಿಯುವ ಮೊದಲು ಜುಲ್ಮಾನೆಯನ್ನು ವಸೂಲಿ ಮಾಡಬಹುದು. ಒಂದು ವೇಳೆ ಶಿಕ್ಷೆ ಅವಧಿಯಲ್ಲಿ ಅವನು ಮೃತ ಪಟ್ಟರೆ ಜುಲ್ಮಾನೆ ತುಂಬಿಸುವ ಜವಾಬ್ದಾರಿ ತಪ್ಪುವುದಿಲ್ಲ. ಮೃತ ಅಪರಾಧಿಯ ಚರ ಸೊತ್ತುಗಳಿಂದ ಜುಲ್ಮಾನೆ ವಸೂಲು ಮಾಡಬಹುದು.

ಅತೀ ಹೀನ ಮತ್ತು ಕ್ರೂರ ಅಪರಾಧವನ್ನು ಮಾಡಿದ ಅಪರಾಧಿಗೆ ಏಕಾಂತ ಬಂಧನದ ಶಿಕ್ಷೆಯನ್ನು ಕೊಡಬಹುದು. ಆದರೆ ಆ ಆವಧಿ 14 ದಿನಗಳಿಗೆ ಸೀಮಿತವಾಗಿರಬೇಕು.

ಒಬ್ಬ ವ್ಯಕ್ತಿ ಮೊದಲು ಅಪರಾಧ ಮಾಡಿದ್ದು ತಪ್ಪಿತಸ್ಥ ಎಂದು ನ್ಯಾಯಾಲಯ ಆದೇಶ ನೀಡಿದ ನಂತರ, ಇನ್ನೊಂದು ವಿಚಾರಣೆಯಲ್ಲಿ ಅವನು ಈ ಮೊದಲೇ ಅಪರಾಧಿ ಎಂದು ಸಾಕ್ಷ್ಯ ಸಿಕ್ಕಿದರೆ ಆ ಅಪರಾಧಿಗೆ ಹೆಚ್ಚಿನ ದಂಡನೆ ಕೊಡಬಹುದು ಮತ್ತು ಆ ದಂಡನೆ 3 ವರ್ಷಗಳಿಗೆ ಕಡಿಮೆ ಅಗಿರಬಾರದು. ಈ ಕಾನೂನಿನ ಉಪಬಂಧದಲ್ಲಿ ಅಪರಾಧಿಗೆ ಹೆಚ್ಚಿನ ಶಿಕ್ಷೆ ಕೊಡಬೇಕೆಂಬ ನಿರ್ಬಂಧವಿರುವುದಿಲ್ಲ.

## 1. ದುಷ್ಪ್ರೇರಣೆ

(ಅ) ಒಂದು ಕೃತ್ಯವನ್ನು ಮಾಡಲು ದುಷ್ಪ್ರೇರಣೆ ಮಾಡಬೇಕಾದರೆ, ಅಂತಹ ಕೃತ್ಯವನ್ನು ಮಾಡಲು ಯಾವುದೇ ವ್ಯಕ್ತಿಯನ್ನು ಪ್ರಚೋದಿಸಬೇಕು ಅಥವಾ ಕಾನೂನಿಗೆ ವಿರುದ್ಧವಾದ ಲೋಪದ ಮೂಲಕ ಯಾವುದೇ ಕೃತ್ಯವನ್ನು ಮಾಡಲು ನೆರವು ನೀಡಿರಬೇಕು.

**ಉದಾಹರಣೆ:** ಸಾರ್ವಜನಿಕ ಅಧಿಕಾರಿಯು ನ್ಯಾಯಾಲಯದಿಂದ 'ಅ' ಎಂಬ ವ್ಯಕ್ತಿಯನ್ನು ಬಂಧಿಸಲು ಅಧಿಕೃತ ವಾರೆಂಟ್ ತಂದಾಗ 'ಬಿ' ವ್ಯಕ್ತಿ ಈ ಸಂಗತಿ ತಿಳಿದು 'ರ' ಎಂಬವನನ್ನು 'ಅ' ಎಂದು ತಿಳಿಸುತ್ತಾನೆ ಮತ್ತು ಉದ್ದೇಶಪೂರ್ವಕ 'ರ' ನನ್ನು ಬಂಧಿಸಲು ಸಹಕರಿಸುತ್ತಾನೆ. ಇಲ್ಲಿ 'ಬಿ' ಯು ಪ್ರಚೋದನೆಯ ಮೂಲಕ 'ರ' ನ ದಸ್ತಗಿರಿಗೆ ಸಾರ್ವಜನಿಕ ಅಧಿಕಾರಿಯನ್ನು ದುಷ್ಪೇರಿಸುತ್ತಾನೆ.

(ಆ) **ದುಷ್ಪ್ರೇರಕ:–** ದುಷ್ಪ್ರೇರಣೆಯ ಮೂಲಕ ಅಪರಾಧ ಮಾಡಲು ಕಾನೂನಿನನ್ವಯ ಸಮರ್ಥ ವ್ಯಕ್ತಿಯು ಆ ಕೃತ್ಯ ಎಸಗಿದ್ದರೆ, ಅದು ಅಪರಾಧ ಎಂದು ಪರಿಗಣಿಸಬಹುದಾದಲ್ಲಿ, ಆ ಕೃತ್ಯ ಮಾಡಲು ದುಷ್ಪ್ರೇರಣೆ ನೀಡುವವನು ಅಪರಾಧದ ದುಷ್ಪ್ರೇರಕನಾಗುತ್ತಾನೆ.

**ಉದಾಹರಣೆ:** 'ಅ' ಎಂಬವನು 'ನ' ಎಂಬವನನ್ನು ಕೊಲ್ಲಲು 'ವ' ಎಂಬವನನ್ನು ಪ್ರಚೋದಿಸುತ್ತಾನೆ. 'ವ' ನು 'ನ' ನನ್ನು ಹೊಡೆದು ಗಾಯಗೊಳಿಸುತ್ತಾನೆ. ಇಂತಹ ಸಂದರ್ಭದಲ್ಲಿ 'ಅ' ನು 'ನ' ನನ್ನು ಕೊಲೆ ಮಾಡುವ ಕೃತ್ಯಕ್ಕಾಗಿ 'ವ' ನನ್ನು ದುಷ್ಪ್ರೇರಿಸಿದ ಬಗ್ಗೆ ತಪ್ಪಿತಸ್ಥನಾಗಿರುತ್ತಾನೆ.

(ಇ) **ಭಾರತ ದೇಶದ ಹೊರಗೆ ಯಾನೆ ಪರದೇಶದಲ್ಲಿ ಮಾಡಲಾದ ಆಪರಾಧಗಳಿಗೆ ಭಾರತದಲ್ಲಿ ದುಷ್ಪ್ರೇರಣೆ ಎಂದು ಹೇಳಬಹುದೇ?**

ಹೌದು; ಒಬ್ಬ ವ್ಯಕ್ತಿ, ಪರದೇಶದಲ್ಲಿ ಆಗುವ ಅಪರಾಧಕ್ಕೆ ಭಾರತದಲ್ಲಿದ್ದು ದುಷ್ಪಪ್ರೇರಣೆ ನೀಡಿದರೆ ಆ ಅಪರಾಧಗಳು ಭಾರತದಲ್ಲಿಯೇ ಘಟಿಸಿದ ಆಪರಾಧಗಳು ಎಂದು ಕಾನೂನು ಪರಿಗಣಿಸುತ್ತದೆ.

(ಈ) **ಸಾರ್ವಜನಿಕರಿಂದ ಅಥವಾ ಹತ್ತಕ್ಕಿಂತ ಹೆಚ್ಚು ಜನರಿಂದ ಅಪರಾಧ ಮಾಡಿಸಲು ದುಷ್ಪ್ರೇರಿಸುವ ವ್ಯಕ್ತಿ 3 ವರುಷ ಕಾರಾಗ್ರಹವಾಸ ಮತ್ತು ಜುಲ್ಮಾನೆ ಅಥವಾ ಎರಡೂ ಶಿಕ್ಷೆಗಳಿಗೆ ಗುರಿಯಾಗತಕ್ಕದ್ದು,**

## 2. ಅಪರಾಧಿಕ ಷಡ್ಯಂತ್ರ (ಒಳಸಂಚು):–

ಎರಡು ಅಥವಾ ಹೆಚ್ಚು ಜನರ ಜೊತೆಗೂಡಿ ಕಾನೂನು ಬಾಹಿರ ಕೃತ್ಯ ಅಥವಾ ಕಾನೂನು ಬಾಹಿರ ಅಲ್ಲದ ಕೃತ್ಯವನ್ನು ಕಾನೂನು ವಿರೋಧಿ ಸಾಧನಗಳಿಂದ ಮಾಡಲು ಒಪ್ಪಂದ ಮಾಡಿಕೊಂಡರೆ ಅದನ್ನು ಅಪರಾಧಿಕ ಷಡ್ಯಂತ್ರ ಅಥವಾ ಒಳಸಂಚು ಎಂದು ಕರೆಯಬಹುದು.

## 3. ದೇಶದ ವಿರುದ್ಧ ಅಪರಾಧ

(1) ಯಾವುದೇ ವ್ಯಕ್ತಿ ಭಾರತ ಸರಕಾರದ ವಿರುದ್ಧ ಯುದ್ಧ ಮಾಡಿದರೆ ಅಥವಾ ಯುದ್ಧ ಮಾಡಲು ಪ್ರಯತ್ನ ಮಾಡಿದರೆ ಅಥವಾ ಯುದ್ಧ ಮಾಡಲು ದುಷ್ಪ್ರೇರಣೆ ನೀಡಿದರೆ ಅಂತಹ ವ್ಯಕ್ತಿಗೆ ಮರಣ ದಂಡನೆ ಅಥವಾ ಅಜೀವ ಕಾರಾಗ್ರಹವಾಸ ಶಿಕ್ಷೆಯ ದಂಡನೆ ನೀಡಬಹುದು.

(11) ಭಾರತ ಸರಕಾರದ ವಿರುದ್ಧ ಯುದ್ದ ಹೂಡಲು ಶಸ್ತ್ರಾಸ್ತ್ರಗಳನ್ನು ಶೇಖರಿಸಿ ಸಿದ್ಧತೆ ನಡೆಸಿದಲ್ಲಿ ಅಂತಹ ವ್ಯಕ್ತಿಯು ಅಜೀವ ಕಾರಾಗ್ರಹವಾಸ ಅಥವಾ 10 ವರ್ಷಗಳಿಗೆ ಮೀರದ ಶಿಕ್ಷೆಯಿಂದ ದಂಡಿತನಾಗುತ್ತಾನೆ.

## ರಾಜ ದ್ರೋಹ

ಕಾನೂನು ರೀತ್ಯಾ ಸ್ಥಾಪನೆಗೊಂಡ ಭಾರತ ಸರಕಾರದ ವಿರುದ್ಧ ದ್ವೇಷ ಅಥವಾ ತಿರಸ್ಕಾರವನ್ನು ಹುಟ್ಟು ಹಾಕಲು ಯಾವನೇ ವ್ಯಕ್ತಿಯು ಮಾತುಗಳಿಂದ ಅಥವಾ ಸಂಜ್ಞೆಗಳಿಂದ ಅಥವಾ ದೃಶ್ಯ ನಿರೂಪಣೆ ಅಥವಾ ಲಿಖಿತ ಶಬ್ದಗಳ ಮೂಲಕ ಪ್ರಯತ್ನಿಸಿದರೆ, ಆ ವ್ಯಕ್ತಿಯು ಜೀವಾವಧಿ ಕಾರಾಗ್ರಹವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು. ರಾಜದ್ರೋಹ ಕೃತ್ಯವು ಸಮಾಜ ವಿದ್ರೋಹ ಕಾರ್ಯವಾಗಿದೆ.

## ಸಾರ್ವಜನಿಕ ನೌಕರರ ಅಪರಾಧಗಳು

1. ರಾಜ್ಯದ ಅಥವಾ ಯುದ್ಧ ಖೈದಿಯನ್ನು ಬಂಧಿತನಾದ ಸ್ಥಳದಿಂದ ತಪ್ಪಿಸಿಕೊಂಡು ಹೋಗಲು ಸಾರ್ವಜನಿಕ ನೌಕರನು ಸ್ವ ಇಚ್ಛೆಯಿಂದ ಅವಕಾಶ ನೀಡಿದರೆ ಆತನು ಜೀವಾವಧಿ ಅಥವಾ 10 ವರ್ಷಗಳ ಕಾರಾಗ್ರಹವಾಸ ಶಿಕ್ಷೆಯಿಂದ ದಂಡಿತನಾಗುತ್ತಾನೆ.
2. ಇತರರಿಗೆ ಅಹಿತವನ್ನು ಮಾಡಬೇಕೆಂಬ ಉದ್ದೇಶದಿಂದ ಕಾನೂನುಬದ್ಧ ಆದೇಶವೊಂದನ್ನು ಜ್ಞಾನಪೂರ್ವಕವಾಗಿ ಪಾಲಿಸದೇ ಇದ್ದರೆ ಅಥವಾ ಇತರರಿಗೆ ನಷ್ಟ ಉಂಟಾಗುವ ಸಂಭವ ಇದೆ ಎಂದು ತಿಳಿದೂ ಪಾಲಿಸದ ಸರಕಾರಿ ನೌಕರನಿಗೆ, ಒಂದು ವರ್ಷದ ಸಾದಾ ಕಾರಾಗ್ರಹ ಶಿಕ್ಷೆ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
3. ಯಾವುದೇ ದಸ್ತಾವೇಜನ್ನು ತಯಾರಿಸಲು ಅಥವಾ ಭಾಷಾಂತರಿಸಲು ಸಾರ್ವಜನಿಕ ನೌಕರನಿಗೆ ಜವಾಬ್ದಾರಿ ನೀಡಿದಾಗ, ಅವನು ದಸ್ತಾವೇಜು ಸಮರ್ಪಕವಿಲ್ಲ ಎಂದು ತಿಳಿದೂ ಯಾವುದಾದರೂ ವ್ಯಕ್ತಿಗೆ ಹಾನಿಯುಂಟು ಮಾಡುವ ಉದ್ದೇಶದಿಂದ ಆ ದಸ್ತಾವೇಜನ್ನು ತಯಾರಿಸಿದರೆ ಅಥವಾ ಭಾಷಾಂತರಿಸಿದರೆ, ಅಂತಹ ನೌಕರನಿಗೆ 3 ವರ್ಷಗಳ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
4. ಕಾನೂನು ಬಾಹಿರ ವ್ಯಾಪಾರ ಉದ್ಯಮದಲ್ಲಿ ತೊಡಗಿದ ಸಾರ್ವಜನಿಕ ನೌಕರನಿಗೆ ಒಂದು ವರ್ಷದ ಸಾದಾ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

5. ನಿಷೇಧಿಸಲ್ಪಟ್ಟಿರುವ ಸ್ವತ್ತುಗಳನ್ನು ಹರಾಜಿನಲ್ಲಿ ತನ್ನ ಅಥವಾ ಅನ್ಯರ ಹೆಸರಿನಿಂದ ಕೊಂಡುಕೊಳ್ಳುವ ಸಾರ್ವಜನಿಕ ನೌಕರನಿಗೆ 2 ವರ್ಷಗಳ ಸಾದಾ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

6. ಸಾರ್ವಜನಿಕ ನೌಕರನಾಗಿರದವನು ಸಾರ್ವಜನಿಕ ನೌಕರಿಯ ವಿಶೇಷ ಹುದ್ದೆಯನ್ನು ಹೊಂದಿರುವಂತೆ ನಟನೆ ಮಾಡಿ ಅಂತಹ ಹುದ್ದೆಯ ಅನುರೂಪ ಕೃತ್ಯ ಮಾಡಿದರೆ ಮತ್ತು ಮಾಡಲು ಪ್ರಯತ್ನಿಸಿದರೆ 2 ವರ್ಷಗಳ ಸಾದಾ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

7. ಸಾರ್ವಜನಿಕ ನೌಕರ ಎಂಬ ನಂಬಿಕೆ ಉಂಟು ಮಾಡುವ ಉದ್ದೇಶದಿಂದ ಸಾರ್ವಜನಿಕ ನೌಕರನ ಉಡುಪು ಧರಿಸಿದರೆ 3 ತಿಂಗಳ ಅವಧಿಯ ಕಾರಾಗ್ರಹ ಅಥವಾ ರೂ.200/– ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

**ಚುನಾವಣಾಧಿಕಾರದ ಲಂಚಗುಳಿತನ:–**

1. ಚುನಾವಣಾಧಿಕಾರವನ್ನು ಚಲಾಯಿಸಲು ಬಹುಮಾನ ನೀಡಿದರೆ ಅಥವಾ ಅಂತಹ ಅಧಿಕಾರ ಚಲಾಯಿಸುವಂತೆ ಪ್ರೇರೇಪಿಸಲು ಬಹುಮಾನ ಸ್ವೀಕರಿಸಿದ್ದರೆ ಲಂಚಗುಳಿತನ ಅಪರಾಧ ಮಾಡಿದಂತಾಗುತ್ತದೆ.

2. ಸ್ವತಂತ್ರ ಚುನಾವಣೆಗೆ ಮಧ್ಯ ಪ್ರವೇಶಿಸಿದರೆ ಅನುಚಿತ ವಶೀಲಿ ಅಪರಾಧ ಆಗುತ್ತದೆ.

3. ಬೇನಾಮಿ ಹೆಸರಿನಲ್ಲಿ ಮತದಾನ ಮಾಡಿದರೆ ಅಥವಾ ಮತದಾನ ಮಾಡಲು ದುಷ್ಪ್ರೇರಿಸಿದರೆ ಅದು ಅಪರಾಧ ಆಗುತ್ತದೆ.

   ಮೇಲ್ಕಾಣಿಸಿದ ಆಪರಾಧಗಳಿಗೆ ಒಂದು ವರ್ಷದ ಕಾರಾಗ್ರಹವಾಸ, ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದಾಗಿದೆ.

**ಸಾರ್ವಜನಿಕ ನೌಕರರ ಕಾನೂನು ಬದ್ದ ಆಧಿಕಾರದ ಅವಹೇಳನ ಮಾಡುವ ಶಿಕ್ಷಾರ್ಹ ಅಪರಾಧಗಳು**

1. ಸಾರ್ವಜನಿಕ ನೌಕರನು ಹೊಂದಿರುವ ಅಧಿಕಾರದಿಂದ ನೀಡುವ ಸಮನು, ಆದೇಶಗಳನ್ನು ಸ್ವೀಕರಿಸುವುದನ್ನು ತಪ್ಪಿಸಿಕೊಳ್ಳಲು ತಲೆ ಮರೆಸಿಕೊಂಡಿದ್ದರೆ; ಅಥವಾ

2. ಸಮನು, ಆದೇಶದ ಜಾರಿಯನ್ನು ತಡೆಹಿಡಿದರೆ; ಅಥವಾ

3. ಸಾರ್ವಜನಿಕ ನೌಕರನು ನೀಡಿದ ಆದೇಶದ ಪ್ರಕಾರ ಉದ್ದೇಶಪೂರ್ವಕ ತಿಳಿಸಿದ ಸ್ಥಳ ಮತ್ತು ಸಮಯದಲ್ಲಿ ಹಾಜರಾಗದೆ ತಪ್ಪಿಸಿಕೊಂಡರೆ ಅದು ಅಪರಾಧವಾಗಿದೆ.

4. ಅಧಿಕಾರಸ್ಥನಾದ ಸಾರ್ವಜನಿಕ ನೌಕರನು ಪ್ರತಿಜ್ಞೆ ಮಾಡಲು ತಿಳಿಸಿದಾಗ ನಿರಾಕರಿಸಿದರೆ;

5. ಅಧಿಕಾರಸ್ಥನಾದ ಸಾರ್ವಜನಿಕ ನೌಕರನ ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸಿದರೆ;

6. ಸಾರ್ವಜನಿಕ ನೌಕರನು ಕಾನೂನುಬದ್ಧ ಅಧಿಕಾರದನ್ವಯ ಯಾವುದೇ ಸ್ವತ್ತನ್ನು ವಶಪಡಿಸುವುದಕ್ಕೆ ಅಥವಾ ಮಾರಾಟ ಮಾಡುವುದಕ್ಕೆ ಅಡ್ಡಿಪಡಿಸಿದರೆ;

7. ಸಾರ್ವಜನಿಕ ನೌಕರನು ಸಾರ್ವಜನಿಕ ಕರ್ತವ್ಯ ನಿರ್ವಹಿಸುವಾಗ ಅಡ್ಡಿಪಡಿಸಿದರೆ;

8. ಸಾರ್ವಜನಿಕ ನೌಕರನಿಗೆ ಉದ್ದೇಶ ಪೂರ್ವಕವಾಗಿ ಅವರ ಕರ್ತವ್ಯ ಪಾಲನೆಯಲ್ಲಿ ಸಹಕಾರ ನೀಡಲು ನಿರಾಕರಿಸಿದರೆ;

9. ಸಾರ್ವಜನಿಕ ನೌಕರನು ತನ್ನ ಸಾರ್ವಜನಿಕ ಸೇವಾ ಕೃತ್ಯದ ಸಂಬಂಧ ಮಾಡುವ ಕೆಲಸವನ್ನು ಮಾಡದಂತೆ ತಡೆಯುಲು ಬೆದರಿಕೆಯೊಡ್ಡಿದರೆ; ಮೇಲ್ಕಾಣಿಸಿದ ಈ ಎಲ್ಲಾ ಅಪರಾಧಗಳು ಸಾರ್ವಜನಿಕ ನೌಕರರ ಕಾನೂನು ಬದ್ಧ ಅಧಿಕಾರದ ಅವಹೇಳನ ಮಾಡುವ ಶಿಕ್ಷಾರ್ಹ ಅಪರಾಧಗಳಾಗಿವೆ.

## ಸುಳ್ಳು ಸಾಕ್ಷ್ಯ ಕೊಡುವುದು

1. ಸುಳ್ಳಾಗಿರುವ ಅಥವಾ ತಾನು ಸುಳ್ಳೆಂದು ತಿಳಿದ ಹೇಳಿಕೆಯನ್ನು ನೀಡುವುದು ಸುಳ್ಳು ಸಾಕ್ಷ್ಯ ಕೊಡುವುದು ಎಂದು ಹೇಳಬಹುದು.

   **ಉದಾ:–** ಸತ್ಯ ಹೇಳಲು ಪ್ರಮಾಣ ಮೂಲಕ ಬದ್ಧನಾದವನು, 'ರ' ಎಂಬವನು ಸೂಚಿತ ದಿನದಂದು ಇಂತಹ ನಿರ್ದಿಷ್ಟ ಪ್ರದೇಶದಲ್ಲಿ ಇದ್ದನು ಎಂದು ಗೊತ್ತಿಲ್ಲದೆ ಹೇಳುವುದು ಸುಳ್ಳು ಸಾಕ್ಷ್ಯ ಕೊಡುವುದಾಗಿದೆ.

2. ನ್ಯಾಯಿಕ ವ್ಯವಹರಣೆಯಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ಕೊಡುವುದು ಅಥವಾ ಸೃಷ್ಟಿಸುವುದು 7 ವರ್ಷ ಕಾರಾಗ್ರಹ ಮತ್ತು ಜುಲ್ಮಾನೆಯಿಂದ ದಂಡಿತನಾಗುವ ಅಪರಾಧವಾಗಿದೆ.

3. ಮರಣದಂಡನೆ ವಿಧಿಸಬಹುದಾದ ಅಪರಾಧಕ್ಕೆ ಅಪರಾಧ ನಿರ್ಣಯ ಆಗುವಂತೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷವನ್ನು ಕೊಡುವ ಮತ್ತು ಸೃಷ್ಟಿಸುವ ವ್ಯಕ್ತಿಗೆ ಅಜೀವ ಕಾರಾಗ್ರಹವಾಸ ಅಥವಾ 10 ವರ್ಷಗಳ ಕಠಿಣ ಕಾರಾಗ್ರಹವಾಸ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

4. ಸುಳ್ಳು ಸಾಕ್ಷ್ಯ ನೀಡಲು ದೈಹಿಕವಾಗಿ ಗಾಯಗೊಳಿಸುವ ಅಥವಾ ಹಾನಿಯುಂಟು ಮಾಡುವ ಬೆದರಿಕೆಯೊಡ್ಡಿದರೆ ಅಂತಹ ವ್ಯಕ್ತಿಗೆ 7 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

5. ಸುಳ್ಳು ಎಂದು ತಿಳಿದ ಸಾಕ್ಷವನ್ನು ನಿಜವಾದುದು ಎಂದು ಭ್ರಷ್ಟತೆಯಿಂದ ಉಪಯೋಗಿಸಿದರೆ, ಸುಳ್ಳು ಸಾಕ್ಷ ಕೊಡುವ ಅಥವಾ ಸೃಷ್ಟಿಸುವ ಅಪರಾಧಕ್ಕೆ ಆಗುವ ದಂಡನೆಗೆ ಈ ವ್ಯಕ್ತಿ ಗುರಿಯಾಗತಕ್ಕದ್ದು.

6. ಯಾವುದೇ ವಿಷಯಕ್ಕೆ ಸಂಬಂಧಿಸಿದ ಪ್ರಮಾಣ ಪತ್ರವು ಮುಖ್ಯಾಂಶದಲ್ಲಿ ಸುಳ್ಳಾಗಿದೆ ಎಂದು ತಿಳಿದೂ ಪ್ರಮಾಣ ಪತ್ರ ನೀಡಿದರೆ ಅಥವಾ ಸಹಿ ಹಾಕಿದರೆ ಸುಳ್ಳು ಸಾಕ್ಷ ಕೊಟ್ಟ ಅಪರಾಧಕ್ಕೆ ಆಗುವ ದಂಡನೆಗೆ ಈ ವ್ಯಕ್ತಿ ಗುರಿಯಾಗತಕ್ಕದ್ದು.

7. ಅಪರಾಧ ಮಾಡಲಾಗಿದೆ ಎಂದು ತಿಳಿದೂ ಘಟನೆಗೆ ಸಂಬಂಧಿಸಿದ ಸಾಕ್ಷ್ಯವನ್ನು ಇಲ್ಲದಂತೆ ಮಾಡಿ ಅಪರಾಧಿಯನ್ನು ದಂಡನೆಯಿಂದ ರಕ್ಷಿಸಲು ಪ್ರಯತ್ನಿಸುವ ವ್ಯಕ್ತಿಗೆ–

   ಅ. ಮರಣದಂಡನೆ ಅಪರಾಧವಾಗಿದ್ದರೆ, 7 ವರ್ಷಗಳ ಕಾರಾಗ್ರಹ ಮತ್ತು ಜುಲ್ಮಾನೆ.

   ಆ. ಅಜೀವ ಕಾರಾಗ್ರಹದ ಅಪರಾಧವಾಗಿದ್ದರೆ, 3 ವರ್ಷಗಳ ಕಾರಾಗ್ರಹ ಮತ್ತು ಜುಲ್ಮಾನೆ.

   ಇ. ಹತ್ತು ವರ್ಷದ ಕಡಿಮೆ ಅವಧಿಯ ದಂಡನೀಯ ಅಪರಾಧವಾಗಿದ್ದಲ್ಲಿ, ಆ ಕಾರಾಗ್ರಹವಾಸದ ¼ ಭಾಗದವರೆಗಿನ ಕಾರಾಗ್ರಹ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

8. ಅಪರಾಧ ಮಾಡಲಾಗಿಯೆಂದು ತಿಳಿದೂ ಸುಳ್ಳೆಂದು ನಂಬುವ ಸುದ್ಧಿಯನ್ನು ಕೊಡುವ ವ್ಯಕ್ತಿಗೆ ಎರಡು ವರ್ಷಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸಬಹುದು.

9. ನ್ಯಾಯಾಲಯದ ಅಥವಾ ಸರಕಾರಿ ನೌಕರನ ಮುಂದೆ ಸಾಕ್ಷ್ಯವಾಗಿ ಹಾಜರು ಪಡಿಸುವುದನ್ನು ತಪ್ಪಿಸಲು ದಸ್ತಾವೇಜನ್ನು ಬಚ್ಚಿಡುವ ಅಥವಾ ನಾಶಪಡಿಸುವ ವ್ಯಕ್ತಿಗೆ ಎರಡು ವರ್ಷಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

10. ಇನ್ನೊಬ್ಬನಂತೆ ನಟಿಸಿ ಪ್ರಾಸಿಕ್ಯೂಶನ್‌ನಲ್ಲಿ ತಪ್ಪು ಹೇಳಿಕೆ ಕೊಡುವ ಹಾಗೂ ಸುಳ್ಳು ಜಾಮೀನು ನೀಡುವ ವ್ಯಕ್ತಿಗೆ 3 ವರ್ಷಗಳ ಅವಧಿಯ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

11. ಬಾಕಿಯಿರುವ ಮೊತ್ತಕ್ಕಿಂತ ಅಧಿಕ ಮೊತ್ತಕ್ಕೆ ಅಥವಾ ಹಕ್ಕಿಲ್ಲದ ಸ್ವತ್ತಿನ ಹಕ್ಕಿಗಾಗಿ ಮೋಸದಿಂದ ನ್ಯಾಯಾಲಯದ ಮೂಲಕ ಆದೇಶ ಜ್ಯಾರಿ ಮಾಡಿಸಿದರೆ ಅಂತಹ ವ್ಯಕ್ತಿಗೆ 2 ವರ್ಷಗಳ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

12. ಕಿರುಕುಳ ಉಂಟು ಮಾಡುವ ಉದ್ದೇಶದಿಂದ ಸುಳ್ಳೆಂದು ತಿಳಿದೂ ನ್ಯಾಯಾಲಯದಲ್ಲಿ ಪರಿಹಾರ ಕೇಳಿದರೆ ಅಂತಹ ವ್ಯಕ್ತಿಗೆ 2 ವರ್ಷಗಳ ಅವಧಿಯ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

13. ಅಪರಾಧದ ಬಗ್ಗೆ ಆಪಾದನೆ ಮಾಡಲು ನ್ಯಾಯಯುತ ಆಧಾರ ಇಲ್ಲವೆಂದು ತಿಳಿದೂ ಕ್ರಿಮಿನಲ್ ಕೇಸು ದಾಖಲಿಸಿ ಸುಳ್ಳು ಆಪಾದನೆ ಮಾಡಿದ ವ್ಯಕ್ತಿಗೆ 2 ವರ್ಷಗಳ ಅವಧಿಯ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

14. ಆಪರಾಧಿಯೆಂದು ತಿಳಿದೂ ಅಂತಹವನನ್ನು ಮರೆಮಾಚಿ ಆಶ್ರಯ ನೀಡಿದ ವ್ಯಕ್ತಿಗೆ :

    ಆ ಆಪರಾಧ ಮರಣದಂಡನೆಯಾದಲ್ಲಿ 5 ವರ್ಷಗಳ ಅವಧಿಯ ಮತ್ತು ಅಜೀವ ಕಾರಾಗ್ರಹವಾಸವಾದಲ್ಲಿ 3 ವರ್ಷಗಳ ಅವಧಿಯ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

15. ಸಾರ್ವಜನಿಕ ನೌಕರನ ಕೆಲಸಕ್ಕೆ ತಡೆಯೊಡ್ಡುವ ಅಥವಾ ಅವಮಾನ ಮಾಡುವ ವ್ಯಕ್ತಿಗೆ 6 ತಿಂಗಳ ಕಾರಾಗ್ರಹವಾಸ ಅಥಾವಾ ರೂ.1,000/– ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

## ಸಾರ್ವಜನಿಕ ಆರೋಗ್ಯ, ಸಭ್ಯತೆ ಮತ್ತು ನೀತಿಗಳಿಗೆ ಪರಿಣಾಮ ಬೀರುವ ಅಪರಾಧಗಳು :

1. ಸ್ವತ್ತಿನ ಸ್ವಾಧೀನತೆ ಹೊಂದಿರುವ ನೆರೆಹೊರೆಯ ಜನರಿಗೆ ಕಿರುಕುಳ ನೀಡುವಂತಹ ಯಾವುದೇ ಕೃತ್ಯವನ್ನು ಮಾಡುವ ವ್ಯಕ್ತಿಯು ಸಾರ್ವಜನಿಕರಿಗೆ ಕಿರುಕುಳ ನೀಡಿದ ಅಪರಾಧಿಯಾಗಿದ್ದಾನೆ.
2. ಪ್ರಾಣಕ್ಕೆ ಅಪಾಯ ಅಥವಾ ರೋಗದ ಸೋಂಕು ಹರಡುವ ಕೃತ್ಯವನ್ನು ದ್ವೇಷದಿಂದ ಮಾಡುವ ವ್ಯಕ್ತಿಗೆ 3 ವರ್ಷಗಳ ಅವಧಿಯ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
3. ಮಾರಾಟ ಮಾಡುವ ಆಹಾರ ಪದಾರ್ಥಕ್ಕೆ ಕಲಬೆರಕೆ ಮಾಡುವ ವ್ಯಕ್ತಿಯನ್ನು 6 ತಿಂಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
4. ಮಾರಾಟಕ್ಕೆ ಉಪಯೋಗಿಸುವ ಔಷಧಗಳ ವೈದ್ಯಕೀಯ ಶಕ್ತಿಯನ್ನು ಬದಲಾಯಿಸಲು ಅಥವಾ ವೈದ್ಯಕೀಯ ಸತ್ವವನ್ನು ತಗ್ಗಿಸಲು ಕಲಬೆರಕೆ ಮಾಡುವ ವ್ಯಕ್ತಿಗೆ 6 ತಿಂಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
5. ಸಾರ್ವಜನಿಕ ಉದ್ದೇಶಗಳಿಗೆ ಬಳಸುವ ಜಲಾಶಯದ ನೀರನ್ನು ಮಲಿನಗೊಳಿಸುವ ವ್ಯಕ್ತಿಗೆ 3 ತಿಂಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
6. ಸಾರ್ವಜನಿಕ ರಸ್ತೆಯಲ್ಲಿ ನಿರ್ಲಕ್ಷ್ಯದಿಂದ ವಾಹನ ಚಲಾಯಿಸುವ ವ್ಯಕ್ತಿಗೆ 6 ತಿಂಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
7. ಸಾರ್ವಜನಿಕ ನೌಕಾ ಸಂಚಾರದ ಹಾದಿಯಲ್ಲಿ ಆಪಾಯ, ಅಡೆ-ತಡೆ ಉಂಟು ಮಾಡುವ ವ್ಯಕ್ತಿಗೆ ರೂ.200/-ಜುಲ್ಮಾನೆಯಿಂದ ದಂಡಿಸಬಹುದು.
8. ತನ್ನ ಸ್ವಾಧೀನದಲ್ಲಿರುವ ವಿಷ ಪದಾರ್ಥದಿಂದ ಮನುಷ್ಯನ ಜೀವಕ್ಕೆ ಆಗುವ ಅಪಾಯವನ್ನು ತಡೆಯಲು ಸೂಕ್ತ ವ್ಯವಸ್ಥೆಯನ್ನು ಮಾಡದೆ ನಿರ್ಲಕ್ಷತೆಯಿಂದ ವರ್ತಿಸುವ ವ್ಯಕ್ತಿಗೆ 6 ತಿಂಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

9. ಬೆಂಕಿಯಿಂದ ಮನುಷ್ಯರ ಪ್ರಾಣಕ್ಕೆ ಅಪಾಯವಾಗುವುದನ್ನು ತಪ್ಪಿಸಲು ಸೂಕ್ತ ವ್ಯವಸ್ಥೆ ಮಾಡಲು ತಪ್ಪಿದ ವ್ಯಕ್ತಿಗೆ 6 ತಿಂಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

10. ತನ್ನ ಸ್ವಾಧೀನದಲ್ಲಿರುವ ಸ್ಫೋಟಕ ಪದಾರ್ಥದಿಂದ ಮನುಷ್ಯ ಜೀವಕ್ಕೆ ಅಪಾಯ ಆಗುವುದನ್ನು ತಡೆಯಲು ಸೂಕ್ತ ವ್ಯವಸ್ಥೆ ಮಾಡಲು ತಪ್ಪಿದ ವ್ಯಕ್ತಿಗೆ 6 ತಿಂಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

11. ತನ್ನ ಸ್ವಾಧೀನ ಅಥವಾ ಮೇಲ್ವಿಚಾರಣೆಯಲ್ಲಿರುವ ಯಂತ್ರೋಪಕರಣದಿಂದ ಮಾನವ ಪ್ರಾಣಕ್ಕೆ ಅಪಾಯ ಆಗುವುದನ್ನು ತಪ್ಪಿಸಲು ಸೂಕ್ತ ವ್ಯವಸ್ಥೆ ಮಾಡಲು ನಿರ್ಲಕ್ಷ ಮಾಡಿದ ವ್ಯಕ್ತಿಗೆ 6 ತಿಂಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

12. ಕಟ್ಟಡವನ್ನು ದುರಸ್ತಿ ಮಾಡುವ ಸಂದರ್ಭದಲ್ಲಿ ಅದರ ಯಾವುದೇ ಭಾಗ ಕೆಡವಿ ಮನುಷ್ಯ ಪ್ರಾಣಕ್ಕೆ ಅಪಾಯ ಆಗುವುದನ್ನು ತಡೆಯಲು ಸೂಕ್ತ ವ್ಯವಸ್ಥೆ ಮಾಡಲು ತಪ್ಪಿದ ವ್ಯಕ್ತಿಗೆ 6 ತಿಂಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

13. ತನ್ನ ಸ್ವಾಧೀನದಲ್ಲಿರುವ ಪ್ರಾಣಿಯಿಂದ ಮನುಷ್ಯನ ಪ್ರಾಣಕ್ಕೆ ಅಪಾಯ ಆಗುವುದನ್ನು ತಡೆಯಲು ಸೂಕ್ತ ವ್ಯವಸ್ಥೆ ಮಾಡಲು ತಪ್ಪಿದ ವ್ಯಕ್ತಿಗೆ 6 ತಿಂಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

14. ಅಶ್ಲೀಲ ಪುಸ್ತಕದ ಮಾರಾಟ, ಪ್ರದರ್ಶನ, ನಿರ್ಮಾಣ, ವಿತರಣೆ, ಆಮದು, ರಫ್ತು ಮಾಡುವ ಅಥವಾ ಅಂಥಹ ವ್ಯವಹಾರದಲ್ಲಿ ಭಾಗವಹಿಸಿ ಲಾಭ ಪಡೆದು ಪ್ರಥಮ ಬಾರಿ ಅಪರಾಧಿ ಎಂದು ನಿರ್ಧಾರವಾದರೆ, 2 ವರ್ಷ ಕಾರಾಗ್ರಹವಾಸ ಮತ್ತು ರೂ.2,000/- ಜುಲ್ಮಾನೆ ಅಂತೆಯೇ ಎರಡನೇ ಬಾರಿಗೆ ಅಪರಾಧಿ ಎಂದು ನಿರ್ಣಯವಾದರೆ ಅಂಥವನನ್ನು 5 ವರ್ಷ ಕಾರಾಗ್ರಹವಾಸ ಮತ್ತು ರೂ.5,000/- ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

15. ರಾಜ್ಯ ಸರ್ಕಾರದ ಅಧಿಕೃತವಲ್ಲದ ಲಾಟರಿ ಕಾರ್ಯಾಲಯ ನಡೆಸುವ ವ್ಯಕ್ತಿಗೆ 6 ತಿಂಗಳ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

## ಧರ್ಮ ಸಂಬಂಧಿತ ಅಪರಾಧಗಳು

1. ಯಾವುದೇ ಮತದ ಜನರು ಪವಿತ್ರವೆಂದು ತಿಳಿದಿರುವ ಪೂಜಾ ಸ್ಥಳವನ್ನು ಅವಮಾನ ಮಾಡುವ, ನಾಶಗೊಳಿಸುವ ಅಥವಾ ಹಾನಿ ಮಾಡುವ ವ್ಯಕ್ತಿಗೆ 2 ವರ್ಷ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
2. ದೃಶ್ಯ, ನಿರೂಪಣೆ, ಮೌಖಿಕ, ಲಿಖಿತ ಅಥವಾ ಸಂಜ್ಞೆಗಳಿಂದ ಯಾವುದೇ ಮತದ ಜನರ ನಂಬಿಕೆಗಳಿಗೆ ಅವಮಾನ ಮಾಡುವ ವ್ಯಕ್ತಿಗೆ 3 ವರ್ಷ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
3. ಪೂಜಾವಿಧಿಗಳಲ್ಲಿ ನಿರತರಾಗಿರುವ ಯಾವುದೇ ಮತದ ಕೂಟಕ್ಕೆ ಅಡ್ಡಿಯುಂಟು ಮಾಡುವ ವ್ಯಕ್ತಿಗೆ ಒಂದು ವರ್ಷದ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
4. ಶವಸಂಸ್ಕಾರಗಳಿಗೆ ಇರುವ ಸ್ಥಳದಲ್ಲಿ ಅತಿಕ್ರಮ ಪ್ರವೇಶ ಅಥವಾ ಮಾನವ ಮೃತದೇಹಕ್ಕೆ ಅಪಮಾನ ಅಥವಾ ಶವ ಸಂಸ್ಕಾರ ಮಾಡಲು ಸೇರಿದ ವ್ಯಕ್ತಿಗಳಿಗೆ ತೊಂದರೆ ಉಂಟು ಮಾಡುವ ವ್ಯಕ್ತಿಗೆ 1 ವರ್ಷ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

## ಮಾನವ ದೇಹ ಮತ್ತು ಪ್ರಾಣಕ್ಕೆ ಸಂಬಂಧಿಸಿದ ಅಪರಾಧಗಳು:

ಮರಣ ಉಂಟು ಮಾಡುವ ಉದ್ದೇಶದಿಂದ ಅಥವಾ ಮರಣ ಸಂಭವಿಸುವ ಸಾಧ್ಯತೆ ಇದೆಯೆಂದು ಅರಿವಿದ್ದೂ ದೈಹಿಕ ಕ್ಷತಿಯನ್ನು ಉಂಟು ಮಾಡುವ ಆರೋಪಿ 'ಕೊಲೆ ಮಾಡಿದ್ದಾನೆ' ಎಂದು ಹೇಳಬಹುದು.

ಆದರೆ ಬಾಹ್ಯ ಪ್ರಚೋದನೆಯಿಂದ ಪ್ರೇರಿತರಾಗಿ ತನ್ನ ಮೇಲಿನ ಹತೋಟಿ ಕಳೆದುಕೊಂಡು ಆಕಸ್ಮಿಕವಾಗಿ ಇತರ ವ್ಯಕ್ತಿಯ ಮರಣ ಉಂಟುಮಾಡುವುದು ಕೊಲೆ ಎನಿಸುವುದಿಲ್ಲ.

ಉದಾ:– ತನ್ನ ಪತ್ನಿಯು ಅನೈತಿಕ ವ್ಯವಹಾರದಲ್ಲಿ ನಿರತಳಾಗಿರುವುದನ್ನು ಕಂಡಾಗ ಹಠಾತ್ ಪ್ರಚೋದನೆಗೆ ಒಳಗಾಗಿ ಹತ್ಯೆ ಮಾಡುವುದು

ಕೊಲೆ ಮಾಡುವ ಉದ್ದೇಶವಿರದಿದ್ದರೂ ಅಂತಹ ಹತ್ಯೆಯು ಕೊಲೆಯೆನಿಸಿಕೊಳ್ಳಬೇಕಾದಲ್ಲಿ:–

ಆರೋಪಿಯು, ತಾನು ಮಾಡುವ ದೈಹಿಕ ಕ್ಷತಿಯಿಂದ ಮರಣ ಉಂಟಾಗಬಹುದೆಂದು ತಿಳಿದಿರಬೇಕು.

ಉದಾ:– ಆರೋಪಿಯು ತನ್ನೊಂದಿಗೆ ಕತ್ತಿಯನ್ನೊಯ್ದು ಹೃದಯ, ಉದರಗಳಿಗೆ ಮಾರಣಾಂತಿಕ ಗಾಯಗಳನ್ನುಂಟು ಮಾಡುತ್ತಾನೆ. ಈ ಸಂಧರ್ಭದಲ್ಲಿ ಆರೋಪಿಯು ಮರಣವನ್ನುಂಟು ಮಾಡುವ ಉದ್ದೇಶ ಹೊಂದಿರುವುದು ಸ್ಪಷ್ಟವಾಗಿದೆ.

ಮಾರಣಾಂತಿಕ ಗಾಯಗಳಿಂದ ಮೃತನ ಮರಣಕ್ಕೆ ಕಾರಣವಾದ ಆರೋಪಿಯು ಮೃತನ ದೇಹದ ಮೇಲೆ ಎಷ್ಟು ಗಾಯಗಳನ್ನು ಮಾಡಿದ್ದಾನೆ ಎಂಬುವುದು ಮುಖ್ಯವಲ್ಲ. ಯಾವ ಸ್ವರೂಪದ ಗಂಭೀರ ಗಾಯ ಮಾಡಿದ್ದಾನೆ ಎಂಬುದು ಮುಖ್ಯವಾಗಿದೆ.

1. ಕೊಲೆ ಮಾಡಿದ ವ್ಯಕ್ತಿಗೆ ಮರಣದಂಡನೆ ಅಥವಾ ಜೀವಾವಧಿ ಕಾರಾಗ್ರಹವಾಸ ಮತ್ತು ಜುಲ್ಮಾನೆ ಶಿಕ್ಷೆಯಿಂದ ದಂಡಿಸಬಹುದು.
2. ಕೊಲೆಯೆಂದು ಪರಿಗಣಿಸಲಾಗದ ಮಾನವ ಹತ್ಯೆ ಮಾಡಿದ ವ್ಯಕ್ತಿಗೆ ಜೀವಾವಧಿ ಕಾರಾಗ್ರಹ ಅಥವಾ 10 ವರ್ಷ ಕಾರಾಗ್ರಹವಾಸ ಶಿಕ್ಷೆ ಮತ್ತು ಜುಲ್ಮಾನೆ ಶಿಕ್ಷೆಯಿಂದ ದಂಡಿಸಬಹುದು.
3. ನಿರ್ಲಕ್ಷ್ಯತನದ ಕೃತ್ಯದಿಂದ ಮಾನವ ಹತ್ಯೆಯೆಂದು ಪರಿಗಣಿಸಲಾಗದೆ ಮರಣವನ್ನುಂಟು ಮಾಡಿದ ಅಪರಾಧಿಗೆ 2 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
4. ಮಹಿಳೆಯ ವಿವಾಹವಾದ ಏಳು ವರ್ಷಗಳ ಒಳಗೆ ದೈಹಿಕ ಗಾಯ ಅಥವಾ ಸುಟ್ಟ ಗಾಯಗಳಿಂದ ಆದ ಆಕೆಯ ಮರಣವು ಅವಳ ಗಂಡ ಅಥವಾ ಗಂಡನ ಬಂಧುಗಳು ವರದಕ್ಷಿಣೆ ಬಗ್ಗೆ ಹಿಂಸೆ ನೀಡಿದ್ದರಿಂದ ಉಂಟಾಗಿದೆ ಎಂದು ನಿರೂಪಿತವಾದರೆ ಇದನ್ನು 'ವರದಕ್ಷಿಣಾ ಮರಣ' ಎನ್ನಬಹುದು. ಅಂತಹ ಅಪರಾಧಿಗೆ 7 ವರ್ಷ ಕಾರಾಗ್ರಹವಾಸ ಶಿಕ್ಷೆ ವಿಧಿಸಬಹುದು.
5. 18 ವರ್ಷದೊಳಗಿನ ಅಸ್ವಸ್ಥ ಅಥವಾ ದಡ್ಡ ವ್ಯಕ್ತಿಯನ್ನು ಆತ್ಮಹತ್ಯೆ ಮಾಡಲು ದುಷ್ಪ್ರೇರಿಸಿದ ವ್ಯಕ್ತಿಗೆ ಮರಣದಂಡನೆ ಅಥವಾ ಜೀವಾವಧಿ ಕಾರಾಗ್ರಹವಾಸ ಅಥವಾ 10 ವರ್ಷ ಮೀರಿದ ಕಾರಾಗ್ರಹವಾಸ ಮತ್ತು ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

**ಗರ್ಭಪಾತ:**

1. ಪ್ರಾಣರಕ್ಷಣೆಯನ್ನು ಹೊರತುಪಡಿಸಿ, ಸ್ವಇಚ್ಛೆಯಿಂದ ಗರ್ಭಸ್ಥ ಮಹಿಳೆಗೆ ಗರ್ಭಪಾತ ಉಂಟು ಮಾಡಿದ ವ್ಯಕ್ತಿಯನ್ನು 3 ವರ್ಷ ಕಾರಾಗ್ರಹವಾಸ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು ಮತ್ತು ಆ ಗರ್ಭಸ್ಥ ಶಿಶು ಚಲಿಸುವ ಸ್ಥಿತಿಯಲ್ಲಿದ್ದರೆ 7 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆ ಶಿಕ್ಷೆಯಿಂದ ದಂಡಿಸಬಹುದು.
2. ಮೇಲ್ಕಾಣಿಸಿದ ಅಪರಾಧವನ್ನು ಮಹಿಳೆಯ ಸಮ್ಮತಿಯಿಲ್ಲದೆ ಮಾಡಿದ ವ್ಯಕ್ತಿಯನ್ನು ಜೀವಾವಧಿ ಕಾರಾಗ್ರಹ ಶಿಕ್ಷೆ ಅಥವಾ 10 ವರ್ಷ ಕಾರಾಗ್ರಹವಾಸ ಅಥವಾ ಜುಲ್ಮಾನೆ ಶಿಕ್ಷೆಯಿಂದ ದಂಡಿಸಬಹುದು.
3. ಗರ್ಭಪಾತ ಮಾಡುವ ಸಂಧರ್ಭದಲ್ಲಿ ಮಹಿಳೆ ಮರಣ ಹೊಂದಿದರೆ ಅಂತಹ ಕೃತ್ಯ ಎಸಗಿದ ವ್ಯಕ್ತಿಗೆ 10 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
4. 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿನ ಪೋಷಣೆ ಹೊತ್ತ ವ್ಯಕ್ತಿ ಮಗುವನ್ನು ಅಪಾಯಕ್ಕೆ ಗುರಿ ಮಾಡಿದರೆ ಅಥವಾ ಯಾವುದೇ ಸ್ಥಳದಲ್ಲಿ ಒಂಟಿಯಾಗಿ ತೊರೆದರೆ, ಅಂತಹ ವ್ಯಕ್ತಿಗೆ 7 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.
5. ಜನನ ಸಮಯದಲ್ಲಿ ಮೃತಪಟ್ಟ ಶಿಶುವಿನ ಜನನ ಮುಚ್ಚಿಡುವುದಕ್ಕಾಗಿ ಮೃತ ದೇಹವನ್ನು ವಿಸರ್ಜಿಸಲು ಪ್ರಯತ್ನಿಸಿದರೆ 2 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

**ಗಾಯ:**

1. ಯಾವುದೇ ವ್ಯಕ್ತಿಗೆ ದೈಹಿಕ ಯಾತನೆ ಅಥವಾ ದುರ್ಬಲತೆ ಉಂಟು ಮಾಡಿದರೆ ಆ ವ್ಯಕ್ತಿಯು 'ಗಾಯ ಮಾಡಿದ್ದಾನೆ' ಎಂದು ತಿಳಿಯುವುದು.

**ತೀವ್ರ ಘಾಯ**

ಗೊತ್ತಿದ್ದು ಅಥವಾ ಆ ವಿಷಯ ಗೊತ್ತಿಲ್ಲದೆ, ದೇಹದ ಯಾವುದೇ ಭಾಗಕ್ಕೆ ಆ್ಯಸಿಡ್ ಪ್ರಯೋಗಿಸಿ ಶಾಶ್ವತ ಅಥವಾ ಅಂಶಿಕ ಊನತ್ವ, ಸುಟ್ಟ ಗಾಯಗಳು ಅಥವಾ ವಿರೂಪವನ್ನು ಗೈದಲ್ಲಿ ಅಂತಹ ಆರೋಪಿಗೆ 10 ವರ್ಷ ಅಥವಾ ಆಜೀವ ಕಾರಾವಾಸ ಶಿಕ್ಷೆ ಮತ್ತು ರೂ.1 ಲಕ್ಷ ಜುಲ್ಮಾನೆಯಿಂದ ದಂಡಿಸಬಹುದು.

ಯಾವುದೇ ವ್ಯಕ್ತಿಯು ಇನ್ನೊಬ್ಬರ ಮೇಲೆ ಆ್ಯಸಿಡ್ ಪ್ರಯೋಗಿಸಿದರೆ ಅವನಿಗೆ ಶಾಶ್ವತ ಅಥವಾ ಅಂಶಿಕ ಊನತ್ವ ಅಥವಾ ಸುಟ್ಟ ಗಾಯ ಉಂಟು ಮಾಡಲು ಕಾರಣರಾದರೆ ಅಂತಹ ಆರೋಪಿಗೆ 5 ವರ್ಷ ಕಾರಾವಾಸ ಶಿಕ್ಷೆ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

2. ಯಾವುದೇ ಕಣ್ಣಿನ ದೃಷ್ಟಿ ಕಳೆದುಕೊಳ್ಳುವ, ಯಾವುದೇ ಕಿವಿಯ ಶ್ರವಣ ಶಕ್ತಿ ಕಳೆದುಕೊಳ್ಳುವ, ದೇಹದ ಯಾವುದೇ ಅಂಗವನ್ನು ಬೇರ್ಪಡಿಸುವ. ದೇಹದ ಯಾವುದಾದರೂ ಅಂಗದ ಶಕ್ತಿಯನ್ನು ನಾಶ ಪಡಿಸುವ, ತಲೆ ಅಥವಾ ಮುಖವನ್ನು ಶಾಶ್ವತ ರೀತಿಯಲ್ಲಿ ವಿರೂಪಗೊಳಿಸುವ, ಮೂಳೆ ಅಥವಾ ಹಲ್ಲುಗಳನ್ನು ಮುರಿಯುವ, 20 ದಿನಗಳ ವರೆಗೆ ಗಾಯಗೊಂಡ ವ್ಯಕ್ತಿ ದೈನಂದಿನ ಕಾರ್ಯ ಮಾಡದಂತೆ ಅಶಕ್ತಗೊಳಿಸುವ ನೋವು ಇವುಗಳನ್ನು 'ತೀವ್ರ ಸ್ವರೂಪದ ಗಾಯ'ವೆಂದು ಪರಿಗಣಿಸಲಾಗುವುದು.

3. ಮಾನವ ಜೀವಕ್ಕೆ ಅಪಾಯಕಾರಿಯಾದ ಯಾವುದೇ ವಸ್ತುವಿನಿಂದ ಯಾವನೇ ವ್ಯಕ್ತಿಗೆ ತೀವ್ರ ಗಾಯ ಉಂಟುಮಾಡುವ ವ್ಯಕ್ತಿಗೆ ಜೀವಾವಧಿ ಅಥವಾ 10 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

4. ಸಾರ್ವಜನಿಕ ನೌಕರನು ತನ್ನ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಆ ಕರ್ತವ್ಯ ಪಾಲನೆಯಿಂದ ತಪ್ಪಿಸಲು ಅವನಿಗೆ ಗಾಯವನ್ನುಂಟು ಮಾಡುವ ವ್ಯಕ್ತಿಗೆ 3 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

**ಆಕ್ರಮ ಪ್ರತಿಬಂಧನ:–** ಯಾವುದೇ ದಿಕ್ಕಿನಲ್ಲಿ ಚಲಿಸಲು ಆಧಿಕಾರ ಹೊಂದಿರುವ ವ್ಯಕ್ತಿಯನ್ನು ಆ ದಿಕ್ಕಿನಲ್ಲಿ ಹೋಗದಂತೆ ಅಡ್ಡಿಪಡಿಸುವುದು 'ಆಕ್ರಮ ಪ್ರತಿಬಂಧನ'ವಾಗಿದೆ.

**ಆಕ್ರಮ ಬಂಧನ:–** ಯಾವುದೇ ವ್ಯಕ್ತಿಯನ್ನು ಆಕ್ರಮವಾಗಿ ಬಂಧಿಸಿಡುವುದು ಅಥವಾ ನಿರ್ದಿಷ್ಟ ಸ್ಥಳವನ್ನು ಬಿಟ್ಟು ಕದಲದಂತೆ ಆಕ್ರಮವಾಗಿ ಪ್ರತಿಬಂಧಿಸುವುದು 'ಆಕ್ರಮ ಬಂಧನ'ವಾಗಿದೆ. ಹತ್ತು ದಿನಗಳ ಕಾಲ ಆಕ್ರಮ ಬಂಧನದಲ್ಲಿಟ್ಟರೆ ಆಂತಹ ಆರೋಪಿಗೆ 3 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

**ಅಪರಾಧಿಕ ಬಲಪ್ರಯೋಗ:** ಯಾವುದೇ ಒಂದು ಅಪಾಧವನ್ನೆಸಗಲು ಓರ್ವ ವ್ಯಕ್ತಿಯ ಅನುಮತಿ ಇಲ್ಲದೆ ಬಲ ಪ್ರಯೋಗದ ಮೂಲಕ ಆತನಿಗೆ ಭಯ ಅಥವಾ ಕಿರುಕುಳ ಉಂಟುಮಾಡುವುದು 'ಅಪರಾಧಿಕ ಬಲ ಪ್ರಯೋಗ'ವಾಗಿದೆ.

**ವ್ಯಪಹರಣ:–**

ಅ. 16 ವರ್ಷದೊಳಗಿನ ಹುಡುಗನನ್ನು ಅಥವಾ 18 ವರ್ಷದೊಳಗಿನ ಹುಡುಗಿಯನ್ನು ಅಥವಾ ಅಸ್ವಸ್ಥ ಚಿತ್ತದ ವ್ಯಕ್ತಿಯನ್ನು ಅವರ ಪೋಷಕರ ಅನುಮತಿಯಿಲ್ಲದೆ ಕರೆದುಕೊಂಡು ಹೋದರೆ ಅಂತಹ ವ್ಯಕ್ತಿಯನ್ನು ವ್ಯಪಹರಿಸಿದ್ದಾನೆ ಎಂದು ಹೇಳಬಹುದು. ಇಂತಹ ಅಪರಾಧಕ್ಕೆ 7 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

ಆ. ಅಪ್ರಾಪ್ತ ವಯಸ್ಕನನ್ನು ಭಿಕ್ಷೆ ಬೇಡುವ ಉದ್ದೇಶಕ್ಕೆ ಉಪಯೋಗಿಸಲು ವ್ಯಪಹರಿಸಿದರೆ ಮತ್ತು ಬಳಸಿಕೊಂಡರೆ ಅಂತಹ ಅಪರಾಧಕ್ಕೆ 10 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಯಿಂದ ದಂಡಿಸಬಹುದು.

ಇ. ಕೊಲೆ ಮಾಡುವ ಉದ್ದೇಶದಿಂದ ಅಪಹರಣ ಅಥವಾ ವ್ಯವಹರಣ ಮಾಡಿದ ಆರೋಪಿಗೆ ಜೀವಾವಧಿ ಅಥವಾ10 ವರ್ಷ ಕಠಿಣ ಶಿಕ್ಷೆ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

ಈ. ಕಾನೂನು ಬಾಹಿರವಾಗಿ ಯಾವುದೇ ಮಹಿಳೆಯನ್ನು ಬಲಾತ್ಕಾರಕ್ಕೆ ಪ್ರೇರೇಪಿಸುವ ಉದ್ದೇಶದಿಂದ ಅವಳ ಇಚ್ಛೆಗೆ ವಿರುದ್ಧವಾಗಿ ಅಪಹರಿಸಿದ ಅಪರಾಧಿಗೆ 10 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

ಉ. ಕಾನೂನು ಬಾಹಿರ ಸಂಭೋಗ ನಡೆಸಲು ಬೇರೆ ರಾಷ್ಟ್ರದಿಂದ ಹುಡುಗಿಯನ್ನು ಆಮದು ಮಾಡುವ ಅಪರಾಧಿಗೆ 10 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

ಊ. ಯಾವುದೇ ವ್ಯಕ್ತಿಯನ್ನು ಗುಲಾಮಗಿರಿಗೆ ಗುರಿ ಮಾಡಲು ಅಪಹರಿಸುವ ಆರೋಪಿಗೆ 10 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

ಎ. ವ್ಯಪಹರಿಸಿದ ವ್ಯಕ್ತಿಯನ್ನು ಆಕ್ರಮವಾಗಿ ಬಚ್ಚಿಡುವ ಆರೋಪಿಗೆ 10 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

ಏ. 10 ವರ್ಷ ಒಳಗಿನ ಮಗುವಿನ ದೇಹದ ಮೇಲಿನ ಚರ ಸ್ವತ್ತನ್ನ ಕಳವು ಮಾಡುವ ಉದ್ದೇಶದಿಂದ ವ್ಯವಹರಿಸುವ ಆರೋಪಿಗೆ 7 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

ಐ. ಯಾವುದೇ ವ್ಯಕ್ತಿಯನ್ನು ಅವನ ಇಚ್ಚಿಗೆ ವಿರುದ್ಧ ಗುಲಾಮನಂತೆ ಕೊಳ್ಳುವ ಆರೋಪಿಗೆ 7 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

**ಲೈಂಗಿಕ ಪೀಡನೆ/ಉಪದ್ರವ**

ಮೈ ಸ್ಪರ್ಶಿಸುವುದು ಮತ್ತು ಸ್ಪಷ್ಟ ಲೈಂಗಿಕ ಪ್ರಸ್ತಾಪ ಮಾಡುವುದು ಇಂತಹ ಅಪರಾಧ ಮಾಡುವ ವ್ಯಕ್ತಿಗೆ 5 ವರ್ಷ ಕಾರಾಗ್ರಹವಾಸ ಶಿಕ್ಷೆ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಗಳಿಂದ ದಂಡಿಸಬಹುದು.

ಒತ್ತಾಯದಿಂದ ನೀಲಿ ಚಿತ್ರ ತೋರಿಸುವುದು, ಇತರ ಯಾವುದೇ ಸ್ವಾಗತಕಾರವಲ್ಲದ ದೈಹಿಕ, ಬಾಯಿ ಮಾತಿನ ಲೈಂಗಿಕ ವರ್ತನೆಯಂತಹ ಅಪರಾಧ ಮಾಡುವ ವ್ಯಕ್ತಿಗೆ 1 ವರ್ಷ ಕಾರಾಗ್ರಹವಾಸ ಶಿಕ್ಷೆ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆಗಳಿಂದ ದಂಡಿಸಬಹುದು.

ಸಾರ್ವಜನಿಕ ಸ್ಥಳದಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಲು ಅಪರಾಧಿಕ ಬಲವಂತ ಮಾಡುವ ಅಪರಾಧಕ್ಕೆ 3 ವರ್ಷಗಳಿಂದ 7 ವರ್ಷಗಳ ವರೆಗೆ ಕಾರಾಗ್ರಹವಾಸ ಶಿಕ್ಷೆ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

ಯಾರೂ ತನ್ನನ್ನು ಗಮನಿಸುತ್ತಿಲ್ಲವೆಂಬ ವಿಶ್ವಾಸದಿಂದ ಮಹಿಳೆಯು ಖಾಸಗಿತನದ ಕೆಲಸದಲ್ಲಿ ನಿರತಳಾಗಿರುವುದನ್ನು ಇಣುಕಿ ನೋಡುವ ಅಥವಾ ಆ ಕಾರ್ಯದ ಫೋಟೋ ತೆಗೆಯುವ ಅಪರಾಧ ಮಾಡಿದವನಿಗೆ, ಮೊದಲ ಅಪರಾಧಕ್ಕೆ 1 ರಿಂದ 3 ವರ್ಷ ಹಾಗೂ ಎರಡನೆ ಬಾರಿ ಮಾಡುವ ಅಪರಾಧಕ್ಕೆ 3 ವರ್ಷಗಳಿಂದ 7 ವರ್ಷಗಳ ವರೆಗೆ ಕಾರಾಗ್ರಹವಾಸ ಶಿಕ್ಷೆ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

ಅಪರಾಧ ಪತ್ತೆ ಹಚ್ಚಲು ನಿಯುಕ್ತಿಗೊಳಿಸಲ್ಪಡದೆ, ಕಾನೂನು ರೀತ್ಯಾ ಅವಶ್ಯಕತೆ ಇಲ್ಲದೆ ಯಾವುದೇ ವ್ಯಕ್ತಿಯನ್ನು ಹಿಂಬಾಲಿಸುವುದು ಅಥವಾ ಆ ವ್ಯಕ್ತಿಯ ಇಂಟರ್‌ನೆಟ್, ಇಮೇಲ್ ತಪಾಸಣೆ ಮಾಡುವುದು ಅಥವಾ ಆ ವ್ಯಕ್ತಿ ಹೆದರಿಕೆಯಿಂದ ಮನಸ್ಸಿನ ಶಾಂತಿ ಕಳೆದುಕೊಳ್ಳಲು ಕಾರಣರಾದ ಆರೋಪಿಯು ಕದ್ದು ನಡೆಯ ಅಪರಾಧ ಎಸಗುತ್ತಾನೆ. ಈ ಅಪರಾಧಕ್ಕೆ 1 ರಿಂದ 3 ವರ್ಷಗಳ ವರೆಗೆ ಕಾರಾವಾಸ ಶಿಕ್ಷೆ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

**ದುರ್ವ್ಯಾಪಾರ:**

ಹಣ ಅಥವಾ ಲಾಭದ ಆಶೆಯನ್ನು ತೋರಿಸಿ ಆ ವ್ಯಕ್ತಿಯ ಒಪ್ಪಿಗೆ ಪಡೆಯಲು ಶೋಷಣೆಗೊಳಪಡಿಸಲು (ಅಂದರೆ ವೇಶ್ಯಾವೃತ್ತಿಗೆ ಅಥವಾ ಇತರ ನಮೂನೆಯ

ಲೈಂಗಿಕ ಶೋಷಣೆಗೆ, ಜೀತದಾಳು ಅಥವಾ ಗುಲಾಮಗಿರಿಗೆ) ಬೆದರಿಕೆಯಿಂದ, ಬಲವಂತದಿಂದ, ಅಪಹರಣದಿಂದ, ಮೋಸದಿಂದ, ಅಧಿಕಾರದ ದುರುಪಯೋಗದಿಂದ ಪ್ರೇರೇಪಿಸುವುದು, ಮನುಷ್ಯರ ನೇಮಕಾತಿ, ಸಾಗಣೆ, ಆಶ್ರಯ, ವರ್ಗಾವಣೆ ಮತ್ತು ಸ್ವೀಕರಿಸುವ ಅಪರಾಧಕ್ಕೆ ಮನುಷ್ಯರ ದುರ್ವ್ಯಾಪಾರ ಎಂದು ಹೇಳಬಹುದು. ಈ ಅಪರಾಧಕ್ಕೆ 7 ರಿಂದ 10 ವರ್ಷಗಳ ವರೆಗೆ ಕಠಿಣ ಕಾರಾಗ್ರಹವಾಸ ಶಿಕ್ಷೆ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

ಒಬ್ಬರಿಗಿಂತ ಹೆಚ್ಚು ಜನರ ದುರ್ವ್ಯಾಪಾರ ನಡೆದಿದ್ದರೆ 10 ವರ್ಷಗಳ ವರೆಗೆ ಅಥವಾ ಅಜೀವ ಕಠಿಣ ಕಾರಾಗ್ರಹವಾಸ ಶಿಕ್ಷೆ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

ಅಪ್ರಾಪ್ತ ವಯಸ್ಕನ ದುರ್ವ್ಯಾಪಾರ ಅಪರಾಧವೆಸಗಿದ ಅಪರಾಧಿಗೆ 10 ವರ್ಷಗಳಿಂದ ಅಜೀವ ಕಠಿಣ ಕಾರಾವಾಸ ಶಿಕ್ಷೆಯಿಂದ ದಂಡಿಸಬಹುದು

ಸಾರ್ವಜನಿಕ ನೌಕರ ಅಥವಾ ಪೋಲೀಸ್ ಅಧಿಕಾರಿಯು ಅಪ್ರಾಪ್ತ ವಯಸ್ಕನ ದುರ್ವ್ಯಾಪಾರದಲ್ಲಿ ಭಾಗಿಯಾಗಿದ್ದರೆ, ಅಂತಹ ಅಪರಾಧಿಗೆ ಅಜೀವ ಅಥವಾ ಅವನ ಉಳಿದ ಜೀವನಕ್ಕೆ ಕಾರಾವಾಸ ಶಿಕ್ಷೆಯಿಂದ ದಂಡಿಸಬಹುದು

ದುರ್ವ್ಯಾಪಾರದಲ್ಲಿ ಸಿಲುಕಿದ್ದಾನೆಂದು ತಿಳಿದೂ ಅಪ್ರಾಪ್ತ ವಯಸ್ಕನನ್ನು ಯಾವುದೇ ರೀತಿಯ ಕೂಲಿ ಕೆಲಸಕ್ಕೆ ಉಪಯೋಗಿಸಿದಲ್ಲಿ ಈ ಅಪರಾಧಕ್ಕೆ 5 ವರ್ಷದಿಂದ 7 ವರ್ಷ ಕಾರಾಗ್ರಹವಾಸ ಶಿಕ್ಷೆ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

## ಲೈಂಗಿಕ ಆಕ್ರಮಣ

1. ಲೈಂಗಿಕ ಆಕ್ರಮಣ ಅಪರಾಧ ಎಸಗುವ ವ್ಯಕ್ತಿಗೆ 7 ವರ್ಷಗಳಿಗೆ ಕಡಿಮೆಯಿಲ್ಲದ ಮತ್ತು ಅಜೀವ ಶಿಕ್ಷೆಯಿಂದ ವಿಸ್ತರಿಸಬಹುದಾದ ಕಠಿಣ ಕಾರಾಗ್ರಹವಾಸ ಶಿಕ್ಷೆ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

2. ಪೋಲಿಸ್ ಅಧಿಕಾರಿ, ಸಾರ್ವಜನಿಕ ನೌಕರ, ಸೇನಾ ಪಡೆಯ ಯೋಧ, ಬಂಧಿಖಾನೆಯ ಅಧಿಕಾರಿ, ರಿಮಾಂಡ್ ಹೋಂ ಅಧಿಕಾರಿ, ಆಸ್ಪತ್ರೆಯ ಆಡಳಿತಾಧಿಕಾರಿ ಅಥವಾ ಶಿಬ್ಬಂಧಿ, ಸಂಬಂಧಿ ಅಥವಾ ರಕ್ಷಕ ಅಥವಾ ಶಿಕ್ಷಕ ಇಂತಹ ವ್ಯಕ್ತಿಗಳು ಗರ್ಭಿಣಿ ಹೆಂಗಸಿನ ಮೇಲೆ, 18 ವರ್ಷಕ್ಕಿಂತ ಕೆಳಗಿನ ವ್ಯಕ್ತಿಯ ಮೇಲೆ, ಒಪ್ಪಿಗೆ ಕೊಡಲು ಸಾಧ್ಯವಿಲ್ಲದ ವ್ಯಕ್ತಿಯ ಮೇಲೆ, ಮಾನಸಿಕ ಅಥವಾ ದೈಹಿಕ ಊನತ್ವವಿರುವ ವ್ಯಕ್ತಿ ಇವರುಗಳ ಮೇಲೆ ಲೈಂಗಿಕ

ಆಕ್ರಮಣ ನಡೆಸಿದಲ್ಲಿ ಮತ್ತು ಆ ಕೃತ್ಯವೆಸಗುವಾಗ ಅವರ ದೇಹಕ್ಕೆ ತೀವ್ರತರದ ಗಾಯ ಅಥವಾ ಅವರ ಪ್ರಾಣಕ್ಕೆ ಅಪಾಯ ತಂದೊಡ್ಡಿದಲ್ಲಿ ಅಂತಹ ಅಪರಾಧಕ್ಕೆ 10 ವರ್ಷಗಳಿಂದ ಅಜೀವ ಕಾರಾಗ್ರಹವಾಸ ಶಿಕ್ಷೆ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

3. ಲೈಂಗಿಕ ಆಕ್ರಮಣಕ್ಕೊಳಗಾದ ವ್ಯಕ್ತಿಯು ಆ ಕೃತ್ಯವನ್ನೆಸಗುವಾಗ ಆದ ಗಾಯಗಳಿಂದಾಗಿ ಮೃತಪಟ್ಟರೆ ಅಥವಾ ಜೀವದಿಂದಿದ್ದೂ ಜೀವದ ಅಂಗಗಳು ಕೆಲಸ ಮಾಡುವ ಸ್ಥಿತಿಯಲ್ಲಿಲ್ಲದಿದ್ದರೆ ಅಂತಹ ಕೃತ್ಯವೆಸಗಿದ ಅಪರಾಧಿಗೆ 20 ವರ್ಷಗಳ ಕಠಿಣ ಕಾರಾಗ್ರಹವಾಸ ಅಥವಾ ಅಜೀವ ಕಾರಾಗ್ರಹವಾಸ ಅಥವಾ ಗಲ್ಲು ಶಿಕ್ಷೆಯಿಂದ ದಂಡಿಸಬಹುದು.

4. ಅಧಿಕಾರಸ್ಥನಾದವನು ಅಥವಾ ಸಾರ್ವಜನಿಕ ನೌಕರ ಅಥವಾ ಜೈಲಿನ ಅಧಿಕಾರಿ ಅಥವಾ ಆಸ್ಪತ್ರೆಯ ಆಡತಾಧಿಕಾರಿ / ಶಿಬ್ಬಂದಿಯು ಅವರ ಅಧಿಕಾರವನ್ನು ದುರುಪಯೋಗಪಡಿಸಿ ಅವರ ವಶದಲ್ಲಿರುವ ವ್ಯಕ್ತಿಯ ಮೇಲೆ ಲೈಂಗಿಕ ಕ್ರಿಯೆ ನಡೆಸಿದರೆ ಆ ಕ್ರಿಯೆ ಲೈಂಗಿಕ ಆಕ್ರಮಣವಾಗದಿದ್ದಲ್ಲಿ ಅಂತಹ ಅಪರಾಧಕ್ಕೆ 5 ವರ್ಷದಿಂದ 10 ವರ್ಷ ಕಾರಾವಾಸ ಶಿಕ್ಷೆ ಮತ್ತು ಜುಲ್ಮಾನೆಯಿಂದ ದಂಡಿಸಬಹುದು.

5. ಜನರ ಗುಂಪು/ಕೂಟವು ಏಕೋದ್ದೇಶದಿಂದ ಲೈಂಗಿಕ ಆಕ್ರಮಣ ನಡೆಸಿದಲ್ಲಿ ಅಂತಹ ಕೂಟದ ಎಲ್ಲಾ ಸದಸ್ಯರಿಗೂ 20 ವರ್ಷಗಳ ಅಜೀವ ಕಾರಾಗ್ರಹವಾಸ ಮತ್ತು ಆ ಕೃತ್ಯದಿಂದ ಬಲಿಪಶು ಆದ ವ್ಯಕ್ತಿಯ ಪುನರ್ವಸತಿ ಮತ್ತು ವೈದ್ಯಕೀಯ ಖರ್ಚಿಗೆ ಅಗತ್ಯವಿರುವ ಹಣ ಕೊಡಲು ಅಪರಾಧಿ ಬದ್ದರಾಗಿದ್ದಾರೆ.

**ಸ್ವತ್ತಿನ ವಿರುದ್ಧ ಅಪರಾಧಗಳು:–**

**ಕಳವು:–**

1. ಬೇರೆಯವರ ಸ್ವಾಧೀನದಲ್ಲಿರುವ ಚರ ವಸ್ತುವನ್ನು ಅಪ್ರಾಮಾಣಿಕತೆಯಿಂದ ಪಡೆಯುವ ಉದ್ದೇಶದಿಂದ ಭೂಮಿಯ ಸಂಪರ್ಕದಿಂದ ಬೇರ್ಪಡಿಸಿದರೆ ಆ ವ್ಯಕ್ತಿಯು ಕಳವು ಮಾಡಿದ್ದಾನೆಂದು ಹೇಳಬಹುದು. ಈ ಅಪರಾಧಕ್ಕೆ 3 ವರ್ಷ ಕಾರಾಗ್ರಹಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

2. ಮಾಲೀಕನ ಸ್ವಾಧೀನದಲ್ಲಿರುವ ಸ್ವತ್ತನ್ನು ಅವನ ಸೇವಕನು ಕಳವು ಮಾಡಿದರೆ 7 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

3. ಕಳವು ಪ್ರಯತ್ನದಲ್ಲಿ ಸ್ವತ್ತನ್ನು ಇಟ್ಟುಕೊಳ್ಳಲು ಮರಣ, ಗಾಯದ ಅಥವಾ ಪ್ರತಿಬಂಧದ ಭಯ ಉಂಟು ಮಾಡಿದಲ್ಲಿ ಅಂತಹ ವ್ಯಕ್ತಿಗೆ 10 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

**ಬಲದ್ಗ್ರಹಣ:**

ಸ್ವತ್ತು, ಮೌಲ್ಯವುಳ್ಳ ಭದ್ರತೆಯನ್ನು ಕೊಡಲು ಅಪ್ರಾಮಾಣಿಕವಾಗಿ ಭಯವನ್ನುಂಟು ಮಾಡಿ ಅಥವಾ ಬೆದರಿಕೆಗೆ ಗುರಿಮಾಡಿ ಪ್ರೇರೆಪಿಸುವುದನ್ನು 'ಬಲದ್ಗ್ರಹಣ' ಎಂದು ಕರೆಯುತ್ತಾರೆ.

ಮರಣ ಅಥವಾ ತೀವ್ರ ಗಾಯವನ್ನುಂಟು ಮಾಡುವ/ಮಾಡಿ ಬಲದ್ಗ್ರಹಣ ಮಾಡುವ ಪ್ರಯತ್ನ ಮಾಡಿದರೆ 10 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

**ಸುಲಿಗೆ:–**

ಕಳವು ಸ್ವತ್ತನ್ನು ಕೊಂಡು ಹೋಗುವ ಸಂಧರ್ಭದಲ್ಲಿ ಯಾವನೇ ವ್ಯಕ್ತಿಗೆ ಮರಣ ಅಥವಾ ಆಕ್ರಮ ಪ್ರತಿಬಂಧದ ಭಯವನ್ನುಂಟು ಮಾಡಲು ಪ್ರಯತ್ನಿಸಿದರೆ ಈ 'ಕಳವು ಸುಲಿಗೆ'ಯೆನಿಸುತ್ತದೆ

**ದರೋಡೆ:–**

ಸುಲಿಗೆ ಮಾಡಲು ಐದು ಅಥವಾ ಐದಕ್ಕಿಂತ ಹೆಚ್ಚಿನ ಜನರು ಹಾಜರಿದ್ದು, ಆ ಪ್ರಕಾರ ಸುಲಿಗೆ ಮಾಡಲು ಸಹಕರಿಸುವ ಅಥವಾ ಪ್ರಯತ್ನಿಸುವ ಎಲ್ಲಾ ವ್ಯಕ್ತಿಗಳು ದರೋಡೆ ಮಾಡಿದ್ದಾರೆ ಎಂದು ಹೇಳಬಹುದು.

ಮಾರಕಾಯುಧಗಳಿಂದ ಸುಸಜ್ಜಿತರಾಗಿ ದರೋಡೆ ಮಾಡಲು ಪ್ರಯತ್ನ ಮಾಡಿದವರಿಗೆ 7 ವರ್ಷ ಕಾರಾಗ್ರಹವಾಸ ಶಿಕ್ಷೆಯಿಂದ ದಂಡಿಸಬಹುದು.

**ಸ್ವತ್ತಿನ ಅಪ್ರಾಮಾಣಿಕ ದುರುಪಯೋಗ:–**

ಅಪ್ರಾಮಾಣಿಕವಾಗಿ ಅಥವಾ ಸ್ವಂತ ಉಪಯೋಗಕ್ಕಾಗಿ ಯಾವುದೇ ಚರ ಸ್ವತ್ತನ್ನು ದುರುಪಯೋಗ ಪಡಿಸುವುದು ಅಥವಾ ಪರಿವರ್ತಿಸುವುದು ಅಪರಾಧವಾಗಿದೆ.

**ನಂಬಿಕೆ ದ್ರೋಹ:–**

ಸ್ವತ್ತಿನ ಮೇಲೆ ಅಧಿಕಾರ ವಹಿಸಿಕೊಡಲಾದ ವ್ಯಕ್ತಿಯು ಕಾನೂನು ಸಮ್ಮತ ಶರತ್ತನ್ನು ಉಲ್ಲಂಘಿಸಿ ಸ್ವತ್ತನ್ನು ಅಪ್ರಮಾಣಿಕವಾಗಿ ವಿಲೆವಾರಿ ಮಾಡುವುದು ಅಥವಾ ಸ್ವಂತಕ್ಕೆ ಬಳಸಿಕೊಳ್ಳುವುದು ಅಪರಾಧಿಕ ನಂಬಿಕೆ ದ್ರೋಹವಾಗಿದೆ.

ಉದಾ:– ಮರಣ ಶಾಸನದ ನಿರ್ವಾಹಕನಾದವನು ಮೃತ ವ್ಯಕ್ತಿಯ ಇಚ್ಛೆಯಂತೆ ಸ್ವತ್ತಿನ ವಿಲೇವಾರಿ ಮಾಡದೆ ಅದನ್ನು ತನ್ನ ಸ್ವಂತಕ್ಕೆ ಉಪಯೋಗಿಸುವುದು ನಂಬಿಕೆ ದ್ರೋಹವಾಗಿದೆ.

**ವಂಚನೆ:–**

ಮೋಸದಿಂದ ಅಥವಾ ಅಪ್ರಾಮಾಣಿಕವಾಗಿ ಕಪಟದ ಮೂಲಕ ಯಾವುದೇ ವ್ಯಕ್ತಿಯ ದೇಹ ಮತ್ತು ಸ್ವತ್ತಿಗೆ ನಷ್ಟ ಉಂಟು ಮಾಡುವುದು ವಂಚನೆಯಾಗಿದೆ.

ಉದಾ:– ಒಂದು ಆಸ್ತಿಯನ್ನು ವಿಕ್ರಯಿಸಿ ಅದರ ಸ್ವಾಧೀನತೆಯನ್ನು ನೀಡಿದ ನಂತರ ಅ ವಿಷಯ ಬಹಿರಂಗಪಡಿಸದೆ ಆ ಆಸ್ತಿಯನ್ನು ಇನ್ನೊಬ್ಬನಿಗೆ ವಿಕ್ರಯಿಸಿ ಹಣ ಪಡೆಯುವುದು ವಂಚನೆಯಾಗಿದೆ.

**ಕೇಡು:–**

ನಷ್ಟ ಉಂಟು ಮಾಡುವ ಉದ್ದೇಶದಿಂದ ಸ್ವತ್ತನ್ನು ನಾಶಗೊಳಿಸುವುದು ಅಥವಾ ಸ್ವತ್ತಿನ ಸ್ಥಿತಿಯಲ್ಲಿ ಬದಲಾವಣೆ ಮಾಡುವುದು ಕೇಡು ಎನಿಸುತ್ತದೆ.

ಉದಾ:– ಅ. ಇನ್ನೊಬ್ಬನಿಗೆ ಸೇರಿದ ಶೀತಲ ಗೃಹದೊಳಗೆ ನೀರು ಹರಿಸಿ ಮಂಜುಗಡ್ಡೆ ಕರಗುವಂತೆ ಮಾಡುವುದು.

ಆ. ಸಾರ್ವಜನಿಕ ಪ್ರಾಧಿಕಾರ ಸ್ಥಾಪಿಸಿದ ಭೂಮಿಯ ಗುರುತು ಕದಲಿಸುವುದು, ನಾಶಪಡಿಸುವುದು.

ಇ. ವಾಸಗೃಹ ನಾಶ ಮಾಡುವ ಉದ್ದೇಶದಿಂದ ಅಗ್ನಿ ಅಥವಾ ಸ್ಫೋಟಕ ಉಪಯೋಗಿಸುವುದು.

**ಅಪರಾಧಿಕ ಅತಿಕ್ರಮಣ:–**

ಕಾನೂನುಬದ್ಧವಾಗಿ ಬೇರೆ ವ್ಯಕ್ತಿಯ ಸ್ವಾಧೀನದಲ್ಲಿರುವ ಸ್ವತ್ತಿನೊಳಗೆ ಪ್ರವೇಶ ಮಾಡಿ, ಕಾನೂನುಬಾಹಿರವಾಗಿ ಅಲ್ಲಿಯೇ ಉಳಿದು ಅವನಿಗೆ ಹೆದರಿಸಿ, ಕಿರುಕುಳ ನೀಡುವ ಉದ್ದೇಶವಿದ್ದಲ್ಲಿ ಅದನ್ನು 'ಅಪರಾಧಿಕ ಅತಿಕ್ರಮಣ' ಎನ್ನಬಹುದು

**ಮನೆಗೆ ಕನ್ನ ಹಾಕುವುದು:–**

ಅಪರಾಧ ಮಾಡುವ ಉದ್ದೇಶದಿಂದ ಗೋಡೆಯಲ್ಲಿ ಕಿಂಡಿ ಕೊರೆದು, ಗೃಹ ಅಥವಾ ಗೋಡೆಯನ್ನು ಏರಿ ಇಳಿದು ಅಥವಾ ಮನೆಯ ತೆರೆದ ದಾರಿಯಿಂದ ಅಥವಾ ಮನೆಯ ಬೀಗ ತೆಗೆದು ಅಥವಾ ಅಪರಾಧಿಕ ಬಲ ಪ್ರಯೋಗದಿಂದ ಗೃಹ ಪ್ರವೇಶಿಸುವುದು 'ಮನೆಗೆ ಕನ್ನ ಹಾಕುವುದು' ಎಂದು ಹೇಳಲಾಗುತ್ತದೆ.

**ಖೋಟಾ ದಸ್ತಾವೇಜಿನ ತಯಾರಿಕೆ:–**

ಅಪ್ರಾಮಾಣಿಕವಾಗಿ ಮೋಸದಿಂದ ದಸ್ತಾವೇಜನ್ನು ತಯಾರಿಸುವುದು ಅಥವಾ ದಸ್ತಾವೇಜಿನ ಪ್ರಮುಖ ಭಾಗಗಳನ್ನು ಕಾನೂನುಬದ್ಧ ಅಧಿಕಾರ ಇಲ್ಲದೆ ನಾಶಗೊಳಿಸುವುದು ಅಥವಾ ವ್ಯಕ್ತಿಯು ಅಮಲಿನಲ್ಲಿರುವ ಸಮಯದಲ್ಲಿ ದಸ್ತಾವೇಜಿಗೆ ಸಹಿ ಹಾಕುವಂತೆ ಮಾಡುವುದು ಖೋಟಾ ದಸ್ತಾವೇಜು ತಯಾರಿಸುವುದು ಎಂದು ಹೇಳಬಹುದು.

ಮರಣಶಾಸನ, ದತ್ತು ಅಧಿಕಾರ ಪತ್ರ ಅಥವಾ ಮೌಲ್ಯವುಳ್ಳ ಭದ್ರತಾ ಪತ್ರವನ್ನು ಮೋಸದಿಂದ ರದ್ದು ಮಾಡುವ ಅಥವಾ ನಾಶ ಪಡಿಸುವ ಅಪರಾಧಕ್ಕೆ 7 ವರ್ಷ ಕಾರಾಗೃಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

**ನಗದು ಮತ್ತು ಬ್ಯಾಂಕ್ ನೋಟುಗಳ ಖೋಟಾ ತಯಾರಿಕೆ:–**

ನಗದು ನೋಟು ಅಥವಾ ಬ್ಯಾಂಕ್ ನೋಟುಗಳನ್ನು ಖೋಟಾ ತಯಾರಿಕೆ ಮಾಡುವುದು ಅಥವಾ ತಯಾರಿಕೆಯ ಕ್ರಿಯೆಯಲ್ಲಿ ಭಾಗವಹಿಸುವ ಅಥವಾ ಖೋಟಾ ಎಂದು ಅರಿತು ಮತ್ತೋರ್ವ ವ್ಯಕ್ತಿಗೆ ಮಾರಾಟ ಮಾಡುವ ಅಥವಾ ನಿಜವಾದುದು ಎಂದು ಬಳಸುವ ವ್ಯಕ್ತಿಗೆ ಜೀವಾವಧಿ ಕಾರಾಗ್ರಹವಾಸ ಅಥವಾ 10 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.

**ವಿವಾಹಕ್ಕೆ ಸಂಬಂಧಿಸಿದ ಅಪರಾಧಗಳು:–**

ಅ. ಮದುವೆಯಾಗದಿರುವ ಹುಡುಗಿಯನ್ನು ಕಾನೂನು ಬದ್ಧವಾಗಿ ವಿವಾಹವಾಗಿದೆ ಎಂದು ವಂಚನೆಯಿಂದ ನಂಬಿಸಿ ಆತನೊಂದಿಗೆ ವಾಸಿಸುವಂತೆ ಮಾಡುವುದು ಅಥವಾ ಲೈಂಗಿಕ ಸಂಭೋಗ ಹೊಂದುವುದು;

ಆ. ಗಂಡ ಅಥವಾ ಹೆಂಡತಿಯ ಜೀವಿತ ಕಾಲದಲ್ಲಿ ಮರು ಮದುವೆ ಆಗುವುದು;

ಇ. ಹಿಂದಿನ ಮದುವೆ ವಿಷಯ ಗುಪ್ತವಾಗಿರಿಸಿ ಮರು ಮದುವೆಯಾಗುವುದು;

ಈ. ಕಾನೂನು ಬದ್ಧ ವಿವಾಹವಾಗದೆ ಮೋಸದಿಂದ ವಿವಾಹದ ವಿಧಿಗಳನ್ನು ನೆರವೇರಿಸುವುದು;

ಉ. ಮತ್ತೋರ್ವನ ಪತ್ನಿಯೊಡನೆ ಆಕೆಯ ಗಂಡನ ಸಮ್ಮತಿ ಇಲ್ಲದೆ ಲೈಂಗಿಕ ಸಂಭೋಗ/ ವ್ಯಭಿಚಾರ ಮಾಡುವುದು.

**ಮಾನಹಾನಿ:–**

ಉಚ್ಚರಿಸಿದ ಅಥವಾ ಓದುವ ಶಬ್ದಗಳಿಂದ ಅಥವಾ ದೃಶ್ಯರೂಪಕದಿಂದ ಯಾವುದೇ ವ್ಯಕ್ತಿಯ ಖ್ಯಾತಿಗೆ ಹಾನಿ ಉಂಟುಮಾಡುವುದು 'ಮಾನಹಾನಿ' ಆಗಿದೆ.

ವಿವರಣೆ: ಸತ್ಯ ಸಂಗತಿಯನ್ನು ಸಾರ್ವಜನಿಕ ಹಿತ ದೃಷ್ಟಿಯಿಂದ ಪ್ರಕಟಿಸುವುದು, ಸಾರ್ವಜನಿಕ ನೌಕರನ ಹಾಳು ವರ್ತನೆಯನ್ನು ಸದ್ಭಾವನೆಯಿಂದ ಪ್ರಕಟಿಸುವುದು, ಸಾರ್ವಜನಿಕ ಪ್ರಶ್ನೆಗೆ ಸಂಬಂಧಿಸಿದ ವಿಷಯವನ್ನು ಸದ್ಭಾವನೆಯಿಂದ ವ್ಯಕ್ತಗೊಳಿಸುವುದು ಮಾನಹಾನಿ ಎಂದೆನಿಸುವುದಿಲ್ಲ.

**ಭಯೋತ್ಪಾದನೆ:–**

ಕಾನೂನು ಸಮ್ಮತವಾಗಿ ಮಾಡಲು ಹಕ್ಕು ಇರುವ ಕ್ರತ್ಯವನ್ನು ಮಾಡದ ಹಾಗೆ ಅಥವಾ ಕಾನೂನು ಸಮ್ಮತವಾಗಿ ಮಾಡಲು ಹಕ್ಕಿಲ್ಲದ ಕೃತ್ಯವನ್ನು ಮಾಡುವಂತೆ ಬೆದರಿಕೆಯೊಡ್ಡಿ ಆ ವ್ಯಕ್ತಿಯ ದೇಹಕ್ಕೆ ಅಥವಾ ಸ್ವತ್ತಿಗೆ ಹಾನಿಯುಂಟು ಮಾಡುವುದು ಭಯೋತ್ಪಾದನೆಯಾಗಿದೆ.

**ಶಾಂತಿಭಂಗ:**

ಅಪರಾಧ ಮಾಡಲೆಂಬ ಉದ್ದೇಶದಿಂದ ಯಾವುದೇ ವ್ಯಕ್ತಿಗೆ ಅವಮಾನ ಮಾಡಿ ಆ ಮೂಲಕ ಅವನಿಗೆ ಆದ ಉದ್ರೇಕದಿಂದ ಶಾಂತಿಭಂಗ ಆಗಲು ಕಾರಣವಾದ ವ್ಯಕ್ತಿಗೆ 7 ವರ್ಷ ಕಾರಾಗ್ರಹ ಅಥವಾ ಜುಲ್ಮಾನೆಯಿಂದ ದಂಡಿಸಬಹುದು.